ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ

ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ

ಪ್ರೌಢ ಪ್ರಬಂಧ

ಸಂಶೋಧಕರುಃ

ಜಗದೀಶ ಮಠದ

ಮಾರ್ಗದರ್ಶಕರುಃ

ಡಾ|| ಪುರುಷೋತ್ತಮ ಬಿಳಿಮಲೆ

ಜಾನಪದ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ -೫೮೩ ೨೨೧

೧೯೯೫.

ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ

ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ

ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ

ಪ್ರೌಢ ಪ್ರಬಂಧ

ಸಂಶೋಧಕರು:

ಜಗದೀಶ ಮಠದ

ಮಾರ್ಗದರ್ಶಕರು:

ಡಾ|| ಪುರುಷೋತ್ತಮ ಬಿಳಿಮಲೆ

ಜಾನಪದ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ -೫೮೩ ೨೭೧

೧೯೯೫.

ಸಂಶೋಧಕರ ಪ್ರಮಾಣ ಪತ್ರ

'' ಕೃಷಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ '' ಎಂಬ ಶೀರ್ಷಿಕೆಯು ಈ ಪ್ರಬಂಧವನ್ನು ಎಂ·ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಒಪ್ಪಿಸಲು ಡಾ· ಪುರುಷೋತ್ತಮ ಬಿಳಿಮಲೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ· ಪ್ರಸ್ತುತ ಪ್ರಬಂಧ ಅಥವಾ ಯಾವುದೇ ಭಾಗವನ್ನು ಈ ಹಿಂದೆ ಯಾವುದೇ ಪದವಿಗಳಿಗಾಗಲಿ ಅಥವಾ ಇತರ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ·

ದಿನಾಂಕ:30·10·95

ಸ್ಥಳ : ವಿದ್ಯಾರಣ್ಯ

(ಜಗದೀಶ ಮುಠದ)

ಎಂ·ಫಿಲ್ ವಿದ್ಯಾರ್ಥಿ,

ಜಾನಪದ ವಿಭಾಗ

ಕನ್ನಡ ವಿಶ್ವವಿದ್ಯಾಲಯ

ವಿದ್ಯಾರಣ್ಯ 583 221·

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀ ಜಗದೀಶ ಮಳಿದ ಇವರು ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳ ನಾಮಗಳ ಅಧ್ಯಯನ ಎಂಬ ಶೀರ್ಷಿಕೆಯ ಈ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ.

ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಈ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೆ ಭಾಗವನ್ನು ಜಗದೀಶ ಮಳಲದ ಅವರು ಈ ಹಿಂದೆ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಬಿಳಿಮಲೆ 30/10/95

ದಿನಾಂಕ: 30-10-95
ಸ್ಥಳ : ವಿದ್ಯಾರಣ್ಯ

(ಡಾ. ಪುರುಷೋತ್ತಮ ಬಿಳಿಮಲೆ)
ಪ್ರಾಧ್ಯಾಪಕ ಮತ್ತು ಮಾರ್ಗದರ್ಶಕರು.
ಜಾನಪದ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವ ವಿದ್ಯಾಲಯ
ವಿದ್ಯಾರಣ್ಯ –583221

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಶ್ರೀ ಡಾ: ಚಂದ್ರಶೇಖರ ಕಂಬಾರ ಮತ್ತು ಮಾನ್ಯ ಕುಲಸಚಿವರಾದ ಶ್ರೀ ಡಾ: ಕೆ.ವಿ. — ನಾರಾಯಣ ಅವರಿಗೆ,

ಸಂಶೋಧನೆಗೆ ಮಾರ್ಗದರ್ಶನ ನೀಡಿದ ಪ್ರೀತಿಯ ಗುರುಗಳಾದ ಡಾ: ಪುರುಷೋತ್ತಮ ಬಿಳಿಮಲೆ ಅವರಿಗೆ,

ಅಧ್ಯಯನದ ಅವಧಿಯಲ್ಲಿ ಬೋಧನೆ ಮತ್ತು ಸಲಹೆಗಳನ್ನು ನೀಡಿದ ಕನ್ನಡ ವಿಶ್ವವಿದ್ಯಾಲಯ ಎಲ್ಲಾ ಅಧ್ಯಾಪಕ ವರ್ಗದವರಿಗೆ,

ಅಧ್ಯಯನದ ಉದ್ದಕ್ಕೂ ಒಡನಾಡಿಗಳಾಗಿದ್ದ ಗುರು, ಶಿವು, ಕೀರ್ತಿ, ಮಂಜುಳ ಮತ್ತು ಸವಿತಾ ಅವರಿಗೆ,

ಅಧ್ಯಯನಕ್ಕೆ ಪರೋಕ್ಷವಾಗಿ ಸಹಕರಿಸಿದ ತಮ್ಮನಾದ ಗುರುದೇವ, ಬಿ. ಮರಿಯಪ್ಪ, ಶ್ರೀನಿವಾಸ ಮತ್ತು ಅವರ ಮಿತ್ರರಿಗೆ,

ನನ್ನ ಇಡೀ ವಿದ್ಯಾಭ್ಯಾಸಕ್ಕೆ ಮತ್ತು ಅಧ್ಯಯನಕ್ಕೆ ಪ್ರೋತ್ಸಾಹ ನೀಡಿ ಸದಾ ನನ್ನ ಅಭ್ಯುದಯವನ್ನೇ ಬಯಸುತ್ತಿರುವ ತಂದೆಯವರಿಗೆ, ಮತ್ತು ತಂಗಿ ಎಮ್.ಲಲಿತಾಗೆ,

ಈ ಮಹಾಪ್ರಬಂಧವನ್ನು ಅಂದವಾಗಿ ಬೆರಳಚ್ಚು ಮಾಡಿಕೊಟ್ಟ ಆತ್ಮೀಯ ಸ್ನೇಹಿತನಾದ ಶ್ರೀ ರಾಜಶೇಖರ ಜಮದಂಡಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳೊಂದಿಗೆ.

ವಿದ್ಯಾರಣ್ಯ
30.10.95

ಜಗದೀಶ ಮಠದ

ಪರಿವಿಡಿ

ಭಾಗ ಒಂದು : ಪೀಠಿಕೆ

1.1 : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ 1-2

1.2 : ಅಧ್ಯಯನದ ಆಕರಗಳು 3

1.3 : ಅಧ್ಯಯನದ ವಿಧಾನ 3

ಭಾಗ ಎರಡು : ಕೈಫಿಯತ್ತುಗಳು 4-39

2.1 : ಕೈಫಿಯತ್ತುಗಳ ಪರಿಚಯ, ಅವುಗಳ ಸಂಗ್ರಹ ಕಾರ್ಯ, ಪ್ರಕಟಿತ ಕೆಲಸಗಳು ಮತ್ತು ಅವುಗಳ ನಿರೂಪಕರು. 4-19

2.2 : ಕೈಫಿಯತ್ತುಗಳ ಸಂಗ್ರಹ ಕಾರ್ಯದ ಸಾಂಸ್ಕೃತಿಕ ನೆಲೆಗಳು. 21-24

2.3 : ಸ್ಥಳನಾಮ ಕುರಿತ ಕೈಫಿಯತ್ತುಗಳ ವರ್ಗೀಕರಣ. 26-39

ಭಾಗ ಮೂರು : ಸ್ಥಳ ನಾಮಗಳ ವಿವರಣೆ 41-64

3.1 : ವ್ಯಕ್ತಿ ಪ್ರಧಾನ ಸ್ಥಳನಾಮಗಳು 41-45

3.2 : ಘಟನಾ ಪ್ರಧಾನ ಸ್ಥಳನಾಮಗಳು 46-53

3.3 : ಸ್ಥಳ ಪ್ರಧಾನ ಸ್ಥಳನಾಮಗಳು 54-61

3.4&5 : ಪ್ರಾಣಿನಾಮಗಳು + ಸಂಕೀರ್ಣ ಸ್ಥಳನಾಮಗಳು 62-64

ಭಾಗ ನಾಲ್ಕು : ಸಮಾರೋಪ

4.1 : ಸ್ಥಳನಾಮ ನಿರೂಪಣೆಯ ಸೈದ್ಧಾಂತಿಕ ನೆಲೆಗಳು. 66-70

4.2 : ಅಧ್ಯಯನದ ಮುಖ್ಯಾಂಶಗಳು. 71-73

ಭಾಗ ಐದು : ಅನುಬಂಧ

5.1 : ಸ್ಥಳನಾಮ ಕುರಿತ ಕೆಲವು ಪದ್ಯಗಳು 75-77

5.2 : ಗ್ರಂಥಋಣ. 78-79

ಭಾಗ 1 : ಹಿನ್ನೆಲೆ

1·1 : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1·2 : ಅಧ್ಯಯನದ ಆಕರಗಳು

1·3 : ಅಧ್ಯಯನದ ವಿಧಾನ

1.1 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಲೆಫ್ಟಿನೆಂಟ್ ಕರ್ನಲ್ ಮೆಕೆಂಜಿಯು 1792-1824ರ ನಡುವೆ ಟಿಪ್ಪುವಿನ ಆಳ್ವಿಕೆಗೆ ಒಳಪಟ್ಟಿದ್ದ ಕರ್ನಾಟಕದ ಪ್ರದೇಶಗಳಲ್ಲಿ ಓಡಾಡಿ ಸಾವಿರಾರು ಕೈಫಿಯತ್ತುಗಳನ್ನು ಸಂಗ್ರಹಿಸಿದ. ಮೆಕೆಂಜಿಯ ಮೂಲಕ ಮೊದಲ ಬಾರಿಗೆ ಮೌಖಿಕ ರೂಪದಲ್ಲಿದ್ದ ಜಾನಪದ ಸಾಮಗ್ರಿಗಳು ಲಿಖಿತ ರೂಪವನ್ನು ಪಡೆದುಕೊಂಡವು. ಕರ್ನಾಟಕ ಸಂಸ್ಕೃತಿಯು ಮೂಲತಃ ಪುಸ್ತಕ ಕೇಂದ್ರಿತವಾದುದು ಎಂದು ಹೇಳುವುದು ಕಷ್ಟ. ದೇಸಿ ಮತ್ತು ಮಾರ್ಗದ ಸಮನ್ವಯದ ಕುರಿತು ಪಂಪನೇ ಅಭಿಮಾನದಿಂದ ಹೇಳಿಕೊಂಡಿದ್ದಾನೆ. ನಯಸೇನನು ಜಾನಪದದ ಮಾಹಿತಿಗಳನ್ನು ತನ್ನ ಕೃತಿಯಲ್ಲಿ ವಿಪುಲವಾಗಿ ಬಳಸಿಕೊಂಡ, ವಚನಕಾರರು ಹಾಡಿದ ವಚನಗಳು ನೂರಾರು ಭಿನ್ನ ಪಠ್ಯಗಳನ್ನು ಸೃಷ್ಟಿಸಿಕೊಂಡು ಜನಮನದಲ್ಲಿ ಉಳಿದವು. ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ತೊರವೆ ರಾಮಾಯಣದ ಅನೇಕ ಸಂಧಿಗಳು ಬಯಲಾಟಗಳಲ್ಲಿ ಪ್ರಸಂಗಗಳಾಗಿ ಮಾರ್ಪಟ್ಟು ಹೊಸ ರೂಪ ತಾಳಿದವು. ನಡುಗನ್ನಡ ಪಠ್ಯಗಳೆಲ್ಲವೂ ಭಿನ್ನ ಪಾಠಗಳನ್ನು ಸೃಷ್ಟಿಸಿಕೊಂಡು ಇಂದಿಗೂ ಗ್ರಂಥ ಸಂಪಾದನಕಾರರಿಗೆ ಸಾಕಷ್ಟು ತೊಡಕನ್ನು ಉಂಟುಮಾಡಿವೆ. ಕುಮಾರರಾಮನ ಕುರಿತಾದ ಕಾವ್ಯಗಳು ನೇರವಾಗಿ ಜನರಿಂದ ಲಿಖಿತ ಪರಂಪರೆಗೆ ಬಂದವುಗಳಾಗಿವೆ. ತತ್ವ ಪದಕಾರರ ರಚನೆಗಳು ಅವುಗಳನ್ನು ಸೃಷ್ಟಿಸಿದ ಕೃತಿಕಾರನ ಹೆಸರನ್ನು ಗೌಣ ಗೊಳಿಸಿಕೊಂಡು ಅನೇಕ ಬಗೆಯ ಪಠ್ಯಗಳನ್ನು ಹೊಸದಾಗಿ ಸೃಷ್ಟಿಸಿಕೊಂಡವು. ಹೀಗೆ ಲಿಖಿತ ಅಲಿಖಿತ ರಚನೆಗಳು ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ತಮ್ಮ ಗಡಿ ರೇಖೆಗಳನ್ನು ಮೀರಿಕೊಂಡವು.

ಈ ಬಗೆಯ ರಚನೆಗಳು ಹೊಸ ವಸಾಹತು ಕಾಲಘಟ್ಟದಲ್ಲಿ ತೀವ್ರವಾದ ಆಘಾತಕ್ಕೆ ಒಳಗಾದವು. ವಸಾಹತು ಆಡಳಿತದೊಂದಿಗೆ ಭಾರತಕ್ಕೆ ಬಂದ ಕ್ರೈಸ್ತ ಮಿಷನರಿಗಳು ಅಕ್ಷರವನ್ನು ಮೊದಲ ಬಾರಿಗೆ ಅಧಿಕೃತಗೊಳಿಸಿದವು. ಲಿಖಿತ ದಾಖಲೆಗಳಿಲ್ಲದೆ ಏನೂ ಮಾಡಲಾಗದ ಸ್ಥಿತಿಯಲ್ಲಿ ಅವರಿದ್ದರು. ಹೀಗಾಗಿ ಕ್ರೈಸ್ತ ಮಿಷನರಿಗಳು ಒಟ್ಟು ಕನ್ನಡ ಸಂಸ್ಕೃತಿಯನ್ನು ದಾಖಲಿಸುವುದರ ಮೂಲಕ ಅಧಿಕೃತತೆಯನ್ನು ತರಲು ಪ್ರಯತ್ನಿಸಿದರು. ಮೂಲತಃ ಇದು ಯುರೋಪಿಯನ್ ಚಿಂತನೆಯನ್ನು ಕರ್ನಾಟಕದ ಮೇಲೆ ಹೇರುವ ಪ್ರಯತ್ನವಾಗಿತ್ತು. ಇದರ ಅಂಗವಾಗಿಯೇ ಕೈಫಿಯತ್ತುಗಳು ನಿರ್ಮಾಣಗೊಂಡವು, ಶಾಸನಗಳು ಸಂಗ್ರಹಿತವಾದವು, ಭೂಪಟಗಳು ಸಿದ್ಧಗೊಂಡವು, ನಾಣ್ಯಗಳ ಮೂಲಕ ಚರಿತ್ರೆಯ ಬರವಣಿಗೆ ಆರಂಭವಾಯಿತು. ಹೀಗೆ ವಸಾಹತು ಆಡಳಿತವು ಮಾತಿಗಿದ್ದ ಮೂಲದ ಶಕ್ತಿಯನ್ನು ನಿರಾಕರಿಸುತ್ತ, ಅಕ್ಷರಕ್ಕೆ ರಾಜಕೀಯ ಶಕ್ತಿಯನ್ನು ತಂದುಕೊಟ್ಟಿತು.

ವಸಾಹತು ಆಡಳಿತ ಕಾಲದಲ್ಲಿ ನಡೆದ ಈ ಬಗೆಯ ಪ್ರಕ್ರಿಯೆಯು ಅಧ್ಯಯನ ಯೋಗ್ಯವಾದುದು. ಯಾಕೆಂದರೆ ಇಲ್ಲಿ ಮೌಖಿಕ ರೂಪದಲ್ಲಿದ್ದ ಮಾಹಿತಿಗಳನ್ನು ಅಕ್ಷರಕ್ಕೆ ತರಬಯಸಿದವರು ಬ್ರಿಟಿಷರು. ಆ ಬ್ರಿಟಿಷರಿಗೆ ಮಾಹಿತಿಗಳನ್ನು ನೀಡಿದವರು ಬಹು ಮಟ್ಟಿಗೆ ಅವರ ಜೊತೆ ವ್ಯವಹರಿಸಬಲ್ಲವರಾಗಿದ್ದ ಬ್ರಾಹ್ಮಣರು. ಬ್ರಿಟಿಷ ಪೂರ್ವದ ರಾಜಕೀಯ ಚರಿತ್ರೆಯಲ್ಲಿ ಈ ಬಗೆಯ ವಿವರಣೆಗಳಿದ್ದುದು ಬ್ರಾಹ್ಮಣರಲ್ಲಿಯೇ ಆದುದರಿಂದ ಇದೊಂದು ಸಹಜವಾದ ಪ್ರಕ್ರಿಯೆಯಾಗಿತ್ತು. ಜೊತೆಗೆ ಇಂಗ್ಲೀಷ

ಶಿಕ್ಷಣ ವ್ಯವಸ್ಥೆಗೆ ಮೊದಲು ತೆರೆದುಕೊಂಡವರು ಇವರೇ ಆಗಿದ್ದರು. ಈ ಅರ್ಥದಲ್ಲಿ ಬ್ರಿಟೀಷರು ಸಹಜವಾಗಿಯೇ ವಿವರಗಳ ಸಂಗ್ರಹಕ್ಕೆ ಬ್ರಾಹ್ಮಣರ ಮೊರೆ ಹೊಕ್ಕರು. ಮಧುರೆಯ ಸುತ್ತ ಮುತ್ತಲಿನಲ್ಲಿದ್ದ ಬ್ರಾಹ್ಮಣರ ಸಹಾಯದಿಂದಲೇ ಮೆಕೆಂಜಿಯು ಕೈಫಿಯತ್ತುಗಳನ್ನು ಸಂಗ್ರಹಿಸಿದ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪ್ರಸ್ತುತ ಅಧ್ಯಯನದಲ್ಲಿ ಇಂತಹ ದಾಖಲಾತಿ ಪ್ರಕ್ರಿಯೆಯನ್ನು ಸ್ಥಳನಾಮಗಳ ಮೂಲಕ ಅಧ್ಯಯನ ನಡೆಸಲು ಪ್ರಯತ್ನಿಸಲಾಗಿದೆ. ಸ್ಥಳನಾಮಗಳು ಮೌಖಿಕ ರೂಪದಲ್ಲಿಯೇ ಅಸ್ತಿತ್ವವನ್ನು ಪಡೆದುಕೊಂಡಿದ್ದವು. ಕೆಲವು ಅಪವಾದಗಳನ್ನು ಬಿಟ್ಟರೆ 19ನೇ ಶತಮಾನದವರೆಗೆ ಸ್ಥಳನಾಮಗಳ ಕುರಿತ ಚರ್ಚೆಯನ್ನು ಯಾರೂ ನಡೆಸಿಲ್ಲ. ಇದರ ಅರ್ಥ ಸ್ಥಳಗಳ ಕುರಿತು ಜನರಲ್ಲಿ ಯಾವ ಬಗೆಯ ಕಲ್ಪನೆಗಳು ಇರಲಿಲ್ಲವೆಂದರ್ಥವಲ್ಲ. ಜನರ ನಡುವೆ ಇದ್ದ ಕತೆಗಳು ಲಿಖಿತ ರೂಪಕ್ಕೆ ಬರಲಿಲ್ಲವೆಂದರ್ಥವಷ್ಟೆ. ಜನರು ತಾವು ಬದುಕುತ್ತಿರುವ ಊರಿಗೆ ಆ ಹೆಸರು ಯಾಕೆ ಬಂತೆಂಬುದರ ಕುರಿತು ತಮ್ಮದೇ ಆದ ಸಂಕಥನವನ್ನು ಹೊಂದಿದ್ದರು. ಈ ಸಂಕಥನಗಳನ್ನು ಬ್ರಿಟೀಷರಿಗೆ ವರದಿ ಮಾಡಿದವರು ಬ್ರಾಹ್ಮಣರು. ಇದನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಅಧ್ಯಯನದಲ್ಲಿ ಎರಡು ಮುಖ್ಯ ಪ್ರಶ್ನೆಗಳ ಕುರಿತು ಚರ್ಚಿಸಲಾಗುವುದು.

ಮೊದಲನೆಯ ಪ್ರಶ್ನೆಯು ಕೈಫಿಯತ್ತುಗಳಲ್ಲಿ ಪ್ರಕಟವಾದ ಸ್ಥಳನಾಮಗಳ ಸ್ವರೂಪದ ವಿವರಣೆಯನ್ನು ಮುಂದಿಡುತ್ತದೆ. ಇಲ್ಲಿ ಕೈಫಿಯತ್ತುಗಳಲ್ಲಿ ವಿವರಿಸಲಾದ ಸ್ಥಳನಾಮಗಳನ್ನು ಸಂಗ್ರಹಿಸಿ ಒಂದೆಡೆ ಮಂಡಿಸಲಾಗುವುದು. ಹೀಗೆ ಮಾಡುವುದರಿಂದ ಒಟ್ಟು ಕೈಫಿಯತ್ತುಗಳಲ್ಲಿ ಹಂಚಿಹೋದ ಸ್ಥಳನಾಮಗಳನ್ನು ಒಂದೆಡೆ ತಂದಂತಾಗುವುದು. ಹೀಗೆ ಒಂದೆಡೆ ತಂದ ಸ್ಥಳನಾಮಗಳನ್ನು ಅದರ ವಸ್ತುವಿಗೆ ಅನುಗುಣವಾಗಿ ವರ್ಗೀಕರಿಸಿಕೊಳ್ಳಲಾಗುವುದು. ಅನಂತರ ಈ ಸ್ಥಳನಾಮಗಳ ವಿವರಣೆಯ ಹಿಂದಿನ ಸೈದ್ಧಾಂತಿಕ ನೆಲೆಗಳನ್ನು ಪರಿಶೀಲಿಸಲಾಗುವುದು ಅಂದರೆ ಈ ಸ್ಥಳನಾಮಗಳ ವಿವರಣೆಗಳು ಹಾಗೆಯೇ ಯಾಕೆ ಇವೆ ಎಂಬ ಪ್ರಶ್ನೆಯನ್ನು ಹಾಕಿಕೊಂಡು ಅವಕ್ಕೆ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗುವುದು. ಈ ಪ್ರಶ್ನೆ ಬಹಳ ಮುಖ್ಯವಾದುದು. ಯಾಕೆಂದರೆ ನಮ್ಮಲ್ಲಿ ಅನೇಕ ಬಗೆಯ ಸ್ಥಳನಾಮ ವಿವರಗಳಿವೆ. ಈ ನಾಡಿನಲ್ಲಿ ಬೇರೆ ಬೇರೆ ಜಾತಿಯ ಜನಗಳು ತಮ್ಮ ಲೋಕದೃಷ್ಟಿಗೆ ಅನುಗುಣವಾದ ರೀತಿಯಲ್ಲಿ ಸ್ಥಳನಾಮಗಳ ಕುರಿತ ವಿವರಣೆಗಳನ್ನು ಕಟ್ಟಿಕೊಂಡಿದ್ದಾರೆ. ಹೀಗೆ ಸ್ಥಳನಾಮಗಳ ಕುರಿತ ವಿವರಣೆಗಳು ಬಹುಮುಖಿಯಾಗಿದ್ದಾಗ ಕೈಫಿಯತ್ತುಗಳು ಅವುಗಳಲ್ಲಿ ಯಾವ ಬಗೆಯ ರಚನೆಗಳನ್ನು ಮುಖ್ಯವೆಂದು ಗಮನಿಸಿ ಮತ್ತು ಅವನ್ನೇ ಯಾಕೆ ಆಯ್ದುಕೊಂಡಿವೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಈ ಬಗೆಯ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಸೂಕ್ಷ್ಮವಾಗಿ ನೋಡಿದಾಗ ಇದು 18—19ನೆಯ ಶತಮಾನದ ವಿದ್ವತ್ತಿನ ಕುರಿತಾದ ಸಾಂಸ್ಕೃತಿಕ ಚರ್ಚೆಯೇ ಆಗಿದೆ.

1.2 ಅಧ್ಯಯನದ ಆಕರಗಳು :

ಕೈಫಿಯತ್ತುಗಳು ಸಾವಿರಾರು ಸಂಖ್ಯೆಗಳಲ್ಲಿ ಸಂಗ್ರಹಿತವಾಗಿದ್ದರೂ ಪ್ರಸ್ತುತ ಅಧ್ಯಯನಕ್ಕೆ ಎಂ.ಎಂ.ಕಲಬುರ್ಗಿಯವರು ಸಂಪಾದಿಸಿದ 'ಕರ್ನಾಟಕದ ಕೈಫಿಯತ್ತುಗಳು' ಪುಸ್ತಕವನ್ನು ಮಾತ್ರ ಆಧರಿಸಿಕೊಳ್ಳಲಾಗಿದೆ (1994). ಇದರಲ್ಲಿ ಎಲ್ಲಾ ಕೈಫಿಯತ್ತುಗಳನ್ನು ಪರಿಶೀಲಿಸಲಾಗಿದೆಯಾದರೂ ಅಧ್ಯಯನ ಸಂದರ್ಭದಲ್ಲಿ ಪ್ರಾತಿನಿಧಿಕ ಎನ್ನಬಹುದಾದ ಕೈಫಿಯತ್ತುಗಳನ್ನು ಮಾತ್ರ ಪರಾಮರ್ಶಿಸಲಾಗಿದೆ. ಹೀಗೆ ಮಾಡುವುದರ ಮೂಲಕ ಸ್ಥಳನಾಮಗಳ ಕುರಿತಾದ ವಿವರಣೆಯ ಪುನರಾವರ್ತನೆಯನ್ನು ತಪ್ಪಿಸಲಾಗಿದೆ.

ಈ ಕೈಫಿಯತ್ತುಗಳ ಅಧ್ಯಯನಕ್ಕೆ ಪೂರಕವಾಗಿ ಕೈಫಿಯತ್ತುಗಳ ಬಗೆಗೆ ಇದುವರೆಗೆ ನಡೆದ ಅಧ್ಯಯನ ಕೃತಿಗಳನ್ನು ಗಮನಿಸಿಕೊಳ್ಳಲಾಗಿದೆ.

1.3 ಅಧ್ಯಯನ ವಿಧಾನ :

ಬಹುಮಟ್ಟಿಗೆ ಪ್ರಸ್ತುತ ಅಧ್ಯಯನದಲ್ಲಿ ವಿವರಣಾತ್ಮಕ ಅಧ್ಯಯನ ವಿಧಾನವನ್ನು ಅನುಸರಿಸಲಾಗುವುದು. ಕೈಫಿಯತ್ತುಗಳಲ್ಲಿ ಲಭ್ಯವಿರುವ ಸ್ಥಳನಾಮಗಳ ಕುರಿತಾದ ವಿವರಗಳನ್ನು ಸಂಗ್ರಹಿಸಿ ವರ್ಗೀಕರಿಸಿ ಮಂಡಿಸಲಾಗುವುದು. ಅನಂತರ ಈ ವಿವರಗಳ ಹಿಂದಿನ ಸೈದ್ಧಾಂತಿಕ ನೆಲೆಗಳನ್ನು ಗುರುತಿಸಲು ಪ್ರಯತ್ನಿಸಲಾಗುವುದು. ಈಗಾಗಲೇ ಸ್ಪಷ್ಟಪಡಿಸಲಾದಂತೆ ಸ್ಥಳನಾಮಗಳ ವಿವರಗಳು ಹಾಗೆಯೇ ಯಾಕೆ ಇವೆ ಎಂಬ ಕುರಿತು ಚರ್ಚಿಸುವಾಗ ಈ ಒಟ್ಟು ವಿವರಣೆಯನ್ನು ವಸಾಹತು ಆಡಳಿತದ ಸಂದರ್ಭದಲ್ಲಿರಿಸಿ ಚರ್ಚಿಸಲಾಗುವುದು. ಈ ಅರ್ಥದಲ್ಲಿ ಪ್ರಸ್ತುತ ಅಧ್ಯಯನವು ಚಾರಿತ್ರಿಕ ಅಧ್ಯಯನದ ಕೆಲವು ಅಂಶಗಳನ್ನು ಬಳಸಿಕೊಳ್ಳುತ್ತದೆ. ಆದರೆ ಕೈಫಿಯತ್ತುಗಳ ನಿರೂಪಕರ ವಿಶ್ಲೇಷಣೆಯ ಸಂದರ್ಭದಲ್ಲಿ ಸಾಮಾಜಿಕ ಅಧ್ಯಯನ ವಿಧಾನದ ಕೆಲವು ಅಂಶಗಳನ್ನು ಬಳಸಿಕೊಳ್ಳಲಾಗುವುದು. ಈ ಕಾರಣಕ್ಕೆ ಪ್ರಸ್ತುತ ಅಧ್ಯಯನದಲ್ಲಿ ಸ್ಥಳನಾಮ ನಿರೂಪಕರ ಸಾಮಾಜಿಕ ಹಿನ್ನೆಲೆ ಮತ್ತು ಶೈಕ್ಷಣಿಕ ಹಿನ್ನೆಲೆಯನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಒಟ್ಟಿನಿಂದ ಪ್ರಸ್ತುತ ಸಂಪ್ರಬಂಧದಲ್ಲಿ ಚಾರಿತ್ರಿಕ–ಸಾಮಾಜಿಕ ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗುವುದು.

2ನೇ ಭಾಗ : ಕೈಫಿಯತ್ತುಗಳು

2·1·1 :ಕೈಫಿಯತ್ತುಗಳ ಪರಿಚಯ

2·1·2 :ಕೈಫಿಯತ್ತುಗಳ ಸಂಗ್ರಹ ಕಾರ್ಯ

2·1·3 :ಕೈಫಿಯತ್ತುಗಳ ಪ್ರಕಟಣೆ ಕೆಲಸಗಳು

2·1·4·:ಕೈಫಿಯತ್ತುಗಳ ನಿರೂಪಕರು

2.1.1 <u>ಕೈಫಿಯತ್ತುಗಳ ಪರಿಚಯ</u> :

ನಮ್ಮ ದೇಶದ ಚರಿತ್ರೆಯನ್ನು ಬರೆಯಲು ಶಾಸನ, ತಾಳೆಯಗರಿ, ಕಡತ, ಕೈಫಿಯತ್ತು, ನಾಮೆ,ಬಖೈರು ಮೊದಲಾದುವು ಮೂಲ ಆಕರ ಸಾಮಗ್ರಿಗಳೆನಿಸುತ್ತವೆ. ಕೈಫಿಯತ್ತುಗಳು ಶಾಸನಗಳಷ್ಟು ಪ್ರಬಲವಾದ ಆಧಾರ ಸಾಮಗ್ರಿಯೆನಿಸದಿದ್ದರೂ ಪೂರಕ ಮತ್ತು ಪೋಷಕ ಸಾಮಗ್ರಿಯಾಗಿ ಕೈಫಿಯತ್ತುಗಳನ್ನು ಗಮನಿಸಿಕೊಳ್ಳಬಹುದು.

' ಕಾಗದದ ಮೇಲೆ ಬರೆಯಲ್ಪಟ್ಟ ನಾಮೆ, ವಂಶಾವಳಿ, ಪಟ್ಟಿ, ಚರಿತ್ರೆ,ನಿರೂಪ, ಸ್ಥಳಪುರಾಣ ಹಾಗೂ ಬಖೈರುಗಳಲ್ಲಿ ' ಕೈಫಿಯತ್ತು ' ಎಂದು ಕರೆಯಲಾದ ದಾಖಲೆಗಳೇ ಅಧಿಕವಾಗಿವೆ (ಲಕ್ಷ್ಮಣ ತೆಲಗಾವಿ 1991:658). ಈ ' ಕೈಫಿಯತ್ತು ' ಶಬ್ದವು ಅರಾಬಿಕ್ –ಪರ್ಷಿಯನ್ ಮೂಲದ್ದು. ಅದಕ್ಕೆ '' ವಿವರಣೆ, ಹೇಳಿಕೆ,ಖತ್ಲಿ,ವ್ಯಾಜ್ಯ, ಆಜ್ಞಾಪತ್ರ, ವಾಸ್ತವಿಕ ವಿಷಯಗಳ ಲಿಖಿತ ಸಂಗ್ರಹದ ಕಡತ, ಲಿಖಾವಟ್ಟು ಇತ್ಯಾದಿ ಅರ್ಥಗಳಿವೆ. ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿರುವ ಈ ಶಬ್ದದ ಪರ್ಯಾಯ ರೂಪಗಳು: ಕೈಫಿಯತ್, ಕೈಫತ, ಕೈಫಿಯತ, ಕೈಪೇತ ಇತ್ಯಾದಿ'' (ಉದ್ಧೃತ:ಲಕ್ಷ್ಮಣ ತೆಲಗಾವಿ: 1991:659).


ಹೈದರ ಮತ್ತು ಟಿಪ್ಪುಗಳ ಕಾಲದಲ್ಲಿ ಅವರ ರಾಜಧಾನಿಯಾದ ಶ್ರೀರಂಗಪಟ್ಟಣದಲ್ಲಿ ಅನೇಕ ಮುಂದಿ ಇತಿಹಾಸ ಪ್ರಿಯರಾದ ಪಾರ್ಸಿ ಲಿಪಿಕಾರರಿದ್ದರು. ಒಂದು ಐತಿಹಾಸಿಕ ಘಟನೆ ಕುರಿತು ಯಾರು ಏನೇ ಹೇಳಿದರೂ ತಕ್ಷಣ ಅವರು ಅದನ್ನು ಬರೆದು ಇಡುತ್ತಿದ್ದರು. '' ಹೀಗೆ ಹೇಳುವವರ ಗುಂಪೊಂದು, ಹೇಳಿದ್ದನ್ನು ಬರೆದಿಡುವವರ ಗುಂಪೊಂದು. ಇವೆರಡೂ ಗುಂಪುಗಳ ಸಹಕಾರದ ಫಲವಾಗಿ ಕೈಫಿಯತ್ತುಗಳು ವಿಫುಲವಾಗಿ ಸೃಷ್ಟಿಯಾದುವು'' (ಕ.ವಿ 5:1972:325). ಮೂಲ ಅರೇಬಿಕ್ ಭಾಷೆಯಲ್ಲಿರುವ ಅರ್ಥವೇ ಕೈಫಿಯತ್ತು ಪದಕ್ಕೆ ಕನ್ನಡದಲ್ಲಿಯೂ ಉಳಿದುಕೊಂಡಿದೆ.

ಕೈಫಿಯತ್ತುಗಳನ್ನೇ ಹೋಲುವ ಕೆಲವು ಬರಹಗಳನ್ನು ' ಬಖೈರು ' ಮತ್ತು ' ನಾಮೆ ' ಗಳೆಂದು ಕರೆಯಲಾಗುತ್ತದೆ. ಇವೆರಡೂ ಶಬ್ದಗಳು ಅನ್ಯದೇಶ್ಯಗಳೆನ್ನುವುದರಲ್ಲಿ ಸಂಶಯವಿಲ್ಲ. ನಾಮೆ ಪರ್ಷಿಯಾ ಮೂಲದ್ದು. ಇದಕ್ಕಿರುವ ಅರ್ಥ ಕಾಗದ, ಪತ್ರ, ದಾಖಲೆ ಇತ್ಯಾದಿ. ಹಿಂದಿ ಮತ್ತು ಮರಾಠಿಗಳಲ್ಲಿ ನಾಮಾ ಎಂದು ಕರೆಯಲಾಗುತ್ತದೆ. ಚರಿತ್ರೆ ಬರವಣಿಗೆಗೆ ನೆರವಾಗುವ ಕನ್ನಡದಲ್ಲಿಯ ' ಹೈದರ ನಾಮಾ ' ಮತ್ತು ' ಕೊಡಗಿನ ರಾಜೇಂದ್ರನಾಮೆ ' ದಾಖಲೆಗಳನ್ನು ಇಲ್ಲಿ ಉದಾಹರಿಸಬಹುದು.

ಇನ್ನು 'ಬಖೈರ್ ' ನ ವಿಚಾರ — ಇದು ಮರಾಠಿ ಶಬ್ದವಾಗಿದ್ದು; ಬಖರ್, ಬಖಾರ ಹಾಗೂ ಬಖೆರ ರೂಪಗಳಲ್ಲಿಯೂ ಬಳಕೆಗೊಂಡಿದೆ. ಕನ್ನಡದಲ್ಲಿ ಬಖೈರು ಎಂದಾಗಿದೆ. ಇದಕ್ಕಿರುವ ಅರ್ಥವೆಂದರೆ ಚಾರಿತ್ರಿಕ ಘಟನೆಗಳನ್ನು ಸೂಚಿಸುವ ವಿವರ, ಇತಿಹಾಸ,ಪುರಾಣ, ವಾರ್ತೆ ಇತ್ಯಾದಿ. ಆದರೆ ಬಖೈರ್ ಎಂಬುದು ಮರಾಠಿ ಜನ್ಯ ಶಬ್ದವಲ್ಲವೆಂಬುದು ಗಮನಾರ್ಹ. ಅದು ಅರಬ್ಬೀ ಮೂಲದಿಂದ ಜನಿಸಿ ಮರಾಠಿಯಲ್ಲಿ ಭಿನ್ನ ರೂಪದಿಂದ ಬೆಳೆದು ದೃಢವಾಗಿರು–ವಂತಹುದು. ಅರಬ್ಬೀ ಶಬ್ದವು ವರ್ಣ ವ್ಯತ್ಯಯನ ಹೊಂದಿ ಬಖೈರ್ ರೂಪ ಬಂದಿರಬಹುದೇ(?) ಎಂದು ವಿದ್ವಾಂಸರು ಈ ಕುರಿತು ಶಂಕಿಸಿರುವರು. ಹಿಂದಿಯಲ್ಲಿ ಪ್ರವೇಶಿಸಿರುವ ' ಖಬರ್ ' (ಖಬ್ರ) ಶಬ್ದಕ್ಕೆ ' ಬಖರ್ ' ನ ಅರ್ಥವೇ ಇದೆ. ಪಾರ್ಸಿ ಹಾಗೂ ಅರಬ್ಬೀಗಳನ್ನು ಸಂಪರ್ಕ ಭಾಷೆಗಳನ್ನಾಗಿ ಹೊಂದಿದ್ದ ಮರಾಠಿಯಲ್ಲಿ ಇಂತಹ ಶಬ್ದಗಳು ಪ್ರವೇಶಿಸಿರುವುದು

ವಾರ್ತೆ ಇತ್ಯಾದಿ. ಆದರೆ ಬಖೈರ್ ಎಂಬುದು ಮರಾಠಿ ಜನ್ಯ ಶಬ್ದವಲ್ಲವೆಂಬುದು ಗಮನಾರ್ಹ. ಅದು ಅರಬ್ಬೀ ಮೂಲದಿಂದ ಜನಿಸಿ ಮರಾಠಿಯಲ್ಲಿ ಭಿನ್ನ ರೂಪದಿಂದ ಬೆಳೆದು ದೃಢವಾಗಿರುವಂತಹದು. ಅರಬ್ಬೀ ಶಬ್ದವು ವರ್ಣ ವ್ಯತ್ಯಾಸ ಹೊಂದಿ ಬಖೈರ್ ರೂಪ ಬಂದಿರಬಹುದೇ(?) ಎಂದು ವಿದ್ವಾಂಸರು ಈ ಕುರಿತು ಶಂಕಿಸಿರುವರು. ಹಿಂದಿಯಲ್ಲಿ ಪ್ರವೇಶಿಸಿರುವ 'ಖಬರ್' (ಖಬ್ರ) ಶಬ್ದಕ್ಕೆ 'ಬಖರ್' ನ ಅರ್ಥವೇ ಇದೆ. ಪಾರ್ಸಿ ಹಾಗೂ ಅರಬ್ಬೀಗಳನ್ನು ಸಂಪರ್ಕ ಭಾಷೆಗಳನ್ನಾಗಿ ಹೊಂದಿದ್ದ ಮರಾಠಿಯಲ್ಲಿ ಇಂತಹ ಶಬ್ದಗಳು ಪ್ರವೇಶಿಸಿರುವುದು ತೀರಾ ಸಾಮಾನ್ಯವಾಗಿದ್ದಿತು. ಇಲ್ಲಿ ಬಖರ ಶಬ್ದವು ವರ್ಣಪಲ್ಲಟ ಅಥವಾ ವರ್ಣ ವ್ಯತ್ಯಾಸದಿಂದಾಗಿ 'ಬಖರ್' ಆಗಿರುವುದನ್ನು ಗಮನಿಸಬಹುದು ' ಎಂದು ಲಕ್ಷ್ಮಣ ತೆಲಗಾವಿಯವರು ಭಾವಿಸುತ್ತಾರೆ (1991:660). ಸ್ಥೂಲವಾಗಿ ಬಖೈರು ಮತ್ತು ನಾಮೆಗಳನ್ನು ಕೈಫಿಯತ್ತುಗಳೆಂದು ಕರೆಯಬಹುದಾದರೂ ಕೈಫಿಯತ್ತುಗಳು ಬಖೈರು ಮತ್ತು ನಾಮೆಗಳನ್ನು ಒಳಗೊಂಡು ವಿಶಾಲವಾಗಿರುವುದರಿಂದ ಅವುಗಳನ್ನು ಕೈಫಿಯತ್ತುಗಳಿಂದ ಪ್ರತ್ಯೇಕವಾಗಿ ಭಾವಿಸಬೇಕಾಗುತ್ತದೆ.

ಒಟ್ಟಿನಲ್ಲಿ 'ಕೈಫಿಯತ್ತು' ಪದದ ಮೂಲ ಅರ್ಥ ಭಾರತೀಯ ಭಾಷೆಗಳಲ್ಲಿ ಬದಲಾವಣೆ ಗೊಳ್ಳದೇ ಅದೇ ಅರ್ಥದಲ್ಲಿ ಬಳಕೆಯಾಗುತ್ತಿದೆ. ಅದು ವಿವರಣೆಗಳನ್ನೊಳಗೊಂಡ ದಾಖಲೆಯಾಗಿದ್ದು; ಮೆಕೆಂಜಿಯು ಹಳ್ಳಿಗಳಿಂದ ವಿವರಗಳನ್ನು ಸಂಗ್ರಹಿಸುವಾಗ ಅದಕ್ಕೆ '' ಕೈಫಿಯತ್ತು'' ಎಂದು ಹೆಸರಿಟ್ಟನು.



ಲೆಫ್ಟಿನೆಂಟ ಕರ್ನಲ ಮೆಕೆಂಝಿ (1754 – 1821)

ಕೈಫಿಯತ್ತುಗಳ ಸೃಷ್ಟಿಗೆ ಕಾರಣಕರ್ತ

2.1.2 ಕೈಫಿಯತ್ತುಗಳ ಸಂಗ್ರಹ ಕಾರ್ಯ :

ವಿಜಯನಗರದ ಸಾಮ್ರಾಜ್ಯ ಪತನಾನಂತರ ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಳ್ವಿಕೆ ಪ್ರಾರಂಭವಾಗಿತ್ತು. ಅದೇ ಸಮಯದಲ್ಲಿ ಬ್ರಿಟೀಷರು, ಪೋರ್ಚುಗೀಸರು ವ್ಯಾಪಾರೋದ್ದೇಶ ಮಹತ್ವಾಕಾಂಕ್ಷಿಗಳಾಗಿ ಭಾರತಕ್ಕೆ ಬಂದು ನೂತನ ಇತಿಹಾಸವನ್ನು ರೂಪಿಸುತ್ತಿದ್ದರು. ಕೊನೆಯಲ್ಲಿ ಬ್ರಿಟೀಷರ ಈಸ್ಟ್ ಇಂಡಿಯಾ ಕಂಪನಿಯ ಸರ್ಕಾರವು ದೇಶೀಯ ಆಡಳಿತವನ್ನು ಕೊನೆಗೊಳಿಸಿ ವಿದೇಶೀಯ ಆಡಳಿತವನ್ನು ನೆಲೆಗೊಳಿಸಿತು. ಅದಕ್ಕಾಗಿ ಬ್ರಿಟೀಷ ಸರ್ಕಾರವು ಸ್ವಮತ ಪ್ರಚಾರ, ವಿದ್ಯಾ ಪ್ರಸಾರದಲ್ಲಿ ತೊಡಗಿತು. ಅದಕ್ಕೆ ಪೂರಕವಾಗಿ ದೇಶೀಯ ಸಂಸ್ಕೃತಿಯ ಅಧ್ಯಯನ ಪಾಶ್ಚಾತ್ಯರಿಂದ ನಡೆಯಿತು. ಹಳೆಯ ಗ್ರಂಥಗಳ ಸಂಪಾದನೆ, ಪ್ರಕಟಣೆ, ದೇಶ್ಯ ಭಾಷೆಗಳ ವ್ಯಾಕರಣ,ರಚನೆ,ಶಬ್ದಕೋಶಗಳ ತಯಾರಿಕೆ,ಶಾಸನ,ಶಿಲ್ಪಗಳ ಅಧ್ಯಯನ ಮುಂತಾದ ಶಾಸ್ತ್ರೀಯವಾದ ಕಾರ್ಯಗಳು ನಡೆಯಲಾರಂಭಿಸಿದವು. ಇವೆಲ್ಲ ಶಿಷ್ಟ ರಂಗದಲ್ಲಿ ಜರುಗಿದ ಕಾರ್ಯಗಳಾದರೆ ಅಸಂಖ್ಯಾತ ಜನಪದದ ಕುರಿತು ಏನೂ ಹೇಳುವುದಿಲ್ಲ.

"ಇಂತಹ ಕತ್ತಲ ಕಾಲದಲ್ಲಿ ಲೆ: ಕ. ಮೆಕೆಂಜಿಯು ಈ ರೀತಿಯ ಕಾರ್ಯಕ್ಕೆ ಉದ್ಯುಕ್ತನಾದನು ಅದೂ 1754ರಿಂದ 1821ರ ಕಾಲಘಟ್ಟದಲ್ಲಿ. ಮೇಲೆ ಹೇಳಿದ ಶಾಸ್ತ್ರೀಯ ಅಧ್ಯಯನಗಳು ನಡೆಯುವುದಕ್ಕೆ ಮೊದಲೇ ಅವನು ಈ ಕೆಲಸಕ್ಕೆ ಇಳಿದನು." (ಕುಶಾಲಪ್ಪಗೌಡ.ಕೆ,ಮತ್ತು ಚಿನ್ನಪ್ಪಗೌಡ.ಕೆ : 1983.3). ಈತನಿಗೆ ಸಹಾಯಕರಾದ ಕೆಲವು ದೇಶೀಯ ಪಂಡಿತರಿದ್ದರು. ಪುಲಗಡ್ಡ ಮಲ್ಲಯ್ಯ,ವೆಂಕಟರಾವ್, ನಾರಾಯಣರಾವ್, ಬಾಬೂರಾವ್,ಆನಂದರಾವ್ ಇವರೇ ಮುಂತಾದವರು.

ಕಾವಲಿ ವೆಂಕಟಬೊರಯ್ಯನು ಮೆಕೆಂಜಿಯ ಅತೀ ಹತ್ತಿರದ ಹಾಗೂ ಆತ್ಮೀಯ ಪಂಡಿತನಾಗಿದ್ದ. ಬೊರಯ್ಯನ ಅಪಾರ ವಿದ್ವತ್ತು; ಶಿಷ್ಟಮತೀತ್ವ ಮತ್ತು ಸಂಶೋಧಕ ಪ್ರವೃತ್ತಿಯನ್ನು ಮೆಚ್ಚಿಕೊಂಡಿದ್ದ ಮೆಕೆಂಜಿಯು ತನ್ನ ಹೆಡ್‌ಕ್ಲರ್ಕ್ ಆಗಿ ನೇಮಿಸಿಕೊಂಡಿದ್ದ. ಕನ್ನಡ ಮತ್ತು ತೆಲುಗುಗಳಲ್ಲಿ ಪರಿಣತನಾಗಿದ್ದ ಬೊರಯ್ಯ ಎಲ್ಲಾ ವಿಷಯಗಳನ್ನು ಇಂಗ್ಲೀಷಿನಲ್ಲಿ ಮೆಕೆಂಜಿಗೆ ವಿವರಿಸುತ್ತಿದ್ದ. ಆದರೆ ಬೊರಯ್ಯ ಎಳೆ ವಯಸ್ಸಿನಲ್ಲಿ ತೀರಿಕೊಂಡ. ಬೊರಯ್ಯನು ಮೆಕೆಂಜಿಗೆ ಸಲ್ಲಿಸಿದ ಸೇವೆ ಅಪಾರ. ಅದನ್ನು ಮೆಕೆಂಜಿಯೇ ತನ್ನ ಪತ್ರವೊಂದರಲ್ಲಿ ಸ್ಮರಿಸಿಕೊಂಡಿದ್ದಾನೆ. ಬೊರಯ್ಯನ ಮರಣಾನಂತರ ಅವನ ತಮ್ಮನಾದ ಲಕ್ಷ್ಮಯ್ಯನು ಸಮರ್ಥವಾಗಿ ಅಣ್ಣನ ಸ್ಥಾನವನ್ನು ತುಂಬಿದ. ಮೆಕೆಂಜಿಯು ಮೇ 3,1811ರಲ್ಲಿ ಬರೆದ ಉಯಿಲಿನಲ್ಲಿ ತನ್ನ ಒಟ್ಟು ಸಂಪಾದನೆಯ ಶೇಖಡ ಹತ್ತು ಆಸ್ತಿಯನ್ನು ಲಕ್ಷ್ಮಯ್ಯನಿಗೆ ಕೊಡಬೇಕೆಂದು ಬರೆಯುವುದರ ಮೂಲಕ ಈ ದೇಶೀ ಪಂಡಿತನಿಗೆ ಗೌರವ ಸಲ್ಲಿಸಿದ. ಒಟ್ಟಿನಲ್ಲಿ ಮೆಕೆಂಜಿಯೇ ಹೇಳಿರುವಂತೆ "ಈ ಸ್ಥಳೀಕರಾದ ಶಿಷ್ಟಮತಿಯ ಬ್ರಾಹ್ಮಣರಿಲ್ಲದಿದ್ದರೆ ಹಿಂದೂ ಭಾರತದ ಯಾವ ಅನುಭವವೂ ನನಗಾಗುತ್ತಿರಲಿಲ್ಲ." (ಕುಶಾಲಪ್ಪಗೌಡ.ಕೆ; ಚಿನ್ನಪ್ಪಗೌಡ.ಕೆ. 1983:5) ಎಂಬ ಆತನ ಮಾತಿನಲ್ಲಿ ಸ್ಥಳೀಯ ವಿದ್ವಾಂಸರು ಮಾಡಿದ ಸಹಾಯವನ್ನು ಅರ್ಥೈಸುತ್ತದೆ.

ಇವರೆಲ್ಲರ ಸಹಾಯದಿಂದ ಮೆಕೆಂಜಿ ಮತ್ತಿನ್ನಾರೂ ಸಂಗ್ರಹಿಸಿರದಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿದ. ಆತ ವಿವಿಧ ಭಾಷೆಗಳಲ್ಲಿ ಸಂಗ್ರಹಿಸಿದ ಒಟ್ಟು ವಿವರ ಈ ರೀತಿ ಇದೆ.:

1. 1,568 ಹಸ್ತಪ್ರತಿಗಳು
2. 2,070 ಕೈಫಿಯತ್ತುಗಳು
3. 8,070 ಶಾಸನಗಳ ನಕಲುಗಳು
4. 79 ನಕ್ಷೆಗಳು
5. 2,630 ಚಿತ್ರಗಳು
6. 6,218 ನಾಣ್ಯಗಳು
7. 106 ಪುರಾತನ ವಿಗ್ರಹಗಳು.

"ಇವುಗಳ ಮೇಲೆ ಸಮಯವಿದ್ದಾಗಲೆಲ್ಲಾ ಅಧ್ಯಯನ ಮಾಡಿ ಸುಮಾರು 40 ಲೇಖನಗಳನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಬರೆದು ಪ್ರಕಟಿಸಿದ್ದಾನೆ". (ಪುರುಷೋತ್ತಮ ಬಿಳಿಮಲೆ:1985:7).

ಮೆಕೆಂಜಿ ತನ್ನ 68ನೇ ವಯಸ್ಸಿನಲ್ಲಿ (ಮೇ 8,1821ರಂದು) ಕಲ್ಕತ್ತದ ತನ್ನ ಮನೆಯಲ್ಲಿ ತೀರಿಕೊಂಡನು. ನಂತರ ಆತನ ಸಂಗ್ರಹದಲ್ಲಿದ್ದ ಮುಖ್ಯ ದಾಖಲೆಗಳನ್ನು ಮತ್ತು ಹಸ್ತಪ್ರತಿಗಳನ್ನು 1823ರಲ್ಲಿ ಮತ್ತು 1825ರಲ್ಲಿ ಇಂಗ್ಲೆಂಡಿಗೆ ಸಾಗಿಸಲಾಯಿತು. ಇಂಗ್ಲೆಂಡಿಗೆ ಸಾಗಿಸಿದ ನಂತರ ಉಳಿದುಳಿದ ಹಸ್ತಪ್ರತಿಗಳನ್ನು ಮದ್ರಾಸ ಪ್ರೆಸಿಡೆನ್ಸಿ ಕಾಲೇಜಿನ ಲೈಬ್ರರಿಯಲ್ಲಿ ಹಾಕಿಡಲಾಯಿತು. ಅನಂತರ 1830ರ ಸುಮಾರಿಗೆ ಕಾವೆಲಿ ವೆಂಕಟ ಲಕ್ಷ್ಮಯ್ಯನು ತಾನು ಮೆಕೆಂಜಿ ಕೆಲಸವನ್ನು ಮುಂದುವರೆಸುತ್ತೇನೆಂದೂ, ಅದಕ್ಕೆ ಸರ್ಕಾರ ಸಹಾಯ ನೀಡಬೇಕೆಂದೂ ಬರೆದನು. ಅದಕ್ಕೆ ಪ್ರತಿಕ್ರಿಯಿಸದ ಸರ್ಕಾರ ಮತ್ತೊಮ್ಮೆ 1836ರಲ್ಲಿ ಸರ್ಕಾರಕ್ಕೆ ಲಕ್ಷ್ಮಯ್ಯನು ಬರೆದ ಪತ್ರಕ್ಕೆ 1837ರಲ್ಲಿ ಪ್ರತಿಕ್ರಿಯಿಸಿ ಉತ್ತರ ರೂಪವಾಗಿ ವಿಲಿಯಂ ಟೇಲರನನ್ನು ಮೆಕೆಂಜಿ ಸಂಗ್ರಹದ ಮೇಲ್ವಿಚಾರಣೆಗೆ ನೇಮಿಸಿತು. ಟೇಲರ ನಾಶವಾಗಿ ಉಳಿದ ಹಸ್ತಪ್ರತಿಗಳನ್ನು ಸಂಗ್ರಹಿಸಿ, ಜೋಡಿಸಿ ಅವುಗಳಲ್ಲಿ ಮುಖ್ಯವಾದವುಗಳನ್ನು ಆಯ್ದು ಐದು ಸಂಪುಟಗಳಲ್ಲಿ ಪ್ರಕಟಿಸಿದ ಮತ್ತು 1838ನೇ ಸೆಪ್ಟೆಂಬರ ತಿಂಗಳಲ್ಲಿ ನಿವೃತ್ತನಾದ.

ಮತ್ತೆ ಮೆಕೆಂಜಿ ಸಂಗ್ರಹಕ್ಕೆ ದುರ್ದೆಶೆ ಆರಂಭವಾಯಿತು. 1847ರ ವರೆಗೆ ಅದನ್ನು ಯಾರೂ ಗಮನಿಸಲಿಲ್ಲ. ಸುದೈವದಿಂದ ಅದೇ ವರ್ಷ ಕರ್ನಲ್ ಸಿ.ಪಿ.ಬ್ರಾನ್ ಎಂಬುವವನು ಮೆಕೆಂಜಿಯ ಸಾಹಸ ಕಾರ್ಯವನ್ನು ಗಮನಿಸಿ, ಅವನ ಸಂಗ್ರಹವನ್ನು ರಕ್ಷಿಸುವ ಏರ್ಪಾಡು ಮಾಡಿದನು. 62 ಸಂಪುಟಗಳಲ್ಲಿದ್ದ ಮೆಕೆಂಜಿ ಸಂಗ್ರಹದ ಸುಮಾರು 50 ಸಾವಿರ ಪುಟಗಳನ್ನು ತಾನೇ ಓದಿ ತಿದ್ದಿದನು. ಸಂಶಯವಿದ್ದಲ್ಲಿ ಟಿಪ್ಪಣಿಗಳನ್ನು ಬರೆದನು. ಇಂದಿಗೆ ಕೂಡ ಬ್ರಾನ ಬರೆದ ಟಿಪ್ಪಣಿಗಳು ವಿಶೇಷ ಪ್ರಯೋಜನಕಾರಿಯಾಗಿವೆ. ಜೀವನವನ್ನೇ ಪಣಕ್ಕಿಟ್ಟು ಹೊತ್ತುಗೊತ್ತು ಎನ್ನದೇ ಶ್ರಮಿಸಿ ಸಂಗ್ರಹಿಸಿದ ಮೆಕೆಂಜಿ ಸಂಗ್ರಹವನ್ನು ಮತ್ತೆ ರಕ್ಷಿಸಿದ ಕೀರ್ತಿ ಸಿ.ಪಿ.ಬ್ರಾನರದು.

ಮುಂದೆ 1858ರಲ್ಲಿ ಸರ್ಕಾರವು ಮದ್ರಾಸ್ ಸರ್ಕಾರದ ಪ್ರಾಚ್ಯ ಗ್ರಂಥಮಾಲೆ ಎಂಬ ಹೆಸರಿನಿಂದ ಮೆಕೆಂಜಿ ಸಂಗ್ರಹವನ್ನು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇರಿಸಿ, ಅದರ ಮೇಲ್ವಿಚಾರಣೆಯನ್ನು ಅದೇ ಕಾಲೇಜಿನ ಸಂಸ್ಕೃತ ಪ್ರೊಫೆಸರರಿಗೆ ಒಪ್ಪಿಸಿತು. ಇವರು ಮೊದಲ ಬಾರಿಗೆ ಮೆಕೆಂಜಿ ಸಂಗ್ರಹವನ್ನು ವಿವಿಧ ಭಾಷೆಗಳಿಗೆ ಅನುಗುಣವಾಗಿ ವಿಭಜಿಸಿ, ವಿಸ್ತಾರವಾದ ಸೂಚಿಯನ್ನು ರಚಿಸಿದರು. ಅನಂತರ ಮೆಕೆಂಜಿ ಸಂಗ್ರಹ ಅಲ್ಲಿ ಸುರಕ್ಷಿತವಾಗಿ ಉಳಿದುಕೊಂಡಿತು.

2.1.4 <u>ಕೈಫಿಯತ್ತುಗಳ ಪ್ರಕಟಣೆ ಕಾರ್ಯಗಳು</u> :

ಕೈಫಿಯತ್ತುಗಳಿಗೆ ಪ್ರಕಟಣೆ ಕೆಲಸಗಳಿಗೆ ಸಂಬಂಧಿಸಿದಂತೆ ಡಾ.ಜಿ.ವರದರಾಜರಾವ್ ಅವರ 'ಕನ್ನಡ ಕೈಫಿಯತ್ತುಗಳು' (1982), ಕೆ.ಸುಬ್ರಹ್ಮಣ್ಯಭಟ್, ಎಂ.ಜಿ.ಹೆಗಡೆ ಅವರ 'ಕೈಫಿಯತ್ತುಗಳು' (1981) ಈ ಎರಡು ಲೇಖನಗಳನ್ನು ಬಿಟ್ಟರೆ ಕೆ.ಕುಶಾಲಪ್ಪಗೌಡ ಮತ್ತು ಚಿನ್ನಪ್ಪಗೌಡ ಸಂಪಾದನೆಯ 'ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು' (1985) ಮತ್ತು ಕೈಫಿಯತ್ತುಗಳ ಸಮಗ್ರ ಸಂಪುಟವಾಗಿ ಎಂ.ಎಂ.ಕಲಬುರ್ಗಿಯವರ ಸಂಪಾದನೆಯ 'ಕರ್ನಾಟಕದ ಕೈಫಿಯತ್ತುಗಳು' (1994) ಕೃತಿಗಳು ಇದುವರೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಣೆಯ ಕೆಲಸಗಳಾಗಿವೆ.

ಕೈಫಿಯತ್ತುಗಳಿಗೆ ಸಂಬಂಧಿಸಿದಂತೆ ಅಲ್ಲಲ್ಲಿ ಕಂಡು ಬರುವ ಬಿಡಿ ಲೇಖನಗಳ ನಂತರ ಕುಶಾಲಪ್ಪಗೌಡ.ಕೆ.,ಚಿನ್ನಪ್ಪಗೌಡ.ಕೆ. ಸಂಪಾದನೆಯ ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು ಕೃತಿಯು ಇದುವರೆಗೆ ಪ್ರಕಟವಾದ ಪುಸ್ತಕಗಳಲ್ಲಿ ಮೊದಲನೆಯದು. ಈ ಪುಸ್ತಕದ ಶೀರ್ಷಿಕೆಯೇ ಸೂಚಿಸುವಂತೆ ಕೇವಲ ದಕ್ಷಿಣಕನ್ನಡ ಜಿಲ್ಲೆಗೆ ಸಂಬಂಧಿಸಿದ ಒಟ್ಟು 41 ಕೈಫಿಯತ್ತುಗಳ ಅವಲೋಕನ ಮಾಡಲಾಗಿದೆ. ಇವುಗಳನ್ನು ಚಾರಿತ್ರಿಕ, ಸ್ಥಳಪುರಾಣ, ಸಂಕೀರ್ಣ ವಿಷಯಗಳು ಮತ್ತು ಮಠಗಳಿಗೆ ಸಂಬಂಧಿಸಿದ ಕೈಫಿಯತ್ತುಗಳು ಎಂಬುದಾಗಿ ನಾಲ್ಕು ವಿಭಾಗಗಳನ್ನಾಗಿ ಮಾಡಿ, ಪ್ರಸ್ತಾವನೆಯಲ್ಲಿ ಕೈಫಿಯತ್ತಿನ ಅರ್ಥವ್ಯಾಪ್ತಿ, ಅವುಗಳ ಕರ್ತೃ, ರಚನೆಯಾದ ಕಾಲ, ಸಾರಾಂಶ ಮತ್ತು ವೈಶಿಷ್ಟ್ಯಗಳನ್ನು ಸ್ಥೂಲವಾಗಿ ವಿವೇಚನೆ ಮಾಡಿದ್ದಾರೆ. ಇವುಗಳ ವಿಸ್ತೃತ ಅಧ್ಯಯನದ ಅಗತ್ಯವಿದೆಯೆಂದು ಈ ಕೃತಿಯ ಸಂಪಾದಕರು ಮುಖ್ಯವಾಗಿ ಅಧ್ಯಯನಶೀಲರ ಗಮನ ಸೆಳೆಯುವುದಕ್ಕಾಗಿ ಈ ಕೃತಿಯನ್ನು ಹೊರತಂದಿದ್ದಾರೆ. ಅದಕ್ಕಾಗಿಯೇ ಕೈಫಿಯತ್ತುಗಳ ಪಾಠಗಳನ್ನು ಇದ್ದಂತೆಯೇ ಕೊಡುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಮಾದರಿಗಾಗಿ ಕೈಫಿಯತ್ತಿನ ಮೂಲ ಪ್ರತಿಯ ಒಂದು ಫೋಟೋ ಪ್ರತಿಯನ್ನು ಅನುಬಂಧದಲ್ಲಿ ಸೇರಿಸಿದ್ದಾರೆ. ಒಟ್ಟಿನಲ್ಲಿ ಈ ಕೃತಿ ಕೈಫಿಯತ್ತುಗಳ ಬಗೆಗಿನ ಸೀಮಿತವಾದ ಉದ್ದೇಶವನ್ನು ಇಟ್ಟುಕೊಂಡು ಪ್ರಕಟವಾದ ಮೊದಲ ಪುಸ್ತಕವಾದರೂ ಸಂಪಾದಕರ ಆಶಯದಂತೆಯೇ ಸಹೃದಯ–ಸಂಶೋಧಕರ ಕುತೂಹಲವನ್ನು ಕೆರಳಿಸಿತು.

ಮೆಕೆಂಜಿ ಸಾಧನೆಯ ಒಂದು ಮುಖವನ್ನು 'ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು' ಕೃತಿಯು ವಿವರಿಸುತ್ತದೆ. ಆದರೆ ಆ ಕೃತಿಯಲ್ಲಿ ಮೆಕೆಂಜಿ ಜೀವನ ಮತ್ತು ಸಾಧನೆಗಳ ಬಗ್ಗೆ ಮಾಹಿತಿಗಳಿಲ್ಲದಿದ್ದನ್ನು ಕಂಡುಕೊಂಡ ಲೇಖಕರು ಅದನ್ನು ಪರಿಚಯಿಸಲು ಡಾ. ಪುರುಷೋತ್ತಮ ಬಿಳಿಮಲೆಯವರು 'ಮೆಕೆಂಜಿಯ ಕೈಫಿಯತ್ತುಗಳು' ಪುಸ್ತಕವನ್ನು ಪ್ರಕಟಿಸಿದ್ದಾರೆ.

ಸ್ವತಃ ಲೇಖಕರೇ ಮೆಕೆಂಜಿ ಸಂಗ್ರಹಗಳು ನಿಕ್ಷೇಪವಾಗಿರುವ ಮದ್ರಾಸ ಸರ್ಕಾರದ ಪೌರ್ವಾತ್ಯ ಹಸ್ತಪ್ರತಿ ಭಂಡಾರದಲ್ಲಿ ಕೆಲಸ ಮಾಡುತ್ತಿದ್ದಾಗ ಮೆಕೆಂಜಿ ಸಂಗ್ರಹಿಸಿದ ಸಾವಿರಾರು ಕೈಫಿಯತ್ತುಗಳನ್ನು ನೋಡಿ, ವಿವಿಧ ಭಾಷೆಗಳಲ್ಲಿರುವ ಅವುಗಳ ಮಹತ್ವ, ವೈವಿಧ್ಯ ಮತ್ತು ಅಗಾಧತೆಯನ್ನು ಕಂಡು ಆಶ್ಚರ್ಯಗೊಂಡು, ಮೆಕೆಂಜಿಯ ಬಗೆಗೆ ಉಪಲಬ್ಧವಿರುವ ಮಾಹಿತಿಗಳನ್ನೆಲ್ಲಾ ಕಲೆ ಹಾಕಿದರೂ ತೃಪ್ತಿಯಾಗದೇ ಬ್ರಿಟೀಷ ಮ್ಯೂಸಿಯಂ, ಹೈದರಾಬಾದ ವಿ.ವಿ. ಗ್ರಂಥಾಲಯ, ಕನ್ನೆಮಾರ ಗ್ರಂಥಾಲಯದಲ್ಲಿ ಸಿಕ್ಕಿದ ವಿವರಗಳನ್ನು ಸಂಗ್ರಹಿಸಿ ಪ್ರಾಯೋಗಿಕವಾಗಿ ಕೆಲವು ಕೈಫಿಯತ್ತುಗಳನ್ನು ಅಧ್ಯಯನ ನಡೆಸಿ ಪ್ರಬಂಧ ಸಿದ್ಧಪಡಿಸಿ ಕೊನೆಗೆ ಪುಸ್ತಕ ರೂಪದಲ್ಲಿ ಹೊರತಂದಿರುವರು.

ಕೈಫಿಯತ್ತುಗಳಿಗೆ ಸಂಬಂಧಿಸಿದಂತೆ ಇದುವರೆಗೆ ನಡೆದ ಬಿಡಿ ಪ್ರಯತ್ನಗಳನ್ನು ಮೀರಿ ಎಂ.ಎಂ.ಕಲಬುರ್ಗಿಯವರ ಹಲವಾರು ವರ್ಷಗಳ ಸಂಪಾದನೆಯ ಪರಿಶ್ರಮದ ಫಲವಾಗಿ 'ಕರ್ನಾಟಕದ ಕೈಫಿಯತ್ತುಗಳು' ಹೆಸರಿನ ಸಮಗ್ರ ಸಂಪುಟ ಕನ್ನಡ ವಿ.ವಿ.ಯಿಂದ ಹೊರಬಂದಿದೆ. ಮತ್ತು ಆ ಮೂಲಕ ಅಕರಗಳ ಪ್ರಕಟಣೆಯ ಇತಿಹಾಸದಲ್ಲಿ ದೊಡ್ಡ ಮೈಲಿಗಲ್ಲೇ ಸ್ಥಾಪನೆಗೊಂಡಂತಾಗಿದೆ.

ಈ ಕೃತಿ ಒಟ್ಟು 134 ಕೈಫಿಯತ್ತುಗಳನ್ನು ಮೂಲ ಪಾಠಕ್ಕೆ ಧಕ್ಕೆ ಬರದಂತೆ ಮೂಲ ಪಾಠ ಅರ್ಥವಾಗುವಂತೆ ವಿದ್ವಾಂಸರು ಪರಿಷ್ಕರಿಸಿ ಕೊಟ್ಟಿದ್ದಾರೆ. ಏಕೆಂದರೆ ಕೈಫಿಯತ್ತುಗಳು ಶಿಷ್ಟ ಪದಕ್ಕೂ ಜಾನಪದಕ್ಕೂ ಸೇರದೆ 'ಜನಪ್ರಿಯ ವರ್ಗ'ದ ಸೃಷ್ಟಿ. ಇದಕ್ಕನುಗುಣವಾಗಿಯೇ ಪಾಠ ಪರಿಷ್ಕರಣ ಕಾರ್ಯ ನಡೆದಿರುವುದು ಅಧ್ಯಯನಕಾರರಿಗೆ ತುಂಬಾ ಅನುಕೂಲವೇ ಆಗಿದೆ. ಇವುಗಳು ಪ್ರಧಾನವಾಗಿ ಸ್ಥಳ , ಗ್ರಾಮಗಳನ್ನು ಕುರಿತು ಕಾರಣ ಇವುಗಳನ್ನು ಭೌಗೋಳಿಕವಾಗಿಯೇ ವಿಂಗಡಿಸುವುದು ಸೂಕ್ತವೆನಿಸಿ ವಿದ್ವಾಂಸರು (1) ಮೈಸೂರು ಪ್ರದೇಶದ ಕೈಫಿಯತ್ತುಗಳು (2) ದಕ್ಷಿಣ-ಉತ್ತರಕನ್ನಡ ಜಿಲ್ಲೆಯ ಕೈಫಿಯತ್ತುಗಳು (3) ಬಳ್ಳಾರಿ ಪ್ರದೇಶದ ಕೈಫಿಯತ್ತುಗಳು ಮತ್ತು (4) ಇತರ ಕೈಫಿಯತ್ತುಗಳೆಂದು ವಿಂಗಡಿಸಿಕೊಂಡಿದ್ದಾರೆ. ಇತರ ಕೈಫಿಯತ್ತುಗಳು ಭಾಗದಲ್ಲಿ ಜಾತಿಗಳಿಗೆ, ರಾಜವಂಶಾವಳಿಗೆ ಸಂಬಂಧಿಸಿದ ಮತ್ತು ಮಣಿಪುರದ ಕೈಫಿಯತ್ತನ್ನು ಸೇರಿಸಿದ್ದಾರೆ. ಕೊನೆಗೆ ಅಧ್ಯಯನದ ಅನುಕೂಲಕ್ಕಾಗಿ 'ನಾಮಸೂಚಿ'ಯನ್ನು ಒದಗಿಸಿದ್ದಾರೆ.

ಈ ಕೃತಿಗೆ ಮೌಲಿಕವಾದ ಪ್ರಸ್ತಾವನೆಯನ್ನು ಬರೆದಿರುವ ಸಂಪಾದಕರು ಕೈಫಿಯತ್ತುಗಳು ಅಭಿವ್ಯಕ್ತಿಸುವ ಅನೇಕ ವಿಷಯ,ರಾಜಕೀಯ,ಆಡಳಿತ, ಸಾಮಾಜಿಕ ಆಚರಣೆ, ಜಾತಿ,ಧಾರ್ಮಿಕ,ವಾಸ್ತು ವಿಶೇಷತೆ,ವಾಣಿಜ್ಯ,ಸಾಹಿತ್ಯ,ಕೈಫಿಯತ್ತುಗಳ ಬರವಣಿಗೆ–ಭಾಷೆ, ಮಹತ್ವದ ಘಟನೆಗಳು ಹೀಗೆ ಪಟ್ಟಿ ಮಾಡುತ್ತಾ ಕೈಫಿಯತ್ತುಗಳ ಅಧ್ಯಯನದ ಮಹತ್ವವನ್ನು ಕುರಿತು ವಿಚಾರ ಮಾಡಿದ್ದಾರೆ. ಕೊನೆಗೆ ಅಲಭ್ಯ ಕೈಫಿಯತ್ತುಗಳ ಯಾದಿಯನ್ನು ಕೊಟ್ಟು ಕೈಫಿಯತ್ತುಗಳ ಸಂಶೋಧನೆಯನ್ನು ಸಮಗ್ರ

ಗೊಳಿಸುವುದಕ್ಕೆ ಆಹ್ವಾನವನ್ನು ನೀಡಿದ್ದಾರೆ.

ಕೈಫಿಯತ್ತುಗಳಿಗೆ ಸಂಬಂಧಿಸಿದಂತೆ ಎರಡು ಬಿಡಿ ಪುಸ್ತಕಗಳು ಮತ್ತು ಒಂದು ಸಮಗ್ರ ಕೃತಿ ಪ್ರಕಟವಾಗುವ ಪೂರ್ವದಲ್ಲಿ ವಿರಳವಾಗಿ ಎರಡು ಲೇಖನಗಳು ಕಾಣ ಬರುತ್ತವೆ. ಪ.ಗು.ಹಳಕಟ್ಟಿ ಸಂಸ್ಮರಣ ಸಂಪುಟ 'ಮಣಿಹ' ದಲ್ಲಿ ಡಾ.ಜಿ.ವರದರಾಜರಾವ್ ಅವರ 'ಕನ್ನಡ ಕೈಫಿಯತ್ತುಗಳ' ಲೇಖನ 1982ರಲ್ಲಿಯೇ ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಮೊದಲ ಲೇಖನವಾಗಿದೆ ಮತ್ತು ಇದು ಕೇವಲ ಪರಿಚಯಾತ್ಮಕ ಲೇಖನವಾಗಿದೆ. ಬೈರು, ನಾಮೆ, ಕೈಫಿಯತ್ತು ಶಬ್ದಗಳು ಅನ್ಯ ದೇಶ್ಯವೆಂದು ಒಪ್ಪಿಕೊಳ್ಳುವ ಲೇಖನ ಕಾರರು ಅವೆಲ್ಲವೂ ಒಂದೇ ಸ್ವರೂಪದವೆಂದು ಭಾವಿಸುತ್ತಾರೆ. ಆದರೆ ಅವು ಬೇರೆ ಬೇರೆ ಅರ್ಥಗಳಲ್ಲಿ ಬಳಕೆಗೊಂಡಿವೆ ಎಂಬುದನ್ನು ಅವರು ಮನಗಂಡಿಲ್ಲ. ಕೈಫಿಯತ್ತುಗಳ ವೈವಿಧ್ಯಪೂರ್ಣ ವಿಷಯಗಳ ಕಡೆ ಲಕ್ಷ್ಯ ನೀಡಿಯುವ ಅವರು ಇದನ್ನರಿತೇ ಕನ್ನಡ ವಿದ್ವಾಂಸರು ಬೈರು, ನಾಮೆ, ಕೈಫಿಯತ್ತುಗಳನ್ನು ಆ ಪೂರ್ವದಲ್ಲಿ ಪತ್ರಿಕೆಗಳಲ್ಲಿ ಪ್ರಕಟಿಸಿದ್ದುಗಳನ್ನು ಪಟ್ಟಿ ಮಾಡಿದ್ದಾರೆ. ಕುಮಾರರಾಮನ ಕೈಫಿಯತ್ತು, ರಾಮನಾಥನ ಬೈರು ಇವುಗಳನ್ನು ಐತಿಹಾಸಿಕ ಸಾಕ್ಷ್ಯಗಳಿಗೆ ಅನುಸಾರವಾಗಿ ಒರೆಯುಟ್ಟು ನೋಡುವುದರ ಮೂಲಕ ಲಕ್ಷ್ಯ ಸೆಳೆದಿದ್ದಾರೆ. ಹೈದರನಾಮ, ರಾಜೇಂದ್ರನಾಮೆಗಳ ಐತಿಹಾಸಿಕ ಅಂಶಗಳ ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಆ ಮೂಲಕ ಭಾಷಾ ವಿಜ್ಞಾನಿಗಳಿಗೆ ಮತ್ತು ಸಮಾಜ ವಿಜ್ಞಾನಿಗಳಿಗೆ ಕೈಫಿಯತ್ತುಗಳು ಸಂಶೋಧನೆಗೆ ಕನ್ಯ ನೆಲವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಎರಡನೇ ಲೇಖನ ಅಖಿಲಭಾರತ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಪುಟ 'ರತ್ನಮಂಜೂಷ' ದಲ್ಲಿ ಕೆ.ಸುಬ್ರಹ್ಮಣ್ಯಭಟ್ ಮತ್ತು ಎಂ.ಜಿ.ಹೆಗಡೆಯವರ 'ಕೈಫಿಯತ್ತುಗಳು' ಲೇಖನ ಪ್ರಕಟವಾಗಿದೆ. ಇದೂ ಕೂಡ ಮೇಲಿನ ಲೇಖನದಂತೆ ಪರಿಚಯಾತ್ಮಕವಾದುದು ಆಗಿದ್ದು, ಕೈಫಿಯತ್ತುಗಳ ಅಧ್ಯಯನದ ಮಹತ್ವದ ಕಡೆ ಗಮನ ಸೆಳೆಯುತ್ತದೆ. ಕೈಫಿಯತ್ತುಗಳನ್ನು ಅವುಗಳ ವಿಷಯ ಆಧರಿಸಿ ಜಾತಿ ವಿಚಾರಗಳಿಗೆ ಸಂಬಂಧಪಟ್ಟವುಗಳು, ಧರ್ಮಪೀಠದ ಮಹತ್ವ ಮತ್ತು ವಂಶಾವಳಿಯನ್ನು ಸೂಚಿಸುವವುಗಳು, ಸ್ಥಳ ವಿಶೇಷಗಳನ್ನು ವಿವರಿಸತಕ್ಕವುಗಳು, ಪತ್ರ ವ್ಯವಹಾರಗಳಿಗೆ ಸಂಬಂಧಪಟ್ಟವುಗಳೆಂದು ವಿಂಗಡಿಸಿಕೊಂಡಿದ್ದಾರೆ.

ಹೀಗೆ ಕೈಫಿಯತ್ತುಗಳಿಗೆ ಸಂಬಂಧಿಸಿದ ಹಾಗೆ ಮೂರು ಕೃತಿಗಳು ಮತ್ತು ಎರಡು ಲೇಖನಗಳಷ್ಟೇ ಪ್ರಕಟವಾಗಿವೆ. ಈ ಅಂಕಿ ಅಂಶಗಳೇ ಕೈಫಿಯತ್ತುಗಳಿಗೆ ಸಂಬಂಧಿಸಿದಂತೆ ವಿಶೇಷ ಅಧ್ಯಯನಗಳು ಇದುವರೆಗೆ ನಡೆದಿಲ್ಲವೆಂಬುದನ್ನು ಸೂಚಿಸುತ್ತವೆ. ವಾಸ್ತವವಾಗಿ ಇದು ಅಧ್ಯಯನಕಾರರ ಧೋರಣೆಗಳಿಗೂ ಸಂಬಂಧಿಸಿದೆ. ಯಾಕೆಂದರೆ ಜನಸಾಮಾನ್ಯರಿಂದ ಸಂಗ್ರಹಿತವಾದ ಮಾಹಿತಿಗಳನ್ನು ತಮ್ಮ ಅಧ್ಯಯನಗಳಿಗೆ ಹೇಗೆ ಬಳಸಿ ಕೊಳ್ಳಬೇಕೆಂಬ ಬಗ್ಗೆ ವಿದ್ವಾಂಸರಲ್ಲಿ ಖಚಿತ ಅಭಿಪ್ರಾಯವಿದ್ದಂತಿಲ್ಲ. ಕುಶಾಲಪ್ಪಗೌಡ.ಕೆ. ಚಿನ್ನಪ್ಪಗೌಡ.ಕೆ. ಪ್ರಕಟಿಸಿದ ಪುಸ್ತಕವು ಕೈಫಿಯತ್ತುಗಳನ್ನು ವಿದ್ವಾಂಸರಿಗೆ ಪರಿಚಯಿಸುವ ಉದ್ದೇಶಕ್ಕಾಗಿಯೇ ರಚನೆಗೊಂಡಿದೆ. ಅವರು ಸಂಗ್ರಹಿಸಿ ಕೊಟ್ಟ ಕರಾವಳಿಯ ಕೈಫಿಯತ್ತು

ಗಳನ್ನು ವಿದ್ವಾಂಸರಿಗೆ ಪರಿಚಯಿಸುವ ಉದ್ದೇಶಕ್ಕಾಗಿಯೇ ರಚನೆಗೊಂಡಿದೆ. ಅವರು ಸಂಗ್ರಹಿಸಿಕೊಂಡು ಕರಾವಳಿಯ ಕೈಫಿಯತ್ತುಗಳನ್ನು ಯಾವುದೇ ಅಧ್ಯಯನಕ್ಕೆ ಅವರೇ ಒಳಪಡಿಸಿಲ್ಲ. ಬಳವಲಿಯವರ ಪುಸ್ತಕವು ಕೂಡ ಪರಿಚಯಾತ್ಮಕವಾಗಿದೆ. ಮತ್ತು ಆ ಪುಸ್ತಕದ ಮುಖ್ಯ ಭಾಗ ಮೆಕೆಂಜಿಯವರ ಪರಿಚಯಕ್ಕಾಗಿಯೇ ಸೀಮಿತಗೊಂಡಿದೆ. ಎಂ.ಎಂ.ಕಲಬುರ್ಗಿಯವರು 134 ಕೈಫಿಯತ್ತುಗಳಿಗೆ ಬರೆದ ಮುನ್ನುಡಿ ಕೂಡ ವಿಶ್ಲೇಷಣಾತ್ಮಕವಾಗಿಲ್ಲದಿರುವುದೂ ಕಂಡುಬಂದಿದೆ. ಏಕೆಂದರೆ ಕೈಫಿಯತ್ತುಗಳ ಪ್ರಕಟಣೆಯೇ ಅವರ ಮುಖ್ಯ ಉದ್ದೇಶವಾಗಿತ್ತು. ಮೇಲಾಗಿ ಕೈಫಿಯತ್ತುಗಳು ಪ್ರಕಟಿಸುವ ರಾಜಕೀಯ,ಸಾಮಾಜಿಕ,ಸಾಂಸ್ಕೃತಿಕ ಅರ್ಥವನ್ನು ಶೋಧಿಸುವಲ್ಲಿ ಅವರು ಆಸಕ್ತಿಯನ್ನು ತೋರಿಸಿಲ್ಲ. ಅವರು ಬಳಸಿದ 'ಅಸತ್ಯ ವಿಷಯ' ಎಂಬ ಪದವನ್ನೇ ಗಮನಿಸಬೇಕು. ಸಾಮಾನ್ಯವಾಗಿ ಕೈಫಿಯತ್ತುಗಳು ಒಂದು ಕಾಲದ ಸತ್ಯವನ್ನು ಭಿನ್ನ ರೀತಿಯಲ್ಲೇ ಪ್ರಕಟಿಸಿವೆ. ಅವನ್ನು ಅಸತ್ಯ ಎಂದು ಕರೆಯಲಾಗದು. ನಾವು ನಿರೀಕ್ಷಿಸುವ ಸತ್ಯ ಅದರಲ್ಲಿ ಇಲ್ಲದಿರಬಹುದು ಆದರೆ ಅವುಗಳೇ ಹೇಳುವ ಸತ್ಯವಂತೂ ಅಲ್ಲಿರುವುದು ಖಚಿತ. ಪುರಾಣಗಳು ಯಾವುದೋ ಕಾಲದಲ್ಲಿ ಘಟಿಸಿದಂತೆಯೋ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲ (ಅವು ಅಸತ್ಯವೂ ಇರಬಹುದು) ಆದರೆ ನಮಗೆ ಮುಖ್ಯವಾಗಿರುವುದು ಜನರು ಅದನ್ನು ನಿಜವಾದ ಘಟನೆ ಎಂದೇ ನಂಬಿದ್ದಾರೆ ಎಂಬುದು ಹಾಗಾಗಿ ಜನರು ಏನನ್ನು ನಂಬಿದ್ದಾರೆ, ಹಾಗೆ ನಂಬುವುದಕ್ಕಿದ್ದಂತಹ ಕಾರಣಗಳೇನು ಮತ್ತು ನಂಬಿದ್ದರ ಪರಿಣಾಮಗಳೇನು ಎಂದು ವಿಶ್ಲೇಷಿಸಿಕೊಂಡಾಗ ಕೈಫಿಯತ್ತುಗಳು ಪ್ರಕಟಿಸುವ ಸತ್ಯದ ಒಂದು ಮುಖ ಸ್ಪಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಕೈಫಿಯತ್ತುಗಳಲ್ಲಿ ಪ್ರತೀತಗೊಂಡ ಸ್ಥಳನಾಮಗಳ ಅಧ್ಯಯನವನ್ನು ನಡೆಸಲಾಗಿದೆ. ಆರಂಭಿಕ ಹಂತದ ವಿವರಣಾತ್ಮಕ ನೆಲೆಗಳಿಂದ ವಿಶ್ಲೇಷಣಾತ್ಮಕ ಹಂತದೆಡೆಗೆ ದಾಟಬೇಕಾದುದು ಈಗ ಅವಶ್ಯವೂ ಹೌದು; ಅನಿವಾರ್ಯವೂ ಹೌದು.

2.1.3 <u>ಕೈಫಿಯತ್ತುಗಳ ನಿರೂಪಕರು</u> :

'ಕರ್ನಾಟಕದ ಕೈಫಿಯತ್ತುಗಳು' ಗ್ರಂಥದಲ್ಲಿ ದಾಖಲಾದ ಕೈಫಿಯತ್ತುಗಳನ್ನು ಗಮನಿಸಿ ಅಂತಹ ಕೈಫಿಯತ್ತುಗಳಲ್ಲಿ ದಾಖಲೆ ಆಗಿರುವಂತೆ ಬರೆಸಿದ ಕೈಫಿಯತ್ತು, ಬರೆಸಿದ ಕಾಲ, ನಿರೂಪಕರ ಮತ್ತು, ಜಾತಿಯನ್ನು ಕುರಿತಂತೆ ಈ ಮುಂದಿನ ಪುಟಗಳಲ್ಲಿ ಪಟ್ಟಿ ಮಾಡಲಾಗಿದೆ. ಈ ಪಟ್ಟಿಯು ಒಟ್ಟು ಮಹಾಪ್ರಬಂಧದ ಸೈದ್ಧಾಂತಿಕ ನೆಲೆಯನ್ನು ತಿಳಿಯಲು ಸಹಾಯವಾಗಬಹುದೆಂಬ ದೃಷ್ಟಿಕೋನವನ್ನು ಇಟ್ಟುಕೊಳ್ಳಲಾಗಿದೆ. ಇಲ್ಲಿಯ ಬಹುತೇಕ ನಿರೂಪಕರು ವಿವಿಧ ಜಾತಿಗಳಿಗೆ ಸೇರಿದವರಾಗಿದ್ದಾರೆ. ಬ್ರಾಹ್ಮಣ, ಲಿಂಗಾಯತ, ಜೈನ, ಕುಂಚ ಒಕ್ಕಲಿಗ ಜಾತಿಗಳಿಗೆ ಸೇರಿದ ನಿರೂಪಕರಿದ್ದಾರೆ. ಇಲ್ಲಿಯ ಎಲ್ಲಾ ಕೈಫಿಯತ್ತುಗಳನ್ನು ಅಲ್ಲಿಯ ಸ್ಥಳೀಯ ಜನರು ತಮ್ಮ ತಮ್ಮ ಸ್ಥಳದಲ್ಲಿಯೇ ನಿರೂಪಣೆ ಮಾಡಿರುವುದು ಕಂಡುಬರುತ್ತದೆ.

2·1·3 ಕೈಫಿಯತ್ತುಗಳ ನಿರೂಪಕರು

ಕ್ರ·ಸಂ··	ಬರೆಸಿದ ಕೈಫಿಯತ್ತುಗಳು	ಬರೆಸಿದ ಕಾಲ	ಕೈಫಿಯತ್ತಿನ ನಿರೂಪಕರು	ವಯಸ್ಸು	ಜಾತಿ
1·	ಕೈಫಿಯತ್ತು, ತಾಲೂಕ ಅಜಂಪುರ	ಕ್ರೋಧನನ ಕಾರ್ತೀಕಶುದ್ಧ 1ಲು ಸಂ· 1805 ಇಸವಿ ಒತ್ತರಿ ಅಕ್ಟೋಬರ ತಾ·22	ನಾಡಿಗ(ಗ)ರ ಸೋಮಪ್ಪಯ್ಯ		ಬ್ರಾಹ್ಮಣ?
2·	ನಾಗಮಂಗಲದ ಕೈಫಿಯತ್ತು	1807ನೇ ಇಸವಿ ಮಾಹೆ ಜನವರಿ ತಾ·15ಇಸವಿ· ಶಾಲಿವಾಹನ ಶಕೆ 1728ನೇ ಅಕ್ಷಯನಾಮ ಸಂವತ್ಸರ	ಶಿವಸ್ವಾಮಯ್ಯರಾಮಯ್ಯ ಶೀನಪ್ಪ ಶಿರಸ್ತೇದಾರ ಬಾಳರಾಮ ಸಾವಿರಸ್ವಾಮಯ್ಯ ವೆಂಕಟರಮಣಯ್ಯ ಭೀಮಸೇನಭೋಗರು ಶಿವಪ್ಪಯ್ಯ ವೆಂಕಟರಮಣಯ್ಯ		ಬ್ರಾಹ್ಮಣ?
3·	ಕೈಫಿಯತ್ತು ಬುಕ್ಕರ ಹಳ್ಳಿ, ತಾಲೂಕ ಬಳ್ಳಾರಿ	ಅಕ್ಟೋಬರ 1809 ಸಂವತ್ಸರ	ಕಾಟಪ್ಪ ಹೊಸಪುರಪ್ಪ ನಾರಾಯಣರಾವ		? ? ಬ್ರಾಹ್ಮಣ
4·	ಕೈಫಿಯತ್ತು ಕುರುಗೋಡು ತಾಲ್ಲೂಕ ಬಳ್ಳಾರಿ	ತಾರೀಖು 12 ಮಾಹೆ ಅಕ್ಟೋಬರ ಸನ 1809 ಇಸವಿ	ದೇಶಾಯಿ ಶಿವಪ್ಪ ದೇಶಾಯಿ ಸೀನಪ್ಪ ದೇಶಾಯಿ ವಿರೂಪಾಕ್ಷಪ್ಪ ನಾಡಕರ್ಣಿ ರಾಮಪ್ಪ ಸುಬ್ಬರಾಯ ನಾರಾಯಣರಾಯ	70 40 35 35 32	ಲಿಂಗಾಯತ? .. .. .. ? ಬ್ರಾಹ್ಮಣ ..
5·	ಸೋದೆ ಸಂಸ್ಥಾನದ ಕೈಫಿಯತ್ತು	ಸನ್ ಕ್ರಿ·ಶ·1815 ಜನವರಿ	ಕೃಷ್ಣರಾವ		..

6.	ಬನವಾಸಿ ಸ್ಥಳದ ಕೈಫಿಯತ್ತು—11	ಸನ್ 1813ನೆಯ ಇಸವಿ (ಶ್ರೀಮುಖ ಸಂವತ್ಸರದ) ಡಿಸೆಂಬರ ಮಾಹೆ ತಾ·8ನೆಯ ಮಾರ್ಗಶಿರ ಬಹುಳ 14 ಸೋಮವಾರದಲ್ಲಿ	ತ್ರಿಕಾಲ ಅರ್ಚಕರು ಆಚಾರ್ಯರು ಪುರೋಹಿತ ರಂ ಭಟ್ಟರು ಜೋಯಿಸ ರಾಮಭಟ್ಟರು	ಬ್ರಾಹ್ಮಣ? ಬ್ರಾಹ್ಮಣ? ಬ್ರಾಹ್ಮಣ? ಬ್ರಾಹ್ಮಣ?
7.	ಕುಂಚ ಒಕ್ಕಲಿಗರ ಕೈಫಿಯತ್ತು	ಭಾವ ಸಂವತ್ಸರದ ನಿಜ ಭಾದ್ರಪದ ಶು·8	(ಕಟ್ಟಿಮನೆ ತಿರುಕಪ್ಪ ಬುದ್ಧಿವಂತ ರಂಗಪ್ಪ, ಹನುಮಣ್ಣ) ಜಾತಿಯವರಿಗೆ ತಾತಾಚಾರ್ಯರು ಬರೆಸಿಕೊಟ್ಟರು	ಕುಂಚವಕ್ಕಲಿಗ •• ಬ್ರಾಹ್ಮಣ
8.	ಕಂಪಲಿ ಕೈಫಿಯತ್ತು		ಶ್ರೀಕೃಷ್ಣಪದಯ್ಯಗೌಡ ಶಾನುಭೋಗ ವೆಂಕಟ ಪತಯ್ಯ	ಬ್ರಾಹ್ಮಣ(?) ••
9.	ನಗರ ಸೀಮೆ ಕೈಫಿಯತ್ತು		ಯಾರಪ್ಪ ಜೋಯಿಸರು ಕೃಷ್ಣಪ್ಪ ಜೋಯಿಸರು ಗೋವರ್ಧನ ಜೋಯಿಸರು ಶಲ್ಲಾರಯ್ಯ ಶೆಟ್ಟಿಯಣ್ಣನವರು ಅತಲಾಚಾರ್ಯರ ಮಗ ವರದಾಚಾರ್ಯರ ದಾಸ ಜೋಯಿಸರ	ಬ್ರಾಹ್ಮಣ? ಬ್ರಾಹ್ಮಣ? ಬ್ರಾಹ್ಮಣ? ? ಬ್ರಾಹ್ಮಣ? ?
10.	ಬಸವಲಿಂಗಯ್ಯ ಜಂಗಮ ಕೈಫಿಯತ್ತು	ಪ್ರಭವ ಸಂವತ್ಸರದ ಚೈತ್ರ ಶು 8ಲ್ಲು	ಶಿರಹಟ್ಟಿ ಬಸವಲಿಂಗಯ್ಯ ಜಂಗಮ	ವೀರಶೈವ ಜಂಗಮ
11.	ಬೆಟ್ಟದ ಕೋಟೆ ಕೈಫಿಯತ್ತು	ರಕ್ತಾಕ್ಷಿ ಸಂವತ್ಸರದ ಭಾದ್ರಪದ 10 ಶುಕ್ರವಾರ	ತಿರುಮಲೈಯನವರು ಸ್ಥಾನಿಕರು ತ್ರಯಂಬಕ ಜೋಯಿಸರು ದ್ಯಾವಯ್ಯ ಶಿರಸ್ತೆ ಚೆನ್ನಪ್ಪಯ್ಯ ಶ್ಯಾನಭಾಗ ನರಾಯ್ ನಾರಣಯ್ಯ	 ಬ್ರಾಹ್ಮಣ? ಬ್ರಾಹ್ಮಣ? ? ? ಬ್ರಾಹ್ಮಣ?

12.	ವಿರರ್ತಿ ಕೈಫಿಯತ್ತು		ರಾಮಯ್ಯ ಸುಬ್ಬರಾಯ್ಯ	ಬ್ರಾಹ್ಮಣ?
13.	ಉಡುಗಣಿ ಕೈಫಿಯತ್ತು	ಕ್ರೋಧನ ಸಂವತ್ಸರ ಆಶ್ವಿಜ ಬಹುಳ 7ಲು	ನಾಡಿಗರ ಖಂಡೆರಾಯರು	ಬ್ರಾಹ್ಮಣ?
14.	ಶೃಂಗೇರಿಯ ಕೈಫಿಯತ್ತು	ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶು.3 ಮಂಗಳವಾರ	ಶಿರಸ್ತೇದಾರ ಕೃಷ್ಣರಾಯರು	ಬ್ರಾಹ್ಮಣ
15.	ಸಾಗರದ ಕೈಫಿಯತ್ತು	ಕ್ಷಯ ಸಂವತ್ಸರದ ಆ.ಶು. 15ಲು	ಪಟ್ಟಶೆಟ್ಟಿ ನಂದಿಣ್ಣ	?
16.	ಹೊದಿಗೆರೆ ಶೀವೆ ಕೈಫಿಯತ್ತು		ನಾಡಿಗ ಪುಟ್ಟಯ್ಯ	ಬ್ರಾಹ್ಮಣ?
17.	ಹೊಳೆಹೊನ್ನೂರು ಕೈಫಿಯತ್ತು—2	ಶಾಲಿವಾಹನ ಶಕೆ 1727ನೆಯ ಕ್ರೋಧನ ಸಂವತ್ಸರದ ಚೈತ್ರ ಶು.13 ಮಂಗಳವಾರ	ನಾಡಿಗರ ಸುಬ್ಬಯ್ಯ	ಬ್ರಾಹ್ಮಣ?
18.	ಅದಮಾರು ಮಠದ ಕೈಫಿಯತ್ತು	ಅಕ್ಷಯ ಸಂ. ಜ್ಯೇಷ್ಠ ಶು. 5ಲು	ಅದಮಾರ ಮಠದ ಕೃಷ್ಣಭಟ್ಟರು	ಬ್ರಾಹ್ಮಣ
19.	ಕಾಣಿಯೂರು ಮಠದ ಕೈಫಿಯತ್ತು	ಕ್ಷಯ ಸಂವತ್ಸರದ ಜ್ಯೇಷ್ಠ ಶು.5 ಲು	ಕಾಣಿಯೂರು ಮಠದ ನರಸಿಂಹಭಟ್ಟರು	ಬ್ರಾಹ್ಮಣ ಬ್ರಾಹ್ಮಣ ಬ್ರಾಹ್ಮಣ ಬ್ರಾಹ್ಮಣ
20.	ಕೃಷ್ಣಾಪುರ ಮಠದ ಕೈಫಿಯತ್ತು	ಅಕ್ಷಯನಾಮ ಸಂ. ಪುಷ್ಯ ಶು. 7ಯುಲು	ಕೃಷ್ಣಾಪುರ ಮಠದ ಶಿಷ್ಯಾಂ ಚಾರ್ಯರು	ಬ್ರಾಹ್ಮಣ

21.	ಕಾಪಿನ ದೇವಸ್ಥಾನದ ಕೈಫಿಯತ್ತು		ಕೃಷ್ಣಭಟ್ಟ ಕೃಷ್ಣಯ್ಯ ತಂತ್ರಿ ಉಪಾಧಿ ರಾಂಭಟ ಅಪ್ಪಯ್ಯ ಭಟಕಿ(ಕಳ)ಶಾಂತಿ ಶಂಕರನಾರಾಯಣ	ಬ್ರಾಹ್ಮಣ ಬ್ರಾಹ್ಮಣ ಬ್ರಾಹ್ಮಣ
22.	ಕುಂಜಾರು ಕೈಫಿಯತ್ತು	ಅಕ್ಷಯ ಸಂವತ್ಸರದ ಜೇಷ್ಠ ಶು·8ಉ	ಕುಂಜಾರ ಜೋಗಿಭಟ್ಟ	ಬ್ರಾಹ್ಮಣ
23.	ಕುಂದಾಪುರದ ಕೈಫಿಯತ್ತು		ಶಾನಭಾಗ ವೆಂ(ರಂ)ಗಯ್ಯ ಪಂಡ್ಯ(ನೆಟ್ಟುವ)ಗಾರ	ಬ್ರಾಹ್ಮಣ(?) ಕೋಟಿ (ರಾಮರಾಯ) ಕ್ಷತ್ರಿಯ?
24.	ಕುಂಬಕಾಸಿ ಸ್ಥಳದ ಕೈಫಿಯತ್ತು	ಕ್ಷಯನಾಮ ಸಂ· ಶು·12ಲು	ಪುರಾಣಿಕ ರಾಮಭದ್ರಾಚಾರ್ಯ ಅರ್ಚಕ ವೆಂಕಣ್ಣಭಟ್ಟ	ಬ್ರಾಹ್ಮಣ ಬ್ರಾಹ್ಮಣ
25.	ತುಳುವ ದೇಶದ ಕಸಬಾ ಸಂಸ್ಥಾನದ ಕೈಫಿಯತ್ತು		ಶಾನುಭಾಗ ಸುಬ್ಬಯ್ಯನವರು ಕುಂಬಾಟಿ ಸಂಕಯ್ಯಸಾಬರು	ಬ್ರಾಹ್ಮಣ ?
26.	ಧರ್ಮಸ್ಥಳದ ಕೈಫಿಯತ್ತು		ಕೋಮರಾರ ಹೆಗ್ಗಡೆ	ಜೈನ
27.	ಪುತ್ತಿಗೆ ಮಠ ಕೈಫಿಯತ್ತು	ಅಕ್ಷಯ ಸಂ· ಜೇಷ್ಠ ಶು· 5ಂತುಲು	ಪುತ್ತಿಗೆ ಮಠದ ಕೃಷ್ಣ ಉಪಾಧ್ಯಾಯ	ಬ್ರಾಹ್ಮಣ
28.	ಪೆರಡೂರ ಮಹಾಗಣ ದೇವಾಲಯದ ಕೈಫಿಯತ್ತು	ಅಕ್ಷಯ ಸಂ· ಜೇಷ್ಠ ಶು·12ವೊ ತಾರೀಖು 29ಲು	ಹೆಬ್ಬಾರ ಅನಂತಯ್ಯ ಸಿದ್ದ ಸುಬ್ಬಯ್ಯ	ಬ್ರಾಹ್ಮಣ ?

16

29.	ಪೇಜಾವರ ಮಠದ ಕೈಫಿಯತ್ತು	ಕ್ಷಯ ಸಂ. ಜೇಷ್ಠ ಶು. 5ಲ್ಲು	ಪೇಜಾವರ ಮಠದ ವಿಠಲಭಟ್ಟ	ಬ್ರಾಹ್ಮಣ
30.	ಫಲಿಮಾರ ಮಠದ ಕೈಫಿಯತ್ತು	ಕ್ಷಯ ಸಂ. ಜೇಷ್ಠ ಶು.5ಲ್ಲು	ಫಲಿಮಾರ ಮಠದ ರಾಮರಾಜಾಂತರ್ಯನು	ಬ್ರಾಹ್ಮಣ
31.	ಭಟ್ಕಳದ ಕೈಫಿಯತ್ತು		ವೆಂಕಟೇಶ ಪುರಾಣಿಕ ಶಾನುಭಾಗ ಶಿವಪ್ಪಾಜಿ ಪರಮೇಶ್ವರಯ್ಯ ಗೋಪಾಲಯ್ಯ	ಬ್ರಾಹ್ಮಣ
32.	ಕೊಲ್ಲೂರು ದೇವಸ್ಥಾನದ ಕೈಫಿಯತ್ತು	ಸುರಸನ್ 1806 ಫಸಲಿ ಅಕ್ಷಯ ಸಂವತ್ಸರದ ಮಾಹೆ ಮೇ ತಾರೀಖು 26ಲ್ಲು	ಕೊಲ್ಲೂರು ಶಾನಭಾಗ ವಿಶ್ವೇಶ್ವರಯ್ಯ ಗಂಗಾಧರಯ್ಯ ಶಾನಭಾಗ ನರಸಯ್ಯ ನಾರಣ ಕಂತಿ(ತಂತ್ರಿ)ಅಡಿಗಳು ಮುಕ್ತಿಭಟ್ಟ ಅನಂತಯ್ಯಭಟ್ಟ ರಾಮಕೃಷ್ಣಭಟ್ಟ ಕೃಷ್ಣಜೋಯಿಸ ಯಡುಪ್ಪಕಿಲ್ಲದೇವಾಡಿಗ	ಬ್ರಾಹ್ಮಣ ,, ,, ,, ?
33.	ಶಿರಸಿ ಕೈಫಿಯತ್ತು	ಭಾವ ಸಂವತ್ಸರದ ಆಷಾಡ ಶುದ್ಧ 15ಲ್ಲು	ಶಾನುಭೋಗ ರಾಮಯ್ಯ ನಾಡಿಗ ಶೇಷಯ್ಯ ಪಡಿಗೆರಿ ಶಿವಯ್ಯ	ಬ್ರಾಹ್ಮಣ? ಬ್ರಾಹ್ಮಣ? ಬ್ರಾಹ್ಮಣ?
34.	ಶಿರೂರ ಮಠದ ಕೈಫಿಯತ್ತು	ಅಕ್ಷಯ ಸಂವತ್ಸರದ ಜೇಷ್ಠ ಶುದ್ಧ 6ಲ್ಲು	ಶಿರೂರ ಮಠದ ವಿಠಲಾಚಾರು	ಬ್ರಾಹ್ಮಣ?
35.	ಸೋದೆ ಮಠದ ಕೈಫಿಯತ್ತು	ಅಕ್ಷಯ ಸಂಜೇಷ್ಠ ಶು 30ಯಲ್ಲು	ಮಠದ ನಾರಣಪ್ಪ	ಬ್ರಾಹ್ಮಣ?
36.	ಅಂಕಾಪುರ ಕೈಫಿಯತ್ತು		ಮಡ್ಡಿನ ಗೌಡ ಶಾನುಭೋಗ ಹನುಮಂತಗೌಡ	ಲಿಂಗಾಯತ? ಲಿಂಗಾಯತ?
37.	ಕಮಲಾಪುರದ ಕೈಫಿಯತ್ತು		ಬ್ರಹ್ಮಣ್ಣ ಶಾನುಭೋಗ	ಬ್ರಾಹ್ಮಣ

38.	ಕೈಫಿಯತ್ತು ಕುರುಗೋಡು ತಾಲ್ಲೂಕೆ ಬಳ್ಳಾರಿ	12ನೇ ಆಕ್ಟೋಬರ ಸನ 1809ಯಿಸವಿ	ದೇಶಾಯಿ ಶೀನಪ್ಪ		?
			ದೇಶಾಯಿ ತಿಮ್ಮಪ್ಪ	70	ಲಿಂಗಾಯತ?
			ದೇಶಾಯಿ ಸೀನಪ್ಪ	40	ಲಿಂಗಾಯತ?
			ದೇಶಾಯಿ ವಿರೂಪಾಕ್ಷಪ್ಪ	35	ಲಿಂಗಾಯತ?
			ನಾಡಕುಲಕರ್ಣಿ ರಾಮಪ್ಪ	35	ಲಿಂಗಾಯತ?
			ಸುಬ್ಬರಾಯ	32	ಬ್ರಾಹ್ಮಣ?
39.	ಕೈಫಿಯತ್ತು ಹುಚ್ಚರಹಳ್ಳಿ ತಾಲ್ಲೂಕೆ ಬಳ್ಳಾರಿ	ಆಕ್ಟೋಬರ 1809 ಸಂವತ್ಸರ	ಕಾಳಪ್ಪ		ಬ್ರಾಹ್ಮಣ
			ಹೊನ್ನಪ್ಪರಪ್ಪ		ಬ್ರಾಹ್ಮಣ
			ನರಸಪ್ಪ		ಬ್ರಾಹ್ಮಣ
			ನರಸಿಂಹಯ್ಯ		ಬ್ರಾಹ್ಮಣ
40.	ತಾಲ್ಲೂಕು ಕಂಪಲಿ ಕೈಫಿಯತ್ತು	ಕೃಷ್ಣಪ್ಪಯ್ಯಗೌಡ	ಕೃಷ್ಣಪ್ಪಯ್ಯಗೌಡ		ಲಿಂಗಾಯತ?
			ಶಾ: ವೆಂಕಟಪತಯ್ಯ	60	ಬ್ರಾಹ್ಮಣ?
41.	ಶ್ರೀ ಕೇಶವದೇವರ ಕ್ಷೇತ್ರದ ಕೈಫಿಯತ್ತು		ನಾಡಗೌಡ ನರಸಣ್ಣಗೌಡ		ಲಿಂಗಾಯತ?
			ಬಸವಣ್ಣಗೌಡ		ಲಿಂಗಾಯತ?
			ರಾಮರೆಡ್ಡಿಗೌಡ		ಲಿಂಗಾಯತ?
			ವೆಂಕಣ್ಣಸಂ(ಪಂ)ತನ		
			ಮುತಾಲಿಕಹಂಡೆಹನುಮಂತರಾಯ		?
			ದೇಶಮುಖ ಗೋವಿಂದಪ್ಪ		?
42.	ಹತ್ತಿ ಬೆಳಗಲ್ಲು ಕೈಫಿಯತ್ತು		ಕುಲಕರ್ಣಿ ಸುಬ್ಬಣ್ಣ		ಬ್ರಾಹ್ಮಣ
			ಸೋಮಣ್ಣಗೌಡ		ಲಿಂಗಾಯತ?
			ದೇಶಾಯಿ ಲಿಂಗಪ್ಪ		ಲಿಂಗಾಯತ?
			ವಡಗನಗೌಡ		ಲಿಂಗಾಯತ?
44.	ಹಿರೆಹಾಳು ಕೈಫಿಯತ್ತು		ಕುಲಕರ್ಣಿ ರಾಮಪ್ಪ		ಬ್ರಾಹ್ಮಣ

ಇಲ್ಲಿಯ ಒಟ್ಟು ಕೈಫಿಯತ್ತುಗಳ ನಿರೂಪಕರುಗಳ ಸಂಖ್ಯೆ 106 ಜನ. ನಿಖರವಾಗಿ ಬ್ರಾಹ್ಮಣ ನಿರೂಪಕರು 38 ಜನ, ಸಂದೇಹಾತ್ಮಕ ಬ್ರಾಹ್ಮಣರು 22 ಜನ, ಲಿಂಗಾಯತ ನಿರೂಪಕರು 16 ಜನ, ಕುಂಚಿ ಒಕ್ಕಲಿಗ ನಿರೂಪಕರು 3 ಜನ, ಜೈನ ಜಾತಿಯ ಒಬ್ಬ ನಿರೂಪಕನಿದ್ದಾನೆ. ಇಲ್ಲಿಯ ಎಲ್ಲಾ ನಿರೂಪಕರ ವಯಸ್ಸು ದಾಖಲೆಯಾಗಿಲ್ಲ. ವಿರಳವಾಗಿ ಕೆಲವು ನಿರೂಪಕರ ವಯಸ್ಸು ಅಂದಾಜಾಗಿ ದಾಖಲುಗೊಂಡಿದೆ. ಕೈಫಿಯತ್ತುಗಳನ್ನು ಬರೆಸಿದ ಕಾಲವನ್ನು ಶಾಲಿವಾಹನ ಶಕದಲ್ಲೂ, ಕ್ರಿಸ್ತಶಕದ ಮಾದರಿಯಲ್ಲೂ ದಾಖಲುಗೊಂಡಿದೆ.

ಈ ಇಡೀ ಪಟ್ಟಿಯನ್ನು ಗಮನಿಸಿದರೆ ಇಲ್ಲಿಯ ಒಟ್ಟು ನಿರೂಪಕರ ಸಂಖ್ಯೆಯ ಶೇಕಡವಾರು 60 ಜನರು ಬ್ರಾಹ್ಮಣ ವರ್ಗಕ್ಕೆ ಸೇರಿದವರಾಗಿದ್ದಾರೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಕುಂಚಿ ಒಕ್ಕಲಿಗರ ಕೈಫಿಯತ್ತನ್ನು ನಿರೂಪಣೆ ಮಾಡಿದ ಆ ಜಾತಿಯ ಕಬ್ಬೀಮನೆ ತಿರುಕಪ್ಪ ಮತ್ತು ಬುದ್ಧಿವಂತ ರಂಗಪ್ಪ, ಹನುಮಣ್ಣನಿಗೆ ಆ ಜಾತಿಯ ಕೈಫಿಯತ್ತನ್ನು ಬ್ರಾಹ್ಮಣ ಕಾತಾಚಾರ್ಯರು ಬರೆಸಿಕೊಟ್ಟರು; ಹೀಗೆ ಕೈಫಿಯತ್ತುಗಳ ನಿರೂಪಕರು ಇಡೀಯಾಗಿ ಬ್ರಾಹ್ಮಣರಾಗಿದ್ದಾರೆ. ಎಂಬ ತೀರ್ಮಾನಕ್ಕೆ ಸ್ಪಷ್ಟವಾಗಿ ಬರಬಹುದಾಗಿದೆ. ಕೈಫಿಯತ್ತುಗಳನ್ನು ನಿರೂಪಣೆ ಮಾಡಿದ ಪ್ರದೇಶವನ್ನು ಬದಿಗಿಟ್ಟು ನಿರೂಪಣೆ ಮಾಡಿದ ಬ್ರಾಹ್ಮಣ ವರ್ಗವು ಮೇಲ್ವರ್ಗವಾಗಿದ್ದಿತೆಂದು ಮತ್ತು ಇವರು ಯುರೋಪಿಯನ್ ವಸಾಹತು ಶಾಹಿಗೆ ಎಷ್ಟು ಹತ್ತಿರದವರಾಗಿದ್ದರೆಂಬುದು ಈ ಪಟ್ಟಿಯನ್ನು ನೋಡುವುದರ ಮೂಲಕ ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಈ ಬ್ರಾಹ್ಮಣ ವರ್ಗವನ್ನು ಬಿಟ್ಟರೆ ಎರಡನೆಯ ಸ್ಥಾನದಲ್ಲಿ ಲಿಂಗಾಯತ ಜಾತಿಯವರಿದ್ದಾರೆ. ಇಷ್ಟು ಶೇಕಡವಾರು ನಿರೂಪಕರ ಸಂಖ್ಯೆಯನ್ನು ಗಮನಿಸಿ ನಾವು ಕೈಫಿಯತ್ತುಗಳನ್ನು ನಿರೂಪಣೆ ಮಾಡಿದವರೆಲ್ಲರೂ ನಿಖರವಾಗಿ ಮೇಲ್ವರ್ಗದವರೆಂದೇ ತೀರ್ಮಾನಿಸಿಕೊಳ್ಳಬಹುದಾಗಿದೆ.

2·2 : ಕೈಫಿಯತ್ತುಗಳ ಸಂಗ್ರಹ ಕಾರ್ಯದ ಸಾಂಸ್ಕೃತಿಕ ನೆಲೆಗಳು:

2.2 ಕೈಫಿಯತ್ತುಗಳ ಸಂಗ್ರಹಕಾರ್ಯದ ಸಾಂಸ್ಕೃತಿಕ ನೆಲೆಗಳು :

ಕೈಫಿಯತ್ತುಗಳು ಸಂಗ್ರಹವಾಗಿದ್ದು 17ನೆಯ ಶತಮಾನದ ಕೊನೆ ಮತ್ತು 18ನೇ ಶತಮಾನದ ಪೂರ್ವಾರ್ಧದಲ್ಲಿ. 17ನೆಯ ಶತಮಾನದ ಕೊನೆಯಲ್ಲಿ ಬ್ರಿಟಿಷ್ ವಸಾಹತು ಶಾಹಿಯು ತನ್ನ ಕಬಂಧ ಬಾಹುಗಳನ್ನು ದೇಶದ ಪ್ರಮುಖ ವ್ಯಾಪಾರಿ ಕೇಂದ್ರಗಳಲ್ಲಿ ನೆಲೆ ನಿಂತು ನಿಧಾನವಾಗಿ ಚಾಚುತ್ತಿತ್ತು. ವ್ಯಾಪಾರವೇ ಪ್ರಮುಖ ಉದ್ದೇಶವಾಗಿಟ್ಟುಕೊಂಡು ಬಂದ ಬ್ರಿಟಿಷರಿಗೆ ಇಲ್ಲಿಯ ಆರ್ಥಿಕ ಸಂಪನ್ಮೂಲಗಳ ಬಗೆಗಿನ ಮಾಹಿತಿಯು ಅಷ್ಟೇ ಅವಶ್ಯಕವಾಗಿತ್ತು. ಅದಕ್ಕಾಗಿಯೇ ಅವರು ಭೂಪಟಗಳನ್ನು ನಕ್ಷೆಗಳನ್ನು ಸಿದ್ಧಪಡಿಸುವ, ಭೂಮಿಯ ಸರ್ವೇ ಮಾಡುವ ಕಾರ್ಯದಲ್ಲಿ ತೊಡಗಿದರು ಅದಕ್ಕಾಗಿಯೇ ಎನ್ನುವಂತೆ 1793ರಲ್ಲಿ ಕಾರ್ನವಾಲೀಸನು ಮೆಕೆಂಜಿಯನ್ನು ಹೈದರಾಬಾದಿನ ನಿಜಾಮನಿಂದ ಈಸ್ಟ್ ಇಂಡಿಯಾ ಕಂಪನಿಗೆ ದೊರಕಿದ ಭೂಮಿಯನ್ನು ಅಳೆಯಲು ನೇಮಿಸಿದ. 1783ರಿಂದ 1796ರ ವರೆಗಿನ 13 ವರ್ಷಗಳ ಉದ್ದಕ್ಕೂ ಒಂದು ಆಧಿಪತ್ಯದಿಂದ ಇನ್ನೊಂದು ಆಧಿಪತ್ಯಕ್ಕೆ ಮೆಕೆಂಜಿಯು ಸುತ್ತುತ್ತಲೇ ಇದ್ದ. 1796ರಲ್ಲಿ ಆತ ಸಿಂಹಳದಿಂದ ಭಾರತಕ್ಕೆ ಬಂದ ನಂತರ ದಕ್ಷಿಣ ಭಾರತದ ಭೂಪಟವನ್ನು ಸಿದ್ಧಗೊಳಿಸುವುದರಲ್ಲಿ ನಿರತನಾದ. ಈ ಭೂಪಟವನ್ನು ತಯಾರಿಸುವ ಸಂದರ್ಭದಲ್ಲಿ ಮೆಕೆಂಜಿಯು ಸಾವಿರಾರು ಹಸ್ತಪ್ರತಿಗಳನ್ನು,ಶಾಸನಗಳನ್ನು ಸಂಗ್ರಹಿಸಿದ್ದಾನೆ. ಅಲ್ಲದೆ ಕೈಫಿಯತ್ತುಗಳನ್ನು ಬರೆಸಿ ಸಂಗ್ರಹಿಸಿಕೊಂಡಿದ್ದಾನೆ. ಆ ಮೂಲಕ ದಕ್ಷಿಣಭಾರತದ ಇತಿಹಾಸವನ್ನು ಪುನರ್ ನಿರ್ಮಿಸಲು ಬೇಕಾದ ಎಲ್ಲಾ ವಿಚಾರಗಳನ್ನು ಕೂಡಿಸಿದ್ದಾನೆ.

ಈ, ಆಕರ ಸಾಮಗ್ರಿಗಳನ್ನು ಕೂಡಿ ಹಾಕುವ ಅಗತ್ಯತೆ ಬ್ರಿಟಿಷರಿಗೆ ಎರಡು ಕಾರಣಗಳಿಗಾಗಿ ಬೇಕಾಗಿತ್ತು. ಮೊದಲನೆಯದಾಗಿ ಆರ್ಥಿಕ ಮೂಲಗಳ ಮಾಹಿತಿಯನ್ನು ಪಡೆಯುವುದು ಇನ್ನೊಂದು ಆ ಮೂಲಕ ಬ್ರಿಟಿಷ್ ಆಡಳಿತವನ್ನು ಇಲ್ಲಿ ಭದ್ರಪಡಿಸುವುದಾಗಿತ್ತು.

ನಾವು ಕೈಫಿಯತ್ತುಗಳನ್ನು ಗಮನಿಸಿದರೆ ಬಹುತೇಕ ಕೈಫಿಯತ್ತುಗಳಲ್ಲಿ ಆ ನಾಡು ಅಥವಾ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳ ವಿವರಗಳು, ಭೌಗೋಳಿಕ ಪರಿಚಯ ಕಂಡುಬರುತ್ತದೆ. ಮತ್ತು ಮೆಕೆಂಜಿಯು ಈ ಕೈಫಿಯತ್ತುಗಳನ್ನು ಸಂಗ್ರಹಿಸಿಕೊಂಡದ್ದು ನಿರೂಪಿಸಿಕೊಂಡದ್ದು ಸ್ಥಳೀಯ ವಿದ್ವಾಂಸರಿಂದ. ಈ ಸ್ಥಳೀಯ ವಿದ್ವಾಂಸರನ್ನು ಸಂಪರ್ಕಿಸಿ ಮತ್ತು ಸುಮಾರು 42,000 ಮೈಲುಗಳಷ್ಟು ಉದ್ದದ ಪ್ರದೇಶವನ್ನು ಆತ ಸುತ್ತಬೇಕಾಗಿ ಬಂದದ್ದರ ಕಾಲದ ಬಗೆಯೂ ನಾವು ಗಮನಿಸಬೇಕಾಗುತ್ತದೆ. ಏಕೆಂದರೆ ಈ ಕಾರ್ಯವನ್ನು ಅವನು 1799ರ ಟಿಪ್ಪುವಿನ ಪತನದ ನಂತರ ಆತನ ವಿರೋಧವಾಗಿ ಪ್ರಚಾರ ಮಾಡಲು ಮೈಸೂರು ಪ್ರಾಂತದಲ್ಲಿ ಸುತ್ತಾಡಿದ ಮತ್ತು ಭೂವೀಕ್ಷಣೆಗೆ ತೊಡಗಿದ. ಆ ಮೂಲಕ ದಕ್ಷಿಣಭಾರತದ ಭೂಪಟವನ್ನು ಸಿದ್ಧಪಡಿಸಿದ. ಇದರ ಸರಿಯಾದ ಭೂಪಟವನ್ನು ಸಿದ್ಧಪಡಿಸಲು ಮೆಕೆಂಜಿಗೆ ಹಸ್ತಪ್ರತಿ, ಶಾಸನಗಳ ಜೊತೆಗೆ ಕೈಫಿಯತ್ತುಗಳನ್ನು ಬರೆಸಿ

ಕೊಳ್ಳುವುದೂ ಅನಿವಾರ್ಯವಾಗಿ ಕಂಡು ಬಂದಿರಬೇಕು. ಏಕೆಂದರೆ ಕೈಫಿಯತ್ತುಗಳನ್ನು ಸಂಗ್ರಹಿಸಿದ ಬಗೆಯನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಈತನ ಸಂಗ್ರಹ ಕಾರ್ಯದಲ್ಲಿ ನೆರವಾದವರು ಕಾವಲಿ ವೆಂಕಟ ಬೋರಯ್ಯ, ವೆಂಕಟ ಲಕ್ಷ್ಮಯ್ಯ, ಆನಂದರಾವ, ಬಾಬುರಾವ ಇತ್ಯಾದಿ. ಕೈಫಿಯತ್ತುಗಳನ್ನು ನಿರೂಪಣೆ ಮಾಡಿದವರೆಲ್ಲರು ಬಹುತೇಕವಾಗಿ ಬ್ರಾಹ್ಮಣರೆ ಆಗಿದ್ದಾರೆ.

ಕೈಫಿಯತ್ತುಗಳನ್ನು ಈ ಪ್ರಕಾರ ನಿರೂಪಣೆ ಮಾಡಿದ ಈ ಬ್ರಾಹ್ಮಣ ವರ್ಗವು ಸಾಮಾಜಿಕ ರಚನೆಯಲ್ಲಿ ಯಾವ ಸ್ಥಾನದಲ್ಲಿ ಆ ಕಾಲ ಘಟ್ಟದಲ್ಲಿ ಪಡೆದವರಾಗಿದ್ದರು ಮತ್ತು ವಸಾಹತು ಶಾಹಿ ಆಗಮನವು ಈ ವರ್ಗದ ಮೇಲೆ ಯಾವ ರೀತಿಯ ಸಾಮಾಜಿಕ ಸ್ಥಿತ್ಯಂತರಗಳನ್ನು ಹೇರಿತ್ತು ಎಂಬುದರ ಆಧಾರದ ಮೇಲೆ ಕೈಫಿಯತ್ತುಗಳ ಸಂಗ್ರಹ ಕಾರ್ಯದ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿಕೊಳ್ಳಬಹುದು.:

ಕೈಫಿಯತ್ತುಗಳನ್ನು ಸಂಗ್ರಹಿಸಿದ್ದು 18ನೆಯ ಶತಮಾನದ ಕಾಲಾವಧಿಯಲ್ಲಿ. ಈ ಶ.ದ ದ್ವಿತೀಯಾರ್ಧದಲ್ಲಿ ಭಾರತದ ಊಳಿಗಮಾನ್ಯ ವಿಧಾನದ ಉತ್ಪಾದನೆಯಲ್ಲಿ ವಿಸಂಘಟನೆ ಕಂಡುಬಂತು. ರೈತರು ಮತ್ತು ಸಾಮಾನ್ಯ ವರ್ಗ ಊಳಿಗಮಾನ್ಯ ವ್ಯವಸ್ಥೆಯಿಂದ ಶೋಷಣೆಗೆ ಒಳಗಾದಾಗ ಸಾಮಾಜಿಕ ಪ್ರತಿಭಟನೆಯ ಮೂಲಕ ಇದಕ್ಕೆ ಪ್ರತಿಕ್ರಿಯೆಯನ್ನು ತೋರಿಸಿದರು. ಇದರ ಪರಿಣಾಮವಾಗಿ ಮೊಗಲ ಸಾಮ್ರಾಜ್ಯ ಅವನತಿಗೊಂಡಿತು. ಈ ಸಂದರ್ಭದಲ್ಲಿ ಯುರೋಪಿಯನ್ನರು ದೊಡ್ಡ ದೊಡ್ಡ ವಾಣಿಜ್ಯ ಕೇಂದ್ರಗಳನ್ನು ನಿರ್ಮಿಸುವುದಕ್ಕೆ ತೊಡಗಿದರು. ಈ ಮೂಲಕ ನಾಡಿನ ಐತಿಹಾಸಿಕ ಭವಿತವ್ಯವು ಬೇರೊಂದು ತಿರುವನ್ನು ಪಡೆದುಕೊಂಡಿತು. ಮತ್ತು ಭಾರತವನ್ನು ಜಾಗತಿಕ ಮಾರುಕಟ್ಟೆಯಲ್ಲಿಯ ಪರಿಧಿಯೊಳಕ್ಕೆ ಸೆಳೆದುಕೊಂಡಿತು.

ಬ್ರಿಟೀಷ ವಸಾಹತು ಶಾಹಿ ಕ್ರಮೇಣ ಭಾರತದಲ್ಲಿ ಖಾಸಗಿ ಭೂ ಒಡೆತನದ ವ್ಯವಸ್ಥೆಯನ್ನು ಹುಟ್ಟು ಹಾಕಿತು. ಭೂ ಮಾಲೀಕರು ಇನ್ನಷ್ಟು ಮತ್ತಷ್ಟು ಭೂಮಿಯ ಒಡೆತನವನ್ನು ಸಾಧಿಸಿಕೊಂಡು ವಸಾಹತುವಾದಿಗಳಿಗೆ ಸಾಮಾಜಿಕ ಬೆಂಬಲವನ್ನು ನೀಡುವ ಶಕ್ತಿಯಾಗಿ ಮೂಡಿ ನಿಂತಿತು. ಸಾಮಾನ್ಯ ಜನ ವರ್ಗ ಆ ಮೂಲಕ ನಿರ್ಲಕ್ಷ್ಯಕ್ಕೀಡಾಯಿತು.

ಆಡಳಿತಾತ್ಮಕವಾಗಿ ರಾಜ್ಯ ಪ್ರಾಂತ್ಯಗಳನ್ನಾಗಿ ವಿಂಗಡಿಸುವುದರೊಂದಿಗೆ ಬ್ರಿಟೀಷರು ಪಾಶ್ಚಾತ್ಯ ನಾಗರಿಕ ಸೌಕರ್ಯದ ಅಂಶಗಳನ್ನು ವಿಸ್ತರಿಸತೊಡಗಿದರು. ಕ್ರಿ.ಶ. 1862ರ ಹೊತ್ತಿಗೆ ಕಲ್ಕತ್ತ, ಮದ್ರಾಸ, ಮುಂಬಯಿ ನಗರಗಳಲ್ಲಿ ರೈಲು ಮಾರ್ಗಗಳು ಜೋಡಿಸಲ್ಪಟ್ಟವು. ತಂತಿ ಸಂಪರ್ಕ, ಅಂಚೆ ವ್ಯವಸ್ಥೆಗಳು ಸುಧಾರಣೆಗೊಂಡವು. ಅಲ್ಲದೆ ಬ್ರಿಟೀಷ ಆಡಳಿತ ವ್ಯವಸ್ಥೆ ಸ್ಥಳೀಯ ರಾಜ್ಯ ಶಾಹಿ ಆಡಳಿತಕ್ಕಿಂತ ದಕ್ಷವಾಗಿತ್ತು. ಕೆಲವೇ ಬ್ರಿಟೀಷ ಅಧಿಕಾರಿಗಳು ಇಡೀ ಜಿಲ್ಲೆಯೊಂದನ್ನು ಸಮರ್ಥವಾಗಿ ನಿಯಂತ್ರಿಸ

ಬಲ್ಲವರಾಗಿದ್ದರು. ಹೀಗೆ ನಿರ್ವಹಿಸುವ ಸಮಯದಲ್ಲಿ ಸ್ಥಳೀಯ ಶಾನುಭೋಗ ಬ್ರಾಹ್ಮಣರ ಸಹಾಯವನ್ನು ಜಾಣ್ಮೆಯಿಂದ ಪಡೆದುಕೊಳ್ಳುತ್ತಿದ್ದರು. ಪಾಶ್ಚಾತ್ಯರ ಭಿನ್ನವಾದ ನಾಗರಿಕತೆ ಒಂದರ್ಥದಲ್ಲಿ ಆಕರ್ಷಕವಾಗಿ ಈ ವರ್ಗಕ್ಕೆ ಕಂಡುಬಂದುದರಿಂದ ಬ್ರಿಟೀಷರಿಗೆ ಇಲ್ಲಿಯ ಮೇಲ್ವರ್ಗ ಸಹಕರಿಸುತ್ತಾ ಬಂತು.

ವ್ಯವಹಾರಿಕವಾಗಿ ಯುರೋಪಿಯನ್ ಔದ್ಯೋಗಿಕ ಸುಧಾರಣೆಗಳು ಭಾರತದಲ್ಲಿ ಕಾಣಿಸಿಕೊಳ್ಳತೊಡಗಿದವು. ಉದ್ಯಮ ಕೈಗಾರಿಕೆಗಳಿಗೆ ಸಂಬಂಧಿಸಿದ ಯಂತ್ರ ಸಾಮಗ್ರಿಯ ಜೊತೆಗೆ ಮುದ್ರಣ ಸಾಮಗ್ರಿಯ ಪ್ರವೇಶವೂ ಆಯಿತು. ಇದರ ಮೂಲಕ ಸ್ವಮತ ಪ್ರಸಾರಕ್ಕಾಗಿ ಮಿಶನರಿಗಳು ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳನ್ನು ನೇರವಾಗಿ ಪ್ರವೇಶಿಸಿದರು. ಇಲ್ಲಿಯ ಮನಸ್ಸುಗಳ ಮೇಲೆ ಅದನ್ನು ಪ್ರವೇಶಿಸಬೇಕಾದರೆ ಸ್ಥಳೀಯ ಭಾಷೆಯಲ್ಲಿಯೇ ಗ್ರಂಥ ರಚನೆ,ಭಾಷಾಭ್ಯಾಸದ ಸಾಧನಗಳು, ದ್ವಿಮುಖ ಗ್ರಂಥ ರಚನೆಯ ಪರಂಪರೆ, ಅನುವಾದ ಕಾರ್ಯಕ್ಕೆ ಒತ್ತನ್ನು ಕೊಡಲೇಬೇಕಾದ ಅನಿವಾರ್ಯ ಕಂಡುಬಂದುದರ ಜೊತೆಗೆ ಮೌಖಿಕವಾದುದನ್ನು ದಾಖಲು ಮಾಡಿಕೊಳ್ಳುವ ಅಗತ್ಯತೆ ಬ್ರಿಟೀಷರಿಗೆ ಕಂಡು ಬಂತು. ತಮ್ಮ ದಿಕ್ಕಿಗೆ ಇಲ್ಲಿಯ ಜನವರ್ಗವನ್ನು ವಾಲಿಸಲು ಹೊಸ ಶಿಕ್ಷಣ ಕ್ರಮವನ್ನು ಜಾರಿಗೆ ತಂದರು. ಈಗಾಗಲೆ ದೇಶೀ ಭಾಷೆಯಲ್ಲಿ ಅಕ್ಷರ ಕಲಿತ ಮೇಲ್ವರ್ಗದ ಜನ ಇಂಗ್ಲೀಷ ವಿದ್ಯಾಭ್ಯಾಸಕ್ಕೆ ಮುಗಿಬಿದ್ದರು.

ವಸಾಹತೀಕರಣದ ಇಂಗ್ಲೀಷ ಶಿಕ್ಷಣವು ಸಮಗ್ರ ಮಾನವ ಜನಾಂಗಕ್ಕೆ ಅಗತ್ಯವಾದ ಮೌಲ್ಯ ಸರಣಿಯನ್ನು ನೀಡುತ್ತದೆ ಎಂದು ಸಹಜವಾಗಿಯೇ ಭಾರತೀಯ ಮೇಲ್ವರ್ಗದ ಜನ ಭಾವಿಸಿದ್ದರು. ಆದರೆ ಇಂಗ್ಲೆಂಡಿನಲ್ಲಿ ಪ್ರಬಲವಾಗಿದ್ದ ತಾತ್ವಿಕ ನಿಲವುಗಳು ಭಾರತೀಯ ಪರಂಪರೆಯೊಡನೆ ಮುಖಾಮುಖಿಯಾಗಲು ತೊಡಗಿದಾಗ ದೇಶೀ ಸಂಸ್ಕೃತಿಗಿಂತ ಆಳುವವರ ಸಂಸ್ಕೃತಿಯೇ ಪ್ರಬಲವಾಗತೊಡಗಿತು. ಇದನ್ನು ಅರಿತುಕೊಂಡು ಇಲ್ಲಿಯ ವಿದ್ಯಾವಂತ ಬ್ರಾಹ್ಮಣ ವರ್ಗ ಭಾರತದ ಪ್ರಾಚೀನ ಸಾಂಸ್ಕೃತಿಕ ಮೌಲ್ಯಗಳೊಡನೆ ಸೆಟೆದು ನಿಲ್ಲುವಂತಾಯಿತು. ಹಿಂದಿನ ಕೈಫಿಯತ್ತುಗಳನ್ನು ನಿರೂಪಣೆ ಮಾಡಿದವರೆಲ್ಲರೂ ಈ ವರ್ಗದ ಜನಗಳೇ ಆಗಿದ್ದರು. ಮತ್ತು ಇವರು ಪೂರ್ತಿ ಸಾಂಪ್ರದಾಯಿಕ ಭಾರತದ ಮೌಲ್ಯಗಳನ್ನು ಪ್ರತಿನಿಧಿಸದ, ಅಕಡೆ ಕಡೆ ಪಾಶ್ಚಾತ್ಯ ವೈಚಾರಿಕತೆ ನಡುವೆ ವ್ಯತ್ಯಯವನ್ನು ಮಾಡಿಕೊಳ್ಳದ ಉದೀಯಮಾನ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದರು. ತಮ್ಮ ಸಾಂಸ್ಕೃತಿಕ ಅಗತ್ಯವಾದ ಅನನ್ಯತೆಗಾಗಿ ಹೋರಾಡುತ್ತಿದ್ದ ಈ ವರ್ಗವು 19ನೆ ಶ.ದ ಭಾರತದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಕ್ರಿಯಾಶೀಲವಾಗಿತ್ತು. ಕೈಫಿಯತ್ತುಗಳಲ್ಲಿಯ ಸ್ಥಳನಾಮಗಳು ರಾಮಾಯಣ, ಭಾರತ, ಭಾಗವತಗಳಿಗೆ ಅಂಟಿಕೊಳ್ಳಲು ಕಾರಣ ಉದೀಯಮಾನ ಮಧ್ಯಮವರ್ಗವು ಬ್ರಿಟೀಷ ವಸಾಹತು ಶಾಹಿಯ ಸಾಮಾಜಿಕ ಸ್ಥಿತ್ಯಂತರಕ್ಕೆ ತೋರಿಸಿದ ಪ್ರತಿಕ್ರಿಯೆಯಾಗಿ ಕಂಡುಬಂದಿತು. ಬಹುಶ: ಅದೇ ಕೈಫಿಯತ್ತುಗಳನ್ನು ಬ್ರಿಟೀಷ ಅಧಿಕಾರಿಗಳು ಸಾಮಾನ್ಯ ಜನವರ್ಗದೊಡನೆ ನಿರೂಪಣೆ ಮಾಡಿಕೊಂಡಿದ್ದರೆ ದ್ಯಾಮವ್ವ,ಸಂಕಲ್ಲವ್ವ,,ಮಾದೇಶ್ವರ,ಮಂಟೇಸ್ವಾಮಿ ಕತೆ ಪುರಾಣಗಳಿಗೆ ಕೊಂಡೊಯ್ಯುತ್ತಿದ್ದರೇನೋ! ಆದರೆ ಬ್ರಿಟೀಷ ಅಧಿಕಾರಿಗಳಿಗೆ

ಈ ಉದಯೋನ್ಮುಖ ಮಧ್ಯಮ ವರ್ಗವು ಈಗಾಗಲೇ ಶೈಕ್ಷಣಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಿದ್ಧಗೊಂಡ ಮನಸ್ಸಿನವರಾಗಿದ್ದ ಕಾರಣ ಇವರ ಮೂಲಕ ಸಂಕಥನಗೊಳಿಸಿಕೊಳ್ಳುವುದು ಸುಲಭವಾಗಿ ಕಂಡುಬಂದಿರಬೇಕು. ಇಲ್ಲಿಯ ಬ್ರಾಹ್ಮಣ ವರ್ಗವಾದರೋ ಸ್ಥಾನ ಅಥವಾ ಆ ಪ್ರದೇಶದ ಅಧಿಕೃತ ಮಾಹಿತಿಯ ಪೂರೈಕೆದಾರರಂತೆ ಕಂಡುಬಂದರು. ಈ ಕಾರಣಕ್ಕಾಗಿಯೇ ಬ್ರಿಟಿಷರು ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಈ ಸ್ಥಳೀಯ ಉದಯೋನ್ಮುಖ ಮಧ್ಯಮವರ್ಗದ ಅವಲಂಬನೆ ಅನಿವಾರ್ಯವೇ ಆಗಿಬಿಟ್ಟಿತು.

ತಮ್ಮ ಉದ್ದೇಶಕ್ಕಾಗಿಯೇ ವಸಾಹತು ಶಾಹಿಯು ಎಲ್ಲಾ ಕೆಲಸಗಳನ್ನು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಮಾಡಿತು. ಇಲ್ಲಿಯ ಸ್ಥಳೀಯ ಬ್ರಾಹ್ಮಣರನ್ನು ಕೈಫಿಯತ್ತುಗಳ ಸಂಗ್ರಹ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಲಾಯಿತು. ಮತ್ತು ಅವುಗಳ ನಿರೂಪಕರೆಲ್ಲರು ಬಹುತೇಕವಾಗಿ ಬ್ರಾಹ್ಮಣರೇ ಆಗಿದ್ದರು. ಆ ಕಡೆ ತಮಗೆ ಬೇಕಾದಾಗ ಉಪಯೋಗಿಸಿಕೊಂಡು ನಂತರ ಕೈ ಬಿಟ್ಟು ಬಿಡುವ ಪಾಶ್ಚಾತ್ಯ ವಿಚಾರ ಜೀವನಕ್ಕೆ ಈ ಉದಯೋನ್ಮುಖ ಮಧ್ಯಮ ವರ್ಗವು ಒಗ್ಗದೆ, ಈ ಕಡೆ ಉಳಿಗಮಾನ್ಯ ಪದ್ಧತಿ ಮತ್ತು ಖಾಸಗಿ ಭೂ ಒಡೆತನದ ಫಲವಾಗಿ ತನ್ನ ಸಾಮಾನ್ಯ ವರ್ಗದ ಸಂಸ್ಕೃತಿಯಿಂದ ಲಾಭ ಪಡೆದು ಆ ಸಂಸ್ಕೃತಿಯಿಂದಲೇ ದೂರ ನಿಂತು ಅದೇ ಸಂಸ್ಕೃತಿಯ ವಕ್ತಾರರಂತೆ ಮೆರೆಯುತ್ತಿದ್ದ ಈ ಉದಯೋನ್ಮುಖ ಮಧ್ಯಮ ವರ್ಗವು ಬ್ರಿಟಿಷ್ ವ್ಯವಸ್ಥೆಗೆ ಪ್ರತಿಕ್ರಿಯಿಸುವಾಗ ತಮ್ಮನ್ನು ತಾವೇ ಬೆನ್ನು ಚಪ್ಪರಿಸಿಕೊಳ್ಳುವ ತನ್ನ ಸೀಮಿತ ಸಂಸ್ಕೃತಿಯನ್ನೇ ಇದೇ ಸಂಸ್ಕೃತಿಯೆಂದು ಹೇಳಿ ಸಮುದ್ರ ಸಂಸ್ಕೃತಿಯನ್ನು ಮರೆಗೆಸೆಯಲ್ಲಿ ತೋರಿಸಿಕೊಳ್ಳುವ ಫಲಗಳಾಗಿ ಕೈಫಿಯತ್ತುಗಳು ಕಂಡುಬರುತ್ತವೆ.

2·3 : ಸ್ಥಳ ನಾಮ ಕುರಿತ ಕೈಫಿಯತ್ತುಗಳ ವರ್ಗೀಕರಣ:

2.3 ಸ್ಥಳನಾಮ ಕುರಿತ ಕೈಫಿಯತ್ತುಗಳ ವರ್ಗೀಕರಣ :

ಕೈಫಿಯತ್ತುಗಳ ಬಗೆಗೆ ಪ್ರಕಟಗೊಂಡ 'ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು' ಕೃತಿಯು ಆ ಪ್ರದೇಶಕ್ಕೆ ಸಂಬಂಧಿಸಿದ ಕೈಫಿಯತ್ತುಗಳನ್ನು ಅನುಲಕ್ಷಿಸಿ ಸಿದ್ಧವಾಗಿದೆ. 'ಕರ್ನಾಟಕದ ಕೈಫಿಯತ್ತುಗಳು' ಗ್ರಂಥವು ಮೈಸೂರು, ದಕ್ಷಿಣ-ಉತ್ತರಕನ್ನಡ ಜಿಲೆಗಳು, ಬಳ್ಳಾರಿ ಪ್ರದೇಶದ ಕೈಫಿಯತ್ತುಗಳೆಂದು ಪ್ರಾದೇಶಿಕ ವರ್ಗೀಕರಣ ಕ್ರಮ ಕಂಡುಬರುತ್ತದೆ. 'ಇವುಗಳು ಪ್ರಧಾನವಾಗಿ ಸ್ಥಳ,ಗ್ರಾಮಗಳನ್ನು ಕುರಿತ ಕಾರಣ ಇವುಗಳನ್ನು ಭೌಗೋಳಿಕವಾಗಿಯೇ ವಿಂಗಡಿಸುವುದು ಸೂಕ್ತ' ಎಂದು ಎಂ.ಎಂ.ಕಲಬುರ್ಗಿಯವರು ಭಾವಿಸಿದ್ದಾರೆ. (1994:12). ಆದರೆ ಕೈಫಿಯತ್ತುಗಳು ಶಿಷ್ಟ ಪದಕ್ಕೂ ಜನಪದಕ್ಕೂ ಸೇರದೆ 'ಜನಪ್ರಿಯ ವರ್ಗದ' ಸೃಷ್ಟಿಯಾಗಿದೆ. ಇಲ್ಲಿಯ ಕೈಫಿಯತ್ತುಗಳ ನಿರೂಪಕರೆಲ್ಲರೂ ಬ್ರಾಹ್ಮಣ ಮತ್ತು ಲಿಂಗಾಯತ ಮೇಲ್ವರ್ಗಕ್ಕೆ ಸೇರಿದವರಾಗಿದ್ದಾರೆ. ಈ ಮೇಲ್ವರ್ಗವು ಅಂದಿನ ಕಾಲಘಟ್ಟದಲ್ಲಿ ಸಾಂಸ್ಕೃತಿಕವಾಗಿ ಕ್ರಿಯಾಶೀಲರಾಗಿದ್ದುದರಿಂದ ಮತ್ತು ವಸಾಹತು ಶಾಹಿಯ ಒತ್ತಡದಿಂದ ಆ ಕಡೆ ಪಾಶ್ಚಾತ್ಯ ವಿಚಾರ ಮತ್ತು ನಾಗರಿಕತೆಗೆ ಒಗ್ಗದೆ, ಈ ಕಡೆ ತಮ್ಮ ಸಾಮಾನ್ಯ ಜನ ವರ್ಗದ ಸಂಸ್ಕೃತಿಯಿಂದ ತಾನೆ ನಿರ್ಮಿಸಿಕೊಂಡ ಊಳಿಗಮಾನ್ಯ ಪದ್ಧತಿ ಮತ್ತು ಯುರೋಪಿಯನ್ನರು ಹುಟ್ಟು ಹಾಕಿದ ಖಾಸಗಿ ಭೂ ಒಡೆತನದ ಫಲವಾಗಿ ತಮ್ಮ ಸಾಮಾನ್ಯ ಜನ ವರ್ಗದಿಂದ ಲಾಭ ಪಡೆದೂ ಅವರಿಂದ ದೂರ ನಿಂತರು. ವಸಾಹತು ಶಾಹಿಯ ಸಾಮಾಜಿಕ ಸ್ಥಿತ್ಯಂತರಕ್ಕೆ ಒಳಗಾದ ಈ ವರ್ಗವು ತಮ್ಮ ಪ್ರಾಚೀನ ಸಾಂಸ್ಕೃತಿಕ ಮೌಲ್ಯಗಳಿಂದ ಪ್ರತಿಕ್ರಿಯಿಸಲು ಹೊರಟರು. ಇಲ್ಲಿಯ ಕೈಫಿಯತ್ತುಗಳೆಲ್ಲವೂ ಅದರ ಫಲವಾಗಿ ಕಂಡುಬರುತ್ತವೆ. ಆದಕಾರಣ ಈ ಕೈಫಿಯತ್ತುಗಳನ್ನು ಅಥವಾ ಇದರಲ್ಲಿಯ ಸ್ಥಳನಾಮಗಳನ್ನು ಪ್ರಾದೇಶಿಕವಾಗಿ ನೋಡಲು ಬರುವುದಿಲ್ಲ. ಈ ಕೈಫಿಯತ್ತುಗಳನ್ನು ನಿರೂಪಿಸಿದ ಮೇಲ್ವರ್ಗವು ಕರ್ನಾಟಕದ ಯಾವ ಪ್ರದೇಶ ಅಥವಾ ಸ್ಥಳದಲ್ಲಿರಲಿ ಆ ಕಾಲ ಘಟ್ಟದ ವಸಾಹತು ಶಾಹಿಗೆ ಒಮ್ಮೆಲೆ ಸಿಕ್ಕ ಜನವರ್ಗವಾದ್ದರಿಂದ ಅವರ ಸ್ಪಂದನ ಮತ್ತು ಪ್ರತಿಕ್ರಿಯೆಗಳೆಲ್ಲವೂ ಸರಿ ಸಮಾನವಾಗಿವೆ. ಆದ್ದರಿಂದ ಪ್ರಾದೇಶಿಕವಾಗಿ ಕೈಫಿಯತ್ತುಗಳನ್ನು ಮತ್ತು ಅವುಗಳಲ್ಲಿಯ ನಿರೂಪಣೆ ಮಾಡಿದ ಸ್ಥಳನಾಮಗಳನ್ನು ನೋಡದೆ, ಸ್ಥಳನಾಮಗಳ ವಸ್ತುವನ್ನು ಆಧರಿಸಿ ಮುಖ್ಯವಾಗಿ ವ್ಯಕ್ತಿ, ಘಟನೆ, ಸ್ಥಳ ಪ್ರಧಾನತೆಯನ್ನು ಆಧರಿಸಿ ಮತ್ತೆ ಆ ಮೂರನ್ನು ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕವಾಗಿ ವರ್ಗೀಕರಿಸಿಕೊಂಡು ಅಧ್ಯಯನಕ್ಕೆ ಹೊರಟಾಗ ಎಲ್ಲಾ ಸ್ಥಳನಾಮಗಳು ಈ ಮೇಲಿನ ಮೂರು ವಿಭಾಗ ಕ್ರಮಗಳಲ್ಲಿಯ ಯಾವುದಾದರೂ ಒಂದಕ್ಕೆ ಅನಿವಾರ್ಯವಾಗಿ ಅನ್ವಯಗೊಳ್ಳುವುದು ಕಂಡುಬರುತ್ತದೆ. ಉದಾಹರಣೆಗೆ ವ್ಯಕ್ತಿಪ್ರಧಾನ ಸ್ಥಳನಾಮಗಳನ್ನು ತೆಗೆದುಕೊಂಡಾಗ ಪೌರಾಣಿಕ ವ್ಯಕ್ತಿಗಳಾದ ರಾಮ, ಅರ್ಜುನರು ಸ್ಥಳನಾಮಗೊಂಡು ರಾಮಾಪುರ, ಅರ್ಜುನಪುರಗಳಾದದ್ದು, ಚಾರಿತ್ರಿಕ ವ್ಯಕ್ತಿ ಗಳಾದ ಹೈದರನಿಂದ ಬಿದನೂರಿಗೆ ಹೈದರನಗರ ನಾಮವಾಗಲಿ, ಡೊಕ್ಕರಾಮಶೆಟ್ಟಿಯಿಂದ ಡೊಕ್ಕರಾಮಶೆಟ್ಟಿಕೋಟೆ ಮುಂತಾಗಿ — ಹೀಗೆ ಘಟನೆಯನ್ನು ಆಧರಿಸಿಯು ಸ್ಥಳವನ್ನಾಧರಿಸಿಯು ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕವೆಂದು ವಿಂಗಡಿಸಿಕೊಂಡು

ನೋಡಿದಾಗ ವ್ಯಕ್ತಿಪ್ರಧಾನದಲ್ಲಿ ಘಟನೆ,ಸ್ಥಳ ಬರಬಹುದು. ಅದೇ ರೀತಿ ಘಟನೆ ಸ್ಥಳಗಳಲ್ಲಿಯೂ ವ್ಯಕ್ತಿ ಇದ್ದೇ ಇರುತ್ತಾನೆ. ಆದರೆ ಮುಖ್ಯವಾದ ಅಂಶವೆಂದರೆ ಅಲ್ಲಿ ಯಾವುದು ಪ್ರಧಾನವಾಗಿದೆ ಎಂಬುದು. ಆದರೆ ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕದಲ್ಲಿ ನಾವು ನಿಖರತೆಯಿಂದ ವರ್ಗೀಕರಣಕ್ಕೆ ಅಳವಡಿಸಿಕೊಳ್ಳಬಹುದು. ಹೀಗೆ ಮಾಡಿಕೊಳ್ಳುವುದರಿಂದ ಸ್ಥಳನಾಮ ವರ್ಗೀಕರಣ ಸಶಕ್ತ ಮತ್ತು ಎಲ್ಲಾ ಸ್ಥಳನಾಮಗಳನ್ನು ಕುರಿತಂತೆ ಒಟ್ಟಾಗಿ ಅಭಿಪ್ರಾಯಿಸಲು ಸಾಧ್ಯವಾಗಬಹುದೆಂದುಕೊಳ್ಳಲಾಗಿದೆ.

ಅಧ್ಯಯನದ ಮುಖ್ಯ ಉದ್ದೇಶವಿರುವುದು ಮೇಲ್ವರ್ಗದ ಸೃಷ್ಟಿಯಾದ ಇವುಗಳು ಆ ಕಾಲಘಟ್ಟದ ವಸಾಹತು ಶಾಹಿಯ ಸಾಮಾಜಿಕ ಸ್ಥಿತ್ಯಂತರಕ್ಕೆ ಸಾಂಪ್ರದಾಯಿಕ ಮೌಲ್ಯದಿಂದ ನೀಡಿದ ಪ್ರತಿಕ್ರಿಯೆಯಾದುದರಿಂದ ಮುಖ್ಯವಾಗಿ ಆ ಸ್ಥಳನಾಮಗಳ ವಸ್ತುಗಳು ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕದ ಯಾವ ವಿಭಾಗಕ್ಕೆ ಸೇರುತ್ತದೆ ಎಂಬುದು ಮುಖ್ಯ. ಇಲ್ಲಿಯ ಹೆಚ್ಚಿನ ಸಂಖ್ಯೆಯ ಸ್ಥಳನಾಮಗಳು ಪೌರಾಣಿಕವೇ ಆಗಿರುವುದು ಕಂಡುಬರುತ್ತದೆ. ಅದರಲ್ಲಿ ಮುಖ್ಯವಾಗಿ ರಾಮಾಯಣ, ಮಹಾಭಾರತದ ಪಾತ್ರಗಳು, ಘಟನೆಗಳನ್ನಾಧರಿಸಿ ಅನೇಕ ಸ್ಥಳನಾಮಗಳು ಹುಟ್ಟಿಕೊಂಡಿವೆ. ಪರಶುರಾಮ ಕಣ್ವಋಷಿ, ಋಷ್ಯಶೃಂಗ ಮುಂತಾದ ಕಲ್ಪಿತವೋ, ಅಕಲ್ಪಿತವೋ ಎನ್ನಬಹುದಾದ ಪೌರಾಣಿಕ ಪಾತ್ರಗಳೂ ಸ್ಥಳನಾಮಗಳಾಗಿ ನಿರೂಪಣೆಗೊಂಡಿವೆ. ಈ ಪ್ರಕಾರವಾಗಿ ಮೇಲಿನಂತೆ ವರ್ಗೀಕರಿಸಿಕೊಂಡರೆ ನಾವು ಅಧ್ಯಯನದ ಉದ್ದೇಶವನ್ನು ಕಂಡುಕೊಳ್ಳಬಹುದೆಂದು ಭಾವಿಸಿ ಅದೇ ವರ್ಗೀಕರಣದ ಕ್ರಮವನ್ನು ಮುಂದಿನ ಪುಟಗಳಲ್ಲಿ ಅನುಸರಿಸಲಾಗಿದೆ:—

2.3.1 <u>ವ್ಯಕ್ತಿಪ್ರಧಾನ ಸ್ಥಳನಾಮಗಳು</u> :

ವ್ಯಕ್ತಿಪ್ರಧಾನ ಸ್ಥಳನಾಮಗಳು ಅಸಾಮಾನ್ಯ ಅಥವಾ ವಿಶಿಷ್ಟವಾದ ವ್ಯಕ್ತಿಯನ್ನಾಧರಿಸಿ ಅಂಥಾ ವ್ಯಕ್ತಿಯ ನಾಮವನ್ನಿಟ್ಟುಕೊಂಡು ನಿರ್ಮಿತವಾದ ಸ್ಥಳನಾಮಗಳನ್ನು ಕುರಿತು ಹೇಳುತ್ತವೆ. ಇಲ್ಲಿ ಪ್ರಲನೆ ಮತ್ತು ಸ್ಥಳಗಳು ಇಲ್ಲವೆಂದಲ್ಲ ಆದರೆ ಅವು ಆ ವ್ಯಕ್ತಿಯ ಸಾಧನೆಗೆ ಅಥವಾ ಹೆಸರಿಗೆ ಪೋಷಕವಾಗಿ ಕಂಡುಬರುತ್ತವೆ. ವ್ಯಕ್ತಿ ಆ ನಿರ್ದಿಷ್ಟ ಸ್ಥಳಕ್ಕೆ ಬದ್ಧನಾಗಿರಬಹುದು ಅಥವಾ ಆ ಸ್ಥಳದ ಮಹತಿಕೆಯನ್ನು ಮೀರಿ ಆತನ ವ್ಯಕ್ತಿತ್ವ ಕೆಲಸದ ಮಾಡುತ್ತಿರಬಹುದು. ಆಗಾದಾಗ ವ್ಯಕ್ತಿಯಿಂದಾಗಿಯೇ ಆ ಸ್ಥಳಕ್ಕೆ ಆ ಹೆಸರು ಬಂದಿರುತ್ತದೆ. ಅಂತಹ ಕೆಲವು ಸ್ಥಳನಾಮಗಳು ಈ ಕೆಳಗಿನ ವರ್ಗೀಕರಣಗೊಂಡ ಸ್ಥಳನಾಮಗಳಲ್ಲಿ ನೋಡಬಹುದು :—

2.3.1.1:<u>ಪೌರಾಣಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು:</u>

ಪುರಾಣ ಪ್ರಿಯವಾದ ನಮ್ಮ ಜನ ವರ್ಗವು ಪ್ರಸಿದ್ಧ ಪೌರಾಣಿಕ ಪಾತ್ರಗಳಾದ ಭೀಮ, ರಾಮ, ಸೀತೆ, ಕೃಷ್ಣ, ಪರಶುರಾಮ ಇನ್ನು ಮುಂತಾದ ಆದರ್ಶ ಪಾತ್ರಗಳನ್ನಲ್ಲದೆ ದುಷ್ಟ ವ್ಯಕ್ತಿಗಳಾದ ರಾಕ್ಷಸರು, ದೇವತೆಗಳ ನಾಮಧೇಯವನ್ನಾಧರಿಸಿ ಈ ಕೆಳಗಿನ ಪೌರಾಣಿಕ ವ್ಯಕ್ತಿಗಳು ಸ್ಥಳಪ್ರಧಾನಗೊಂಡಿದ್ದಾರೆ.

1) ಅತ್ರಿಪುರ, ರಾಮಾಪುರ, ಅರ್ಜುನಪುರ
   (ಹೆಂತನ ಕೋಟೆಯಿಂದ ಬ್ಯಾರಾಂದುಸ್ವಾಮಿ ಕೈಫಿಯತ್ತು)
2) ರಾಮಾಪುರ
   (ಮುಲ್ಲೂರು ಸಾಸಿವೆ ಹಳ್ಳಿ ಸೀಮೆ ಕೈಫಿಯತ್ತು)
3) ಶೃಂಗೇರಿ
   (ಶೃಂಗೇರಿಯ ಕೈಫಿಯತ್ತು)
4) ಕುಬವೀಡೆ
   (ಖಟ್ಟಕಳದ ಕೈಫಿಯತ್ತು)
5) ಭೈರಮಾರು
   (ಭೈರಮಾರು ಮಾಗಣಿ ಕೈಫಿಯತ್ತು)
6) ದಂಡಕಾರಣ್ಯ
   (ಸೋದೆ ಸಂಸ್ಥಾನ ಕೈಫಿಯತ್ತು)
7) ಬಳ್ಳಾರಿ
   (ಬಳ್ಳಾರಿಯ ಕೈಫಿಯತ್ತು)

233.1.2 <u>ಚಾರಿತ್ರಿಕ ವ್ಯಕ್ತಿಪ್ರಧಾನ ಸ್ಥಳನಾಮಗಳು</u> :

ಇಲ್ಲಿ ವಿಶಿಷ್ಟವ್ಯಕ್ತಿ ಅಥವಾ ಅಸಾಮಾನ್ಯ ವ್ಯಕ್ತಿ ಸಾಮಾನ್ಯ ವರ್ಗದವರಿಂದ ಬೇರ್ಪಟ್ಟು ಅವರನ್ನು ಆಳುವ ರಾಜ, ಪಾಳೆಯಗಾರ ಅಥವಾ ನಾಯಕನಾಗಿರುತ್ತಾನೆ.

ಅಲ್ಲದೆ ಆ ಕಾಲದ ಒಬ್ಬ ವ್ಯಕ್ತಿಯು ಸಾಧನೆ ಫಲವಾಗಿ ಆ ವ್ಯಕ್ತಿಯು ಹೆಸರಿನಿಂದ ಚಾರಿತ್ರಿಕ ವ್ಯಕ್ತಿಪ್ರಧಾನ ಸ್ಥಳನಾಮಗಳಾಗುತ್ತವೆ. ಉದಾಹರಣೆ ಕುಮಾರರಾಮ ವಿಕ್ರಮಾದಿತ್ಯ, ಇವರು ಮುಂತಾದ ವ್ಯಕ್ತಿಗಳನ್ನು ಗುರುತಿಸಿಕೊಳ್ಳಬಹುದು. ಈ ಕೆಳಗಿನ ಸ್ಥಳನಾಮಗಳುಅಂತಹುಗಳಾಗಿವೆ.:—

1) ಬಾಗಡಿ
(ಬಾಗಡಿ ಕೈಫಿಯತ್ತು)
2) ಬಾಲಸಾಮಂತನ ಕೆರೆ
(ಮಲುಮ್ಮಾರು ಸಾಸಿವೆಹಳ್ಳಿ ಸೀಮೆ ಕೈಫಿಯತ್ತು)
3) ಬಸವನ ತೂಬು
(..)
4) ಕೇಸಗಬ ಕೆರೆ
(..)
5) ಗುಂಸಾಗಕ್ಕ ಕೆರೆ
(..)
6) ಯೀರ ಸಾಮಂತನ ಕೆರೆ
(..)
7) ವೆಂಗಟಿ
(ಯಗಟಿ ಕೈಫಿಯತ್ತು)
8) ಬಿದನೂರಿಗೆ ಹೈದರ ನಗರ
(ಹೈದರ ಕೈಫಿಯತ್ತು 1,2)
9) ಶಿಯಾಕ್ಕರಾಮಶೆಟ್ಟಿ ಕೋಟೆ
(ಕುಂದಾಪುರದ ಕೈಫಿಯತ್ತು)
10) ಬಟಕಳ
(ಭಟ್ಕಳದ ಕೈಫಿಯತ್ತು)
11) ಸಿಂಗಣ ಕೆರೆ
(ಅಂತಾಪುರದ ಕೈಫಿಯತ್ತು)
12) ಯಲಕ್ಷ್ಮಪುರ
(ಕೈಫಿಯತ್ತು ಕುರುಗೋಡು ತಾಲೂಕ ಬಳ್ಳಾರಿ)
13) ಅಮ್ರಾಪುರ
(..)
14) ಸಾಮಂತನ ಕೆರೆ
(..)
15) ಹಗಲಭಟ್ಟನ ಕೆರೆ
(ಬರೋಜಿ ಗ್ರಾಮದ ಕೈಫಿಯತ್ತು)
16) ಖಾನಸಗುಡ್ಡ
(..)
17) ಕೊಂಡಿಲ ಸಾಮಂತನ ಗುಡ್ಡ
(ಕೈಫಿಯತ್ತು ಕುರುಗೋಡು ತಾಲೂಕ ಬಳ್ಳಾರಿ)

2.3.1.3 ಸಾಮಾಜಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು:

ಸಾಮಾಜಿಕ ಜನವರ್ಗದ ಸಾಮಾನ್ಯನೂ ಸಹಿತ ಸ್ಥಳನಾಮಗಳ ನಾಮಧೇಯಂದು ವಾಗಬಹುದೆಂದು ಈ ಕೆಳಗಿನ ಸ್ಥಳನಾಮಗಳು ಬಿಂಬಿಸುತ್ತವೆ. ಮತ್ತು ಉದಾಹರಿಸುತ್ತವೆ. ಅಜ್ಜಾಪುರ, ನಾಗಲಿಂಗಯ್ಯ ಮತ್ತು ಸಾಮಾನ್ಯ ಜನವರ್ಗದ ದೇವರುಗಳು ಸ್ಥಳನಾಮಗಳಾಗಿ ನಿರ್ಮಾಣಗೊಂಡಿವೆ.

1) ಶಂಕರ ದೇವರ ಹೊಂಡ
   (ಶಿರಸಿ ಕೈಫಿಯತ್ತು)
2) ಅಜ್ಜಾಪುರ
   (ಸೋದೆ ಸಂಸ್ಥಾನದ ಕೈಫಿಯತ್ತು)
3) ನಾಗಲಿಂಗಯ್ಯನ ಗುಡ್ಡ
   (ಕೈಫಿಯತ್ತು ಕುದುಗೋಡು ತಾಲೂಕೆ ಬಳ್ಳಾರಿ)
4) ಮಲ್ಲದೇವರ ದುರ್ಗ
   (ಬರೋಡಿ ಗ್ರಾಮದ ಕೈಫಿಯತ್ತು)
5) ಬಂಕಲಹರವಿನ ಗುಡ್ಡ
   (ಕೈಫಿಯತ್ತು ಕುದುಗೋಡು)

— — — —

2.3.2 ಘಟನಾ ಪ್ರಧಾನ ಸ್ಥಳನಾಮಗಳು:

ಇಲ್ಲಿ ಒಂದು ನಿರ್ದಿಷ್ಟ ಘಟನೆ ಪ್ರಧಾನವಾಗಿದ್ದು ಸ್ಥಳ ಮತ್ತು ವ್ಯಕ್ತಿಗಳು ಎರಡನೇ ಸ್ಥಾನದಲ್ಲಿ ಬರುತ್ತಾರೆ. ಎಷ್ಟೋ ಬಾರಿ ಒಬ್ಬ ವ್ಯಕ್ತಿ ಇರುವುದರ ಬದಲು ಜನರ ಗುಂಪು ಅಥವಾ ಜನರ ಸಮೂಹವೇ ಇರುತ್ತದೆ. ಒಂದು ನಿರ್ದಿಷ್ಟ ಘಟನೆಯಿಂದ ಇಲ್ಲಿ ಸಮೂಹದ ಮೇಲೆ ಪರಿಣಾಮ ಬೀರುತ್ತದೆ. ಈ ಕೆಳಗಿನ ಸ್ಥಳನಾಮಗಳು ಘಟನಾ ಪ್ರಧಾನ ಸ್ಥಳನಾಮಗಳಾಗಿವೆ.:—

2.3.2.2. ಪೌರಾಣಿಕ ಘಟನಾ ಪ್ರಧಾನ ಸ್ಥಳನಾಮಗಳು:

1) ದೆಂಕಣಿಪುರ
   (ದೆಂಕಣಿ ಕೋಟೆ ಬಿಳ್ಳರಾಯ ಸ್ವಾಮಿ ಕೈಫಿಯತ್ತು)
2 ತಲಕಾಡು
   (ತಲಕಾಡು ಕೈಫಿಯತ್ತು)
3) ಗೋಕರ್ಣ
   (ತಲಕಾಡು ಕೈಫಿಯತ್ತು—2)
4) ವಸುಧಾರೆ
   (ವಸುಧಾರೆ ಗ್ರಾಮದ ಕೈಫಿಯತ್ತು)
5) ನಾಂದುಕತೀರ್ಥ
   (ಗೋಕರ್ಣದ ಕೈಫಿಯತ್ತು)

6) ಬಾರಕ ಕನ್ಯಾಪುರ

(ಬಾರಕೂರು ಸಾಂಸ್ಥಾನ ಕೈಫಿಯತ್ತು)

7) ಹಳ್ಳದ ರಾಮನ ಮಡುವು

(ದರೋಜಿ ಗ್ರಾಮದ ಕೈಫಿಯತ್ತು)

8) ಕುಂಬಕಾಸಿ

(ಕುಂಬಕಾಸಿ ಸ್ಥಳದ ಕುಂದೇಶ್ವರ ಕೈಫಿಯತ್ತು)

9) ಹಿರೇವಾಡಿ

(ಸಂಕೇಶಿನ್ಯಾಕರು ನಡು ಸೀಮೆ ಕೈಫಿಯತ್ತು)

10) ನೀತಿಗಿರಿ

(..)

11) ರಾವಣನ ಹಳ್ಳಿ

(..)

12) ದ್ವಾರಾಪುರ

(ಹಳೇಬೀಡು ಕೈಫಿಯತ್ತು)

13) ವಿರೂಪಾಕ್ಷಪುರ

(ಕೈಫಿಯತ್ತು, ತಾಲೂಕೆ ಅಣಿಂಪುರ)

2.3.3.2 ಚಾರಿತ್ರಿಕ ಘಟನಾ ಪ್ರಧಾನ ಸ್ಥಳನಾಮಗಳು:

ಚಾರಿತ್ರಿಕ ಘಟನೆಗಳು ಸ್ಥಳನಾಮಗೊಳ್ಳುವುದರ ಮೂಲಕ ಇಂದಿಗೂ ಮುಂದಿಗೂ ಜನಮನದಲ್ಲಿ ಜೀವಂತವಾಗಿರುವವು. ಇತಿಹಾಸ ಈ ಮೂಲಕ ಪುನರ್ ಸ್ಮರಣೆಗೆ ಗುರಿಯಾಗುತ್ತಿರುವುದು ಇಂತಹ ಸ್ಥಳನಾಮಗಳು ಕಾರಣವಾಗಿವೆ. ಇತಿಹಾಸವನ್ನು ಕಟ್ಟಿಕೊಳ್ಳುವುದಕ್ಕೆ ಇವು ನೆರವಾಗುತ್ತವೆ. ಇತಿಹಾಸಕ್ಕೆ ಪೂರಕ ಸಾಮಗ್ರಿಯಾಗಿ ಚಾರಿತ್ರಿಕ ಘಟನಾ ಪ್ರಧಾನ ಸ್ಥಳನಾಮಗಳನ್ನು ಬಳಸಿಕೊಳ್ಳಬಹುದಾಗಿದೆ.

1) ಆನೆ ಕನ್ನಂಬಾಡಿ

(ಆನೆಕನ್ನಂಬಾಡಿ ಕೈಫಿಯತ್ತು)

2) ತಿಮ್ಮಗೊಂಡನಹಳ್ಳಿ

(ಕೈಫಿಯತ್ತು, ತಾಲೂಕೆ ಅಣಿಂಪುರ)

3) ಆಸಂದಿ

(..)

4) ಬುಕ್ಕಾಂಬುಧಿ

(..)

5) ರಾಮರ ಪಾದ

(..)

6) ಮುಡವ ಮುರಾರಿ ಕೋಟೆ ಕೋಲಾಹಲ

(ಸಾಗರದ ಕೈಫಿಯತ್ತು)

7) ಸೋಣೇಗಾನಿ

(ಸೋಣೇಗಾನಿ ಅಗ್ರಹಾರದ ಕೈಫಿಯತ್ತು, 1)

8) ಹೊಳೆ ಹೊನ್ನೂರು

(ಹೊಳೆ ಹೊನ್ನೂರು ಕೈಫಿಯತ್ತು, 1)

9) ಕಡದ ಕಲ್ಲು ಘಟ್ಟ

(ಅಡಿಲದ ಕೈಫಿಯತ್ತು)

10) ಕುಶಾಲಪುರ

(ಕುಂದಾಪುರದ ಕೈಫಿಯತ್ತು)

11) ಮುಜಲಬಂದರ

(,,)

12) ಬಲ್ಲಾಳತೀರ್ಥ

(ಗೋಕರ್ಣದ ಕೈಫಿಯತ್ತು)

13) ಬಾರಕೂರು ಹಳವೆ

(ಬಾರಕೂರು ಸಂಸ್ಥಾನ ಕೈಫಿಯತ್ತು)

14) ಖಾನಕೆರೆ

(ಅಂಕಾಪುರ ಕೈಫಿಯತ್ತು)

15) ಕುಮಾರ ರಾಮನ ಕುಮ್ಮಟ

(ತಾಲೂಕು ಕಂಪಲಿ ಕೈಫಿಯತ್ತು)

2.3.2.3 <u>ಸಾಮಾಜಿಕ ಘಟನಾ ಪ್ರಧಾನ ಸ್ಥಳನಾಮಗಳು</u>:

ಕೈಫಿಯತ್ತುಗಳು ಸೃಷ್ಟಿಯಾಗಿರುವ ಕಾಲದ ಸಂದರ್ಭದಲ್ಲಿ ಸಾಮಾಜಿಕ ಜನವರ್ಗದಿಂದ ರೂಪಿತಗೊಳ್ಳಬಹುದಾದ ಮತ್ತು ಅವರ ಜೀವನದ ವ್ಯವಹಾರದ ಫಲವಾಗಿ 'ಹತ್ತಿಬೆಳಗಲ್ಲು' ಮುಂತಾದ ಸ್ಥಳನಾಮಗಳು ಹುಟ್ಟಿರಬಹುದಾಗಿದೆ. ಈ ಕೆಳಗಿನ ಸ್ಥಳನಾಮಗಳು ಅಂತಹ ಸ್ಥಳನಾಮಗಳ ಉದಾಹರಣೆಗಳಾಗಿವೆ:—

1) ಪರಿದತ್ತಿ

(ದೇವೇಗೌಡನ ಹಳ್ಳಿ ಕೈಫಿಯತ್ತು)

2) ಹುಲಿಗನ ಘಟ್ಟ

(ಮಲ್ಲೂರು ಸಾಸಿವೆಹಳ್ಳಿ ಸೀಮೆ ಕೈಫಿಯತ್ತು)

3) ಕಪ್ಪಿಕಲ್ಲು

(,,)

4) ಭಟ್ಟರ ಹಳ್ಳಿ

(ಕೈಫಿಯತ್ತು, ಭಟ್ಟರಹಳ್ಳಿ ತಾಲೂಕ ಬಳ್ಳಾರಿ)

5) ದನ್ನಾಪುರ

(ಹತ್ತಿ ಬೆಳಗಲ್ಲು ಕೈಫಿಯತ್ತು)

6) ಸಿಂಕಾಪುರ

(ಹತ್ತಿ ಬೆಳಗಲ್ಲು ಕೈಫಿಯತ್ತು)

7) ತಗಂಯಾರು

(„)

8) ಹತ್ತಿ ಬೆಳಗಲ್ಲು

(„)

9) ಹಿರೆ ಹಾಳು

(ಹಿರೆ ಹಾಳು ಕೈಫಿಯತ್ತು)

—•—•—•—

2.3.3 ಸ್ಥಳ ಪ್ರಧಾನ ಸ್ಥಳನಾಮಗಳು:

ಈ ಸ್ಥಳನಾಮಗಳು ಪ್ರಧಾನವಾಗಿ ಪ್ರಕೃತಿ ಜನ್ಯವಾದವು. ಇಲ್ಲಿ ವ್ಯಕ್ತಿಗಳಿಗೆ ಭಿನ್ನವಿದ್ದರೂ ಸ್ಥಳಕ್ಕೆ ಮಹತ್ವ ಸಂದಾಯವಾಗಿರುತ್ತದೆ. ಸ್ಥಳದ ವಿಶಿಷ್ಟತೆ ಅಥವಾ ಅಸಾಮಾನ್ಯತ್ವವೇ ಇಂತಹ ಸ್ಥಳನಾಮಗಳಿಗೆ ತಳಹದಿಯಾಗಿ ಕೆಲಸ ಮಾಡುತ್ತಿರುತ್ತವೆ. ಒಂದು ಸ್ಥಳಕ್ಕೆ ಇರುವ ಹೆಸರಿನ ವ್ಯುತ್ಪತ್ತಿಯನ್ನು ಇಂತಹ ಸ್ಥಳನಾಮಗಳು ರಂಜಕವಾಗಿ ಮಾಡುತ್ತವೆ. ದೊಡ್ಡದಾದ ಕಲ್ಲು, ವಿಶಾಲವಾದ ಕೆರೆ, ವಿಡಾಲವಾದ ಗುಹೆ ಹೀಗೆ ಅಸಂಖ್ಯ ವಸ್ತುಗಳು ಇದರಲ್ಲಿ ಅಡಕವಾಗಿರುತ್ತವೆ. ಈ ಕೆಳಗಿನ ಸ್ಥಳನಾಮಗಳು ಇವಕ್ಕೆ ಉದಾಹರಣೆಯಾಗಿವೆ:—

2.3.3.1 ಪೌರಾಣಿಕ ಸ್ಥಳ ಪ್ರಧಾನ ಸ್ಥಳನಾಮಗಳು:

ಪೌರಾಣಿಕ ವ್ಯಕ್ತಿಗಳು, ದೇವತೆಗಳು ಆ ಸ್ಥಳದಲ್ಲಿ ಇರುವಿಕೆಯಿಂದ ಆ ಸ್ಥಳಕ್ಕೆ ಮಾಂತ್ರಿಕತೆಯನ್ನು ತಂದುಕೊಟ್ಟು ಆ ಸ್ಥಳಕ್ಕೆ ವಿಶಿಷ್ಟ ಶಕ್ತಿಯನ್ನು ನೀಡುತ್ತಾರೆ. ಆಗ ಆ ವ್ಯಕ್ತಿಗಳ ನಾಮಗಳು ಗೌಣವಾಗಿ ಆ ವ್ಯಕ್ತಿಗಳಿಂದ ಆ ಸ್ಥಳಗಳೇ ಪ್ರಧಾನವಾಗಿ ಮಹಾತ್ಮೆಗೊಳ್ಳುತ್ತವೆ. ಅಲ್ಲದೆ ಕೆಲ ಸ್ಥಳನಾಮಗಳಾದ ನದಿಯು ತಟಾಕ, ಸರೋವರ ಸಿದ್ಧಕ್ಷೇತ್ರದ ಸ್ಥಳಗಳು ಅವುಗಳು ಇರುವಿಕೆಯ ಮಾತ್ರದಿಂದಲೇ ಸ್ಥಳಪ್ರಧಾನವಾಗುತ್ತವೆ. ಪ್ರಕೃತಿ ವ್ಯಾಪಾರದಲ್ಲಿ ನಡೆಯುವ ವಿನೋದಭಾಸಗಳೂ ಸ್ಥಳ ಪ್ರಧಾನವಾಗಬಹುದಾಗಿದೆ: ನಾಯಿ ಮೊಲದ ಮೇಲೆ ಬಿದ್ದು ಓಡಿಸಿಕೊಂಡು ಹೋಗುವುದು ಪ್ರಕೃತಿಯ ಸಹಜ ವ್ಯಾಪಾರ ಆದರೆ ಮೊಲವು ನಾಯಿಯ ಮೇಲೆ ಬಿದ್ದು ಓಡಿಸಿಕೊಂಡು ಹೋಗುವುದು ವಿರೋಧಾಭಾಸ ಇಂತಹ ಘಟನೆಗಳು 'ಗಂಡು ನೆಲ' ವೆಂದು ಗುರುತಿಸಲ್ಪಟ್ಟು (ಉದಾಹರಣೆ: ವಿಜಯನಗರ ಸಾಮ್ರಾಜ್ಯ) ಸ್ಥಳಪ್ರಧಾನ ಸ್ಥಳನಾಮವಾಗುವುದಕ್ಕೆ ಕಾರಣವಾಗುತ್ತವೆ.

1) ಉಡುಗಣಿ

(ಉಡುಗಣಿ ಕೈಫಿಯತ್ತು)

2) ಭಾರ್ಗವ ಪುರಿ

(ಕೈಫಿಯತ್ತು ತಾಲೂಕೆ ಅಜಂಪುರ)

3) ರುದ್ರತೀರ್ಥ

(ತಿರುಮಕೂಡಲು ಕೈಫಿಯತ್ತು)

4) ಕಮಲಾಚಲ

(ಬೆಳ್ಳದ ಕೋಟೆ ಕೈಫಿಯತ್ತು)

5) ಮಾಂಡವ್ಯ ಆಶ್ರಮ

(,,)

6) ಸಿದ್ಧ ಕ್ಷೇತ್ರ

(ಚಿಕ್ಕಮಗಳೂರು ಕೈಫಿಯತ್ತು)

7) ಕಮಲಾ ಸರೋವರ

(ಕಾಶಿನ ದೇವಸ್ಥಾನದ ಕೈಫಿಯತ್ತು)

8) ಕಾನ್ವಕೋಡು

(ಕಾಳಕೋಡು ಮಾಗಣಿ ಕೈಫಿಯತ್ತು)

9) ಮಹಾಬಲೇಶ್ವರ

(ಗೋಕರ್ಣದ ಕೈಫಿಯತ್ತು)

10) ಧರ್ಮಸ್ಥಳದ

(ಧರ್ಮಸ್ಥಳದ ಕೈಫಿಯತ್ತು)

11) ಅಂತುರೋಳಿ ಹಳವೆ

(ಬಾರಕೂರು ಸಂಸ್ಥಾನ ಕೈಫಿಯತ್ತು)

12) ರನದ ಬಾವಿ

(,,)

13) ಮುಕುಕುಂದ ತೀರ್ಥ

(,,)

14) ಮುಗು

(ಮುಗುವಿನ ಮಾಗಾಣಿ ಕೈಫಿಯತ್ತು)

15) ಕಮಲಾಪುರ

(ಕಮಲಾಪುರದ ಕೈಫಿಯತ್ತು)

2.3.3.2 <u>ಚಾರಿತ್ರಿಕ ಸ್ಥಳಪ್ರಧಾನ ಸ್ಥಳನಾಮಗಳು</u>:

ಚಾರಿತ್ರಿಕ ಘಟನೆಗಳು, ಚಾರಿತ್ರಿಕ ವ್ಯಕ್ತಿಗಳ ಸಾಧನೆಗಳು ಆ ಸ್ಥಳದಲ್ಲಿ ಅವಿಚ್ಛಿನ್ನವಾಗಿ ಸೇರಿಕೊಂಡು ಸ್ಥಳ ಪ್ರಧಾನವಾಗಿ ನಿರೂಪಗೊಳ್ಳುತ್ತವೆ ಮತ್ತು ಇಂತಹ ಸ್ಥಳನಾಮಗಳು ಸ್ಥಳೀಯ ಮತ್ತು ಪ್ರಾದೇಶಿಕ ಇತಿಹಾಸವನ್ನು ಕಟ್ಟಿಕೊಡುವಲ್ಲಿ ನೆರವಾಗುತ್ತವೆ.

1) ಅರಿಕುಠಾರ

(ಅರಕುಠಾರದ ಕೈಫಿಯತ್ತು)

2) ರಾಜಾವಳಿ

(ತಲಕಾಡು ಕೈಫಿಯತ್ತು)

3) ಗಂಗಾ ಸಮುದ್ರ ಕೆರೆ

(ಮುಲುಶ್ಯೂರು ಸಾಹಿಬ ಹಳ್ಳಿ ಸೀಮೆ ಕೈಫಿಯತ್ತು)

4) ಜುಲ್ಫ ಮೊರಾಲದ ಕೋಟೆ ಕೈಫಿಯತ್ತು

(ಶಿಬ್ರದ ಕೋಟೆ ಕೈಫಿಯತ್ತು)

5) ಹೊದಿಗೆರೆ

(ಹೊಂದಿಗೆರೆ ಸೀಮೆಯಂತು ಕೈಫಿಯತ್ತು)

6) ಕುಂದಾಪುರ

(ಕುಂದಾಪುರದ ಕೈಫಿಯತ್ತು)

7) ಗಂಗುಳಿ

(,,)

8) ಕಾಂತುರ ಮುಂಜಿದ ಅರಮನೆ

(ಜಮ್ಮ ಅರಸುಗಳ ಕೈಫಿಯತ್ತು)

9) ನೀರಜಿ

(ಮುರದಾಳ ಕೈಫಿಯತ್ತು)

10) ಂಮೀಳು ಅರೆ

(ಂತುಳರೆ ಮಾಗಣಿ ಕೈಫಿಯತ್ತು)

11) ಹಾರನಾಡು

(ಹಾರನಾತ ,,)

12) ಹೊಸಂಗಡಿ

(ಹೊಸಂಗಡಿ ,,)

13) ದರಿಂಯಾ ತಲಾವ

(ದರೋಜಿ ಕೈಫಿಯತ್ತು)

14) ಮಡು

(ಅಂತಾಪುರದ ಕೈಫಿಯತ್ತು)

15) ಕುರುಹೋಡು

(ಕೈಫಿಯತ್ತು ಕುರುಗೋಡು ತಾಲೂಕೆ ಬಳ್ಳಾರಿ)

16) ವಿಜಯನಗರ

(,,)

18. ಹೊಸ ಕುರುಗೋಡು

(ಕೈಫಿಯತ್ತು, ಕುರುಗೋಡು ತಾಲೂಕೆ ಬಳ್ಳಾರಿ)

19. ಕಂಪ್ಲಿ

(ತಾಲೂಕು ಕಂಪಲಿ ಕೈಫಿಯತ್ತು)

20. ಹೊಸ ಮಲೆದುರ್ಗ

(")

21. ಕಪಿಲಗ್ರಾಮ

(")

22. ಬಳಹರಿ

(ಬಳ್ಳಾರಿಯ ಕೈಫಿಯತ್ತು)

2.3.3.3 ಸಾಮಾಜಿಕ ಸ್ಥಳ ಪ್ರಧಾನ ಸ್ಥಳ ನಾಮಗಳು:

ಸಾಮಾಜಿಕ ಜನ ವರ್ಗವು ಪ್ರಾಕೃತಿಕವಾಗಿ ನಿರ್ಮಾಣಗೊಂಡಿರುವ ಸ್ಥಳಗಳನ್ನು ಕಂಡಾಗ ಒಂದೊಂದು ರೀತಿಯಲ್ಲಿ ಅದನ್ನು ಕರೆಯಲು ಶರು ಶುರು ಮಾಡುತ್ತಾರೆ. ಅವರಿಗೆ ಹೇಗೆ ಆ ಸ್ಥಳ ಕಾಣುತ್ತದೆ ಎಂಬ ಆಧಾರದ ಮೇಲೆ ಬೆಳಗಲ್ಲು ಗುಡ್ಡ ಮುಂತಾದ ಸ್ಥಳನಾಮಗಳು ನಿರೂಪಗೊಂಡಿವೆ. ಹೀಗೆ ಸಾಮಾಜಿಕ ಜನವರ್ಗದಿಂದ ನಿರ್ಮಿತವಾದ ಇಂಥ ಸ್ಥಳನಾಮಗಳು ಸಾಮಾಜಿಕ ಸ್ಥಳ ಪ್ರಧಾನವಾಗಿ ನಿರೂಪಣೆಗೊಳ್ಳಬಹುದಾಗಿದೆ.

1. ಅರ್ಕಾಡು

(ಅರ್ಕಾಡ ಸಂಸ್ಥಾನದ ಕೈಫಿಯತ್ತು)

2. ಕೋಡಿದುರ್ಗ

(ಕೈಫಿಯತ್ತು, ಕುರುಗೋಡು ತಾಲೂಕೆ ಬಳ್ಳಾರಿ)

3. ಭಟ್ಯರಹಳ್ಳಿ

(")

4. ಬೆಳಗಲ್ಲುಗುಡ್ಡ

(ಹತ್ತಿ ಬೆಳಗಲ್ಲು ಕೈಫಿಯತ್ತು)

2.3.4 <u>ಪ್ರತಿನಾಮಗಳು:</u>

ಪುರಾಣದಲ್ಲಿ ಇದ್ದ ನಾಮಕ್ಕೆ ಬದಲಾಗಿ ಮತ್ತೊಂದು ನಾಮವನ್ನಿಟ್ಟಿರುವುದು ಕೈಫಿಯತ್ತುಗಳಲ್ಲಿ ಕಾಣಬರುತ್ತದೆ. ಈ ಪ್ರತಿನಾಮಗಳಿಗೆ ಕಾರಣ ಪೌರಾಣಿಕ ಅಥವಾ ಚಾರಿತ್ರಿಕವಾಗಿರಬಹುದು. ಆ ಪ್ರತಿ ನಾಮಗಳು ಪುರಾಣದ ನಾಮಗಳೊಂದಿಗೆ ಜಂಟಿಯಾಗಿ ಬಂದಿರುವುದು ಈ ಕೆಳಗಿನ ಸ್ಥಳನಾಮಗಳೇ ಸಾಕ್ಷಿಯಾಗಿವೆ.

1. ಚಂಡಗುಡನಹಳ್ಳಿ ಪ್ರತಿನಾಮ ದೇವರಾಜಪುರ
(ಅಕಿಂಬಿಬ್ಯಾಳು(ನರಸೀಪುರತ ತಾಲೂಕು)ಕೈಫಿಯತ್ತು)
2. ಶಿವಪ್ಪಗೊಂಡನ ಹಳ್ಳಿಗೆ ಪ್ರತಿನಾಮ ರಾಜನೀತಿ ಪಟ್ಟಣ
(ಕೈಫಿಯತ್ತು, ತಾಲೂಕೆ ಅಜಂಪುರ)
3. ಕಮಲಾಚಲ, ದಕ್ಷಿಣ ಗೋವರ್ಧನ ಗಿರಿಗೆ ಪ್ರತಿನಾಮ
(ಬೆಟ್ಟದ ಕೋಟೆ ಕೈಫಿಯತ್ತು)
4. ತ್ರಿಕದಂಬಕ ಪುರವೆಂಬ ನಾಮ ಅಳಾಳನಾಥ ಪ್ರತಿನಾಮಧೇಯ
(ಬೆಟ್ಟದ ಕೋಟೆ ಕೈಫಿಯತ್ತು)
5. ಚಂದ್ರ ದ್ರೋಣ ಪರ್ವತಕ್ಕೆ ಪ್ರತಿನಾಮ ಗಾಳಿಪುಜ ಹದ್ದುಗೆ
(ಯಗಟಿ ಕೈಫಿಯತ್ತು)
6. ಬಿದರೂರಿಗೆ ಹೈದರ ನಗರಾ ಯೆಂಬ ಹೆಸರು
(ನಾಗರದ ಕೈಫಿಯತ್ತು)
7. ಸಿದ್ಧಕ್ಷೇತ್ರದ ಪ್ರತಿನಾಮ ಹಿರೇಮಗಳೂರು
(ಹೀರೆಮಗಳೂರು ಕೈಫಿಯತ್ತು)
8. ಮಂಗಾಡಿ, ಪ್ರತಿನಾಮ ಕಲ್ಲು ಗುಂಡುಯೆಂತ
(ಅಜಿಲರ ಕೈಫಿಯತ್ತು)
9. ವಸುಪುರಕ್ಕೆ ಪ್ರತಿನಾಮ ಬಸರೂರು
(ಕುಂದಾಪುರದ ಕೈಫಿಯತ್ತು)
10. ಗೋಕರ್ಣಕ್ಕೆ ಮಹಾಬಲೇಶ್ವರ ತೀರ್ಥವೆಂಬ ಹೆಸರು
(ಗೋಕರ್ಣದ ಕೈಫಿಯತ್ತು)
11. ಹಾಡುವಳ್ಳಿಗೆ ಪ್ರತಿನಾಮ ಸಂಗೀತಪುರ
(ಭಟ್ಕಳದ ಕೈಫಿಯತ್ತು)
12. ಹೊಯ್ಸನ ಹಳ್ಳಿ ನಾಮದ ಪ್ರತಿನಾಮ ಸೊಗಾನಿ
(ಸೋಗಾನಿ ಅಗ್ರಹಾರದ ಕೈಫಿಯತ್ತು)
13. ಭಟ್ಟರ ಹಳ್ಳಿಗೆ ಪ್ರತಿನಾಮ ಕಾಟಗೊಂಡನ ಹಳ್ಳಿ(ಪ್ರಾಚೀನ ನಾಮ)
(ಕೈಫಿಯತ್ತು ಭಟ್ಟರಹಳ್ಳಿ ತಾಲೂಕೆ ಬಳ್ಳಾರಿ)
14. ದೇವಲಾಪುರ ಪ್ರತಿನಾಮ ಮಲ್ಲಿಕಾರ್ಜುನಪುರ
(ದೇವಲಾಪುರ ಪ್ರತಿನಾಮ ಮಲ್ಲಿಕಾರ್ಜುನಪುರ ಕೈಫಿಯತ್ತು)

15. ಬಲಕುಂದಿಯೆಂಬೋ ಗ್ರಾಮಕ್ಕೆ ಪ್ರಾಚೀನ ನಾಮ ಕಂತಳಕುಂತಳ ನಗರ
(ಕೈಫಿಯತ್ತು, ಕುರುಗೋಡು ತಾಲೂಕ ಬಳ್ಳಾರಿ)

16. ಪೋರಂಗಲ್ಲಿಗೆ ಪ್ರತಿನಾಮ ಮಹೇಂದ್ರ ಪಟ್ಟಣ
(ಹತಿರನಹಳ್ಳಿ ಕೈಫಿಯತ್ತು)

17. ಹತ್ತಿಬೆಳಗಲ್ಲಿಗೆ ಪ್ರಾಚೀನ ನಾಮ ಬೆಳಗಲ್ಲು
(ಹತ್ತಿಬೆಳಗಲ್ಲು ಕೈಫಿಯತ್ತು)

18. ಹಂಹರಪುರ ಗ್ರಾಮಕ್ಕೆ ಪ್ರತಿನಾಮ ಹಿರೆಹಾಳು
(ಹಿರೆಹಾಳು ಕೈಫಿಯತ್ತು)

– – – – – – – –

2.3.5 <u>ಸಂಕೀರ್ಣ ಸ್ಥಳ ನಾಮಗಳು:</u>

ಈ ಕೆಳಗಿನ ಸ್ಥಳನಾಮಗಳು ಜಾತಿ ಪ್ರಧಾನತೆಯಿಂದ ಪ್ರಾಣಿ ಪಶುವರ್ಗ ಪ್ರಧಾನದಿಂದ ನೈಸರ್ಗಿಕವಾಗಿ ನಿರ್ಮಿತಗೊಂಡಿರುವುದರ ಕಾರಣದಿಂದ ಇಂಥ ಸ್ಥಳ ನಾಮಗಳು ನಿರೂಪಗೊಂಡಿವೆ. ಇವುಗಳನ್ನು ಪ್ರಾಕೃತಿಕ ಮೂಲಕ ಸ್ಥಳನಾಮಗಳಿಗೂ ಹೋಲಿಸಿಕೊಳ್ಳಬಹುದಾಗಿದೆ.

1. ಕಮಲಾಪಲ
(ಬೆಟ್ಟದ ಕೋಟೆ ಕೈಫಿಯತ್ತು)

2. ಅಜಲರು, ಬಂಗರು
(ಅಜಲರ ಕೈಫಿಯತ್ತು)

3. ನಾಗೂರು
(ಸೊದೆ ಸಂಸ್ಥಾನದ ಕೈಫಿಯತ್ತು)

4. ಮದಕವಿ
(ಸಂತೆಬೆನ್ನೂರು ಕೈಫಿಯತ್ತು)

5. ಹಂಸತೀರ್ಥ
(ನಗರ ಸೀಮೆ ಕೈಫಿಯತ್ತು)

6. ಹುಲಿಗನ ಘಟ್ಟ
(ಮಲ್ಲೂರು ಸಾಸಿವೆಹಳ್ಳಿ ಸೀಮೆ ಕೈಫಿಯತ್ತು)

7. ಕಪ್ಪಕಲ್ಲು
(„)

8. ಕೋಳಿಗುತ್ತ
(ಕೈಫಿಯತ್ತು, ಕುರುಗೋಡು ತಾಲೂಕ ಬಳ್ಳಾರಿ)

ಭಾಗ 3 : ಸ್ಥಳನಾಮಗಳ ವಿವರಣೆ:

3.1 : ವ್ಯಕ್ತಿ ಪ್ರಧಾನ ಸ್ಥಳ ನಾಮಗಳು:

3.1.1: ಪೌರಾಣಿಕ

3.1.1 : ಪೌರಾಣಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು

3.1.2 : ಚಾರಿತ್ರಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು

3.1.3 : ಸಾಮಾಜಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು

3.2 : ಘಟನಾ ಪ್ರಧಾನ ಸ್ಥಳನಾಮಗಳು:

3.2.1 : ಪೌರಾಣಿಕ ಘಟನಾ ಪ್ರಧಾನ ಸ್ಥಳನಾಮಗಳು

3.2.2 : ಚಾರಿತ್ರಿಕ ಘಟನಾ ಪ್ರಧಾನ ಸ್ಥಳನಾಮಗಳು

3.2.3 : ಸಾಮಾಜಿಕ ಘಟನಾ ಪ್ರಧಾನ ಸ್ಥಳನಾಮಗಳು

3.3 : ಸ್ಥಳ ಪ್ರಧಾನ ಸ್ಥಳ ನಾಮಗಳು

3.3.1 : ಪೌರಾಣಿಕ ಸ್ಥಳ ಪ್ರಧಾನ ಸ್ಥಳನಾಮಗಳು

3.3.2 : ಚಾರಿತ್ರಿಕ ಸ್ಥಳ ಪ್ರಧಾನ ಸ್ಥಳನಾಮಗಳು

3.3.3 : ಸಾಮಾಜಿಕ ಸ್ಥಳ ಪ್ರಧಾನ ಸ್ಥಳನಾಮಗಳು

3.4 : ವೃತ್ತಿನಾಮಗಳು:

3.5 : ಸಂಕೀರ್ಣ ಸ್ಥಳನಾಮಗಳು

3.1.1 ಸ್ಥಳನಾಮಗಳ ವಿವರಣೆ: ಪೌರಾಣಿಕ ವ್ಯಕ್ತಿಪ್ರಧಾನ ಸ್ಥಳನಾಮಗಳು:

ಹಿಂದೂ ಧರ್ಮಕ್ಕೆ ಅನ್ವಯಿಸಿದ ಪುರಾತನ ಧಾರ್ಮಿಕ ಗ್ರಂಥಗಳಲ್ಲಿ ಹೇಳಿರುವ ಕತೆಗಳನ್ನು ಅಂದರೆ ಲೌಕಿಕ ವ್ಯಕ್ತಿ, ವಸ್ತು, ವಿಷಯಗಳಿಗೆ ಸಂಬಂಧಿಸದ, ಅಲೌಕಿಕ ವಿಚಾರಗಳನ್ನು ಕುರಿತಾದ ಘಟನೆಗಳನ್ನು ವರ್ಣಿಸುವ ಕತೆಗಳೇ ಪುರಾಣಗಳು. ರಾಮಾಯಣ, ಮಹಾಭಾರತ, ಭಾಗವತ ಅಲ್ಲದೆ ಇತರ ವೇದೋಪನಿಷತ್ತುಗಳ ಅಂಗವಾಗಿ ಬರುವ 18 ಪುರಾಣಗಳು ಇಂಥವು. ಇವುಗಳಲ್ಲಿ ಬರುವ ಪಾತ್ರಗಳು ಲೌಕಿಕ ಜೀವನಕ್ಕೆ ಆದರ್ಶವನ್ನು ತೋರುವ ಉದಾಹರಣೆಗಳಾಗಿವೆ. ಪುರಾತನ ಕಾಲದಲ್ಲಿ ರಚಿತಗೊಂಡ ಇಂಥ ವ್ಯಕ್ತಿ, ಪಾತ್ರಗಳನ್ನು ನಮ್ಮ ಶಿಷ್ಟರು ಮತ್ತು ಜನಪದರು ತಮ್ಮ ತಮ್ಮ ಅಗತ್ಯಗಳಿಗೆ ಅನುಸಾರವಾಗಿ ತಮ್ಮ ತಮ್ಮ ಚಾತುರ್ಯ ಕಲ್ಪಕತೆಗಳಿಗೆ ಅನುಸರಿಸಿ ಬೇಕಾದಂತೆ ಬಳಸಿಕೊಂಡಿದ್ದಾರೆ. ಮೆಕೆಂಜಿ ಕೈಫಿಯತ್ತುಗಳ ನಿರೂಪಕರು ಸಹ ಸ್ಥಳನಾಮಗಳಿಗೆ ಆಗಾಗಲೇ ಇದ್ದ ಮಹತ್ವಗಳನ್ನು ಕಲ್ಪಿತವಾಗಿಯೋ ಅಕಲ್ಪಿತವಾಗಿಯೋ ನೋಡಿದ್ದಾರೆ. ಹೇಳಿದ್ದಾರೆ. ಪೌರಾಣಿಕ ವ್ಯಕ್ತಿಗಳು ಆ ಮೂಲಕ ಸ್ಥಳಗಳ ಹೆಸರಾಗಿ ಕಾಣಿಸಿಕೊಂಡಿದ್ದಾರೆ. ಸ್ಥಳಗಳ ಹೆಸರಾಗಿ ಕಾಣಿಸಿಕೊಳ್ಳುವುದಕ್ಕೆ ಆದರ್ಶ ವ್ಯಕ್ತಿಯೇ ಆಗಬೇಕಾಗಿಲ್ಲ ದುಷ್ಟ ವ್ಯಕ್ತಿಗಳು ಆಗಬಹುದು. ಅಂಥ ಹೆಸರಿನ ವ್ಯಕ್ತಿಗಳ ನಾಮಗಳು ಸ್ಥಳನಾಮಗಳಾಗಿದ್ದನ್ನು ಕೈಫಿಯತ್ತುಗಳಲ್ಲಿ ಕಾಣಬಹುದಾಗಿದೆ.

ಪೌರಾಣಿಕ ವ್ಯಕ್ತಿಗಳ ಹೆಸರುಗಳು ಸ್ಥಳನಾಮವಾದ ಬಗೆಯನ್ನು ಡೆಂಕಣಿ ಕೋಟೆಯ ಬೆಟ್ಟರಾಯ ಸ್ವಾಮಿಯ ಕೈಫಿಯತ್ತಿನಲ್ಲಿ ಬರುವ ಕಣ್ವ ಮಹರ್ಷಿಗಳು ಒಂದು ಆಶ್ರಮಕ್ಕೆ ನಾಲ್ಕು ಯುಗಕ್ಕೆ ನಾಲ್ಕು ಹೆಸರುಗಳನ್ನು ಇಟ್ಟರು. ಕೃತ ಯುಗದಲ್ಲಿ ಅತ್ರಿಪುರ ವೆಂಬ ಹೆಸರು, ತ್ರೇತಾಯುಗದಲ್ಲಿ ರಾಮಾಪುರ, ದ್ವಾಪರಯುಗದಲ್ಲಿ ಅರ್ಜುನಪುರ ಕಲಿಯುಗದಲ್ಲಿ ಡೆಂಕಣಿಪುರ. ಇಲ್ಲಿಯ ರಾಮ, ಅರ್ಜುನರು ನಮಗೆ ತಿಳಿದಿರುವಂತೆ ಪೌರಾಣಿಕ ಪಾತ್ರಗಳು ಅತ್ರಿ ಋಷಿಗಳೂ ಸಹಿತ. ಆಶ್ರಮಕ್ಕೆ ಉಪದ್ರವ ಕೊಡುತ್ತಿದ್ದ ದೇವಕಂಠರನೆಂಬ ರಾಕ್ಷಸನನ್ನು ಸ್ವಾಮಿಯು ಡೆಂಕಣಿ ಗದೆಯಿಂದ ಸಂಹರಿಸಿದುದಕ್ಕಾಗಿ 'ಡೆಂಕಣಿಪುರ' ಎಂದು ಹೆಸರು ಬಂದಿದೆ.

ಪೌರಾಣಿಕ ವ್ಯಕ್ತಿಗಳು ದೇವರ ಹೆಸರಾಗಿ ಆ ನಂತರ ಗ್ರಾಮದ ಹೆಸರಾದುದನ್ನು ಮುಲ್ಲೂರು ಸಾಸಿವೆಹಳ್ಳಿ ಸೀಮೆ ಕೈಫಿಯತ್ತು ಹೇಳುತ್ತದೆ. ಸದಾಶಿವರಾಯರು 1312ನೆಯ ಶಕ ವರ್ಷಕಾಲದಲ್ಲಿ ನದಿ ತೀರದಲ್ಲಿರುವ ಕನ್ಯಣಂದಿ ಎಂಬ ಗ್ರಾಮವನ್ನು ರಾಮೇಶ್ವರ ದೇವರಿಗೆ ಸರ್ವಮಾನ್ಯವಾಗಿ ಕೊಟ್ಟು, ಈ ಗ್ರಾಮವನ್ನು 'ರಾಮಾಪುರ' ಎಂದು ಹೆಸರಿಟ್ಟರು.

ಒಬ್ಬ ಅಸಾಮಾನ್ಯನಾದ ಅಥವಾ ವಿಶಿಷ್ಟವಾದ ಪೌರಾಣಿಕ ವ್ಯಕ್ತಿಯೊಬ್ಬನ ಸಾಧನೆ ಮತ್ತು ಶಕ್ತಿಗಳನ್ನು ಶೃಂಗೇರಿಯ ಕೈಫಿಯತ್ತು ನಿರೂಪಿಸುತ್ತದೆ. ಋಷ್ಯಶೃಂಗ ಮುನಿಯು ತಾನು ಹೋದ ಸ್ಥಳಗಳಲ್ಲಿ ಎಲ್ಲಾ ಶುಭಗಳನ್ನು ತಾನು ಅಲ್ಲಿ ಇರುವಿಕೆಯ ಮಾತ್ರದಿಂದಲೇ ತನಗರಿವಿಲ್ಲದಂತೆಯೇ ಸೃಷ್ಟಿ ಮಾಡುತ್ತ ತನ್ನ ಪತ್ನಿ ಶಾಂತಾದೇವಿ ಸಮೇತನಾಗಿ ತನ್ನ ಆಶ್ರಮಕ್ಕೆ ಬರುತ್ತಾನೆ. ಆದರೆ ಅಷ್ಟರಲ್ಲಿ ತಂದೆ ವಿಭಾಂಡಕ ಋಷಿಯು ಸಾಯುಜ್ಯ ಮೋಕ್ಷ ಪಡೆದಿರುತ್ತಾನೆ. ಋಷ್ಯಶೃಂಗನು ತುಂಗಾಭದ್ರ ನದಿ ತೀರವಾದ ರುದ್ರವಾದ ಕ್ಷೇತ್ರದಲ್ಲಿ ಕುಳಿತು ತಪಸ್ಸು ಮಾಡಿ ಈಶ್ವರನನ್ನು ಒಲಿಸಿಕೊಂಡು ತನ್ನ ತಂದೆಯ ಬಗ್ಗೆ ಕೇಳಲಾಗಿ ನಮ್ಮಲ್ಲಿ ಸಾಯುಜ್ಯವಂ ಪಡೆದನೆಂದು ಹೇಳಿದ ವೇಳೆ ತನಗೂ ಅದೇ ಪ್ರಕಾರದ ಸಾಯುಜ್ಯವನ್ನು ಕೇಳಲಾಗಿ ಈಶ್ವರನು ಲಿಂಗ ರೂಪದಲ್ಲಿ ಉದ್ಭವಿಸಲಾಗಿ, ಆ ಲಿಂಗದಲ್ಲಿ ಋಷ್ಯಶೃಂಗನು ಪತ್ನಿ ಸಮೇತನಾಗಿ ಸಾಯುಜ್ಯವನ್ನು ಪಡೆದನು. ಋಷ್ಯಶೃಂಗನು ಆಶ್ರಮವನ್ನು ಮಾಡಿಕೊಂಡು ತಪಸ್ಸು ಮಾಡುತ್ತಿದ್ದ ಆ ಸ್ಥಳಕ್ಕೆ 'ಋಷ್ಯಶೃಂಗಪುರಿ' ಎಂದು ನಾಮಧೇಯವಾಯಿತು. ಈಗ ಕರ್ನಾಟಕ ಭಾಷೆಯಲ್ಲಿ `ಶೃಂಗೇರಿ' ಎಂದು ಕರೆಯುತ್ತಾರೆ.

ಕೊಳ್ಳಿಯ ಸ್ಥಳದಲ್ಲಿ ಆ ಮುಂಚೆ ವಾಸಿಸುತ್ತಿದ್ದ ದೈವದ ಹೆಸರು ಕೋಟೆ ನಿರ್ಮಾಣವಾದ ನಂತರ ಅದಕ್ಕೂ ಹೆಸರಾದುದನ್ನು ಭಟ್ಕಳದ ಕೈಫಿಯತ್ತಿನ 'ಕುಟುಮೇಶಿ' ನಾಮ' ಹೇಳುತ್ತದೆ. ತಿಮ್ಮರು ವೀರಮ್ಮಾಜಿ ಕಾಲಕ್ಕೆ ಸಮುದ್ರ ಬಳಿಯ ಅಳಿವೆಬಾಗದ ಸಮೀಪ ಕೋಟೆಯನ್ನು ಕಟ್ಟಿಸಿ ಅಲ್ಲಿ ಘಾತುಕ ಕಟಮೊಳಿಯೆಂಬ ದೈವವಿತ್ತು. ಅನಂತರದಲ್ಲಿ ಕುಟುಮೇಶಿಯೆಂಬ ಹೆಸರು ಆಯಿತು.

ರಾಮಾಯಣದ ಒಂದು ಘಟನೆಯನ್ನು ನಿಮಿತ್ತವಾಗಿ ಇಟ್ಟುಕೊಂಡು ಒಬ್ಬ ವ್ಯಕ್ತಿಯು ಲಿಂಗ ಪ್ರತಿಷ್ಠೆಯನ್ನು ಮಾಡಿದ ಪ್ರಯುಕ್ತ ಮತ್ತು ಈ ಲಿಂಗವು ಈಶ್ವರ ಸೂಚಕವಾದದ್ದರಿಂದ ಮತ್ತು ಈಶ್ವರ ಪದವು ಅವನ ಪೂರ್ವದ ಹೆಸರಿನಲ್ಲಿದ್ದ ಕಾರಣ ಅದೇ ಮುಂದೆ 'ಧೈರೂರು' ಆಗಲು ಕಾರಣವೆಂದು ಧೈರೂರು ಮಾಗಾಣಿ ಕೈಫಿಯತ್ತು ನಿರೂಪಿಸುವುದು. ಈ ಲಿಂಗ ಪ್ರತಿಷ್ಠೆಯನ್ನು ಅಗಸ್ತ್ಯರು ಮಾಡಿದ್ದರಿಂದ ಅವರಿಗೆ ಬಿಂದುಮುನೀಶ್ವರ ಎಂದು ಹೆಸರಿದ್ದ ಕಾರಣ ಬಿಂದುಪುರವೆಂದು ಹೆಸರಾಯಿತು. ಈಗ ಜನರು ಅದನ್ನು ಧೈರೂರು ಎಂದು ಕರೆಯುತ್ತಾರೆ.

ಒಬ್ಬ ಮಹಾ ದೈತ್ಯನು ತನ್ನ ದುಷ್ಟ ಕಾರ್ಯದಿಂದ ಮುನಿಯಿಂದ ಶಾಪಿತಗೊಂಡು ನಾಡು ಕಾಡಾಗಿ ಆ ಕಾಡೂ ಆ ದುಷ್ಟ ವ್ಯಕ್ತಿಯ ಹೆಸರಿನಿಂದ ಕರೆಯಿಸಿಕೊಂಡು ಒಂದು ಸ್ಥಳ ಪುರಾಣವಾಗಿ ನಿರೂಪಗೊಂಡಿರುವುದನ್ನು ಸ್ವದೇ ಸಂಸ್ಥಾನದ ಕೈಫಿಯತ್ತಿನ 'ದಂಡಕಾರಣ್ಯ' ನಾಮವು ನಿರ್ದೇಶಿಸುತ್ತದೆ: ಹಿರಣ್ಯಾಕ್ಷಾ ವಂಶದಲ್ಲಿ ಹುಟ್ಟಿದ ದಂಡಕ ದೈತ್ಯನು ಬೇಟೆಗೆ ಹೋದಾಗ ಶುಕ್ರಾಚಾರ್ಯರ ಮಗಳನ್ನು ಒತ್ತಾಯಪೂರ್ವಕವಾಗಿ ಕೂಡುತ್ತಾನೆ. ಇದನ್ನರಿತು ಶುಕ್ರಾಚಾರ್ಯರು ಇವನ ದೇಶ ಸಂಪೂರ್ಣ ಧೂಳಿನ ಮಳೆ ಆಗಲಿ, ನಾಡು ಅರಣ್ಯವಾಗಲಿ, ಇವನ ವಂಶ ನಿರ್ವಂಶವಾಗಲಿ ಎಂದು ಶಪಿಸುತ್ತಾನೆ. ಅನಂತರ ಆ ನಾಡು ಕಾಡಾಗಿ ದಂಡಕಾರಣ್ಯ ಎಂದು ಹೆಸರು ಪಡೆಯಿತು.

ಒಬ್ಬ ದುಷ್ಟ ವ್ಯಕ್ತಿಯ ನಾಮವನ್ನು ಹೊತ್ತು ನಿಂತಿರುವ ಬಳ್ಳಾರಿ ಕೈಫಿಯತ್ತಿನ 'ಬಳ್ಳಾರಿ' ನಾಮವು ಮಹಾಭಾರತ ಕಥೆಯನ್ನು ಹಿನ್ನೆಲೆಯಾಗಿಸಿಕೊಂಡಿದೆ. ಹಸ್ತಿನಾವತಿಯನ್ನು ಧರ್ಮರಾಯನು ಆಳುತ್ತಿದ್ದ ಸಮಯದಲ್ಲಿ ಕುಂತಳ ನಗರವನ್ನು ಚಂದ್ರಹಾಸ ರಾಯನು ಆಳುತ್ತಿದ್ದನು. ಆಗ ಈ ಪ್ರದೇಶ ಅರಣ್ಯವಾಗಿತ್ತು. ಅಲ್ಲಿರುವ ಗುಡ್ಡದಲ್ಲಿ ಬಳಾಸುರನೆಂಬ ರಾಕ್ಷಸನು ಜೀವಕೋಟಿಗಳಿಗೆ ಉಪದ್ರವ ಮಾಡುತ್ತ ಇರುವಾಗ ಸ್ವರ್ಗಲೋಕದ ದೇವ ಕನ್ನಿಕೆಯರು ಭೂಲೋಕದ ಈ ಸ್ಥಳದಲ್ಲಿ ಇಷ್ಟ ವಿಹಾರದಲ್ಲಿ ಇರುವಾಗ ಬಳಾಸುರನು ದೇವಕನ್ನಿಕೆಯರಿಗೆ ಕಾಮಾತುರದಿಂದ ಉಪದ್ರವವನ್ನು ಕೊಟ್ಟುದರಿಂದ ದೇವೇಂದ್ರನು ಇದನ್ನು ಕೇಳಿ ಒಡೆ ಮಾಡುವ ನಿಮಿತ್ತ ಭೂಲೋಕಕ್ಕೆ ಬಂದು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಆ ಗುಡ್ಡಕ್ಕೆ ಬಳ್ಳಾರಿಯೆಂಬ ನಾಮವು ಪ್ರಸಿದ್ಧಿ ಪಡೆಯಿತು. ಇಲ್ಲಿ ಇದು ಪುರಾಣ ಕತೆಗೆ ಕಲ್ಪಕತೆಯನ್ನು ಸೇರಿಸಲಾಗಿದೆ.

— — — ... — — —

3.1.2 ಚಾರಿತ್ರಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು:

ನಮ್ಮ ವರ್ತಮಾನವನ್ನು ಭೂತವು ನಿಯಂತ್ರಿಸುತ್ತಿರುತ್ತದೆ ಎಂಬ ಮಾತು ಸತ್ಯವಾದುದು. ಆ ಮೂಲಕ ಚರಿತ್ರೆಯು ಮತ್ತೊಮ್ಮೆ ಪುನರಾವೃತಗೊಂಡು ಸ್ಮರಣೆಯಲ್ಲಿ ಉಳಿಯುತ್ತದೆ. ಚರಿತ್ರೆಯ ವ್ಯಕ್ತಿಗಳು ತಮ್ಮ ಕಾರ್ಯದ ಫಲದಿಂದ ಸ್ಥಳನಾಮಗಳಾಗಿ ಹೆಸರುಗೊಂಡುದನ್ನು ಇಂದಿನ ಅನೇಕ ಸ್ಥಳನಾಮಗಳಲ್ಲಿ ಕಾಣುತ್ತೇವೆ. ಬಾಗಡಿ ಕೈಫಿಯತ್ತಿನ ಬಾಗಡಿ ನಾಮವು ಹೊಳೆ ನರಸೀಪುರದ ಬಾಗಡಿ ತಿಮ್ಮೇಗೌಡನು ಯಾರೂ ಇಲ್ಲದ ಮೈದಾನದ ಸ್ಥಳದಲ್ಲಿ ಗ್ರಾಮವನ್ನು ನಿರ್ಮಾಣ ಮಾಡಿ ತನ್ನ ಹೆಸರನ್ನಿಟ್ಟನು. ಅದು ಸಂಕ್ಷಿಪ್ತಗೊಂಡು ಬಾಗಡಿ ಆಯಿತು. ವಿಜಯನಗರ ಅರಸರ ಪತನದ ಸಮಯದಲ್ಲಿ ಈ ಕರ್ನಾಟಕದ ಬಹು ಭಾಗವು ಅನೇಕ ಪಾಳೆಯಗಾರರು, ನಾಯಕರಿಂದ ತುಂಡು ತುಂಡು ಭಾಗಗಳಲ್ಲಿ ಆಳಲ್ಪಡುತ್ತಿತ್ತು. ಅಂತಹ ನಾಯಕರ ಹೆಸರನ್ನು ಹೊತ್ತು ನಿಂತಿರುವ ಅನೇಕ ಸ್ಥಳನಾಮಗಳು ಇಂದಿಗೂ ಅವರನ್ನು ಸ್ಮರಿಸಿಕೊಳ್ಳುವ ಸ್ಮಾರಕಗಳಾಗಿವೆ ಎಂದರೆ ತಪ್ಪಿಲ್ಲ. ಊರು, ಕೇರಿ, ಕೋಟೆ, ಕೊತ್ತಲಗಳಿಗೆ ಚರಿತ್ರೆಯ ವ್ಯಕ್ತಿಗಳ ನಾಮಗಳು ಸ್ಥಳನಾಮಗಳಾಗಿ ಕೆತ್ತಲ್ಪಟ್ಟಿವೆ. ಮುಲ್ಲಾರು ಸಾಸಿವೆ ಹಳ್ಳಿ ಸೀಮೆ ಕೈಫಿಯತ್ತಿನಲ್ಲಿ ಬರುವ 'ಬಾಲನಾಯಕನ ಕೆರೆ' 'ಬಸವನ ತೂಬು', 'ಕೇಸಗನ ಕೆರೆ', 'ಯೀರನಾಯಕನ ಕೆರೆ', ಇಂತಹವು. ಅದೇ ಕೈಫಿಯತ್ತಿನ 'ಗಿರಿನಾಗಕೆ' ನಾಮವು ಕುಂಚಗಾರನ ಹಳ್ಳಿ ಗ್ರಾಮದಲ್ಲಿ ಹುಚ್ಚನಾಯಕರ ಹೆಂಡತಿ ಗಿಯಮ್ಮ ನಾಗತಿಯವರು ಸಾರ್ವಜನಿಕರಿಗೆ ಉಪಯೋಗವಾಗಲೆಂದು ಒಂದು ಕೆರೆಯನ್ನು ಕಟ್ಟಿಸಿದಳು. ಈಗಲೂ ಅಕೆಯ ಹೆಸರಿನಿಂದ ಅದು ಕರೆಯಲ್ಪಡುತ್ತಿದೆ. ಇದು ಒಬ್ಬ ಸಾಮಾನ್ಯ ಸ್ತ್ರೀಯ ತ್ಯಾಗ ಬುದ್ಧಿಯನ್ನು ತೋರಿಸುತ್ತದೆ.

ನರಪತಿ ಹರಿಹರ ರಾಯರ ಕಾಲದಲ್ಲಿ ಯೆಗ್ಗಳಿ ಯೆಂಬ ಸೂಳೆಯು ಸಂಗೀತ, ಸಾಹಿತ್ಯ, ನಾಟ್ಯ ಸಮಗ್ರ ಭರತ ಶಾಸ್ತ್ರವನ್ನು ಕಲಿತು ರಾಯರ ಮುಂದೆ ನಾಟ್ಯವಾಡಿ ರಂಜಿಸಿ ರಾಯರು ಉಡುಗೊರೆ ಕೊಟ್ಟುದನ್ನು ತಿರಸ್ಕರಿಸಿ, ತನ್ನ ಹೆಸರಿನಿಂದ ಸ್ಥಳವೊಂದನ್ನು ನಿರ್ಮಾಣ ಮಾಡಿಸಿಕೊಡುವ ಬಗ್ಗೆ ಅಪ್ಪಣೆಯನ್ನು ಕೇಳುತ್ತಾಳೆ.

ಅದರ ಮೇರೆಗೆ ರಾಯರು ವೇದಾವತಿ ನದೀತೀರದ ದಕ್ಷಿಣ ದಿಕ್ಕಿಗೆ ಕೋಟೆಯನ್ನು ಕಟ್ಟಿಸಿ, ಅದಕ್ಕೆ 'ವೆಂಗಟೆ'(ಯಗಟಿ ಕೈಫಿಯತ್ತು)ಎಂದು ಹೆಸರಿಟ್ಟ. ಇದು ಒಬ್ಬ ವ್ಯಕ್ತಿಯ ಹೆಸರನ್ನು ಹೊತ್ತರೂ ಸಾರ್ವಜನಿಕರನ್ನು ರಕ್ಷಿಸುವ ಭದ್ರತಾ ಗೋಡೆಯಾಗಿದೆ.

ಸೋಗಾನಿ ಅಗ್ರಹಾರದ ಕೈಫಿಯತ್ತು-28 'ಹೈದರ ನಗರ' ಎಂಬ ನಾಮವು ಆ ಪೂರ್ವದ ಹೆಸರನ್ನು ಅಳಿಸಿ ಹಾಕಿ ಒಬ್ಬ ಪ್ರಬಲ ವ್ಯಕ್ತಿಯ ಹೆಸರನ್ನು ನಾಮವಾಗಿ:- ಸಿಕೊಂಡು ಐತಿಹಾಸಿಕ ಘಟನೆಯನ್ನು ವ್ಯಕ್ತಿ ಪ್ರಧಾನವಾಗಿ ಹೊರ ಹಾಕಿದೆ.: ಹೈದರಾಲಿಯು ಚಿತ್ರದುರ್ಗದ ಪಾಳೆಗಾರರನ್ನು ಕೂಡಿಕೊಂಡು ಬಿದನೂರಿನ ವೀರಮ್ಮಾಜಿಯನ್ನು ಕೈ ಸೆರೆ ಮಾಡಿಕೊಂಡನು. ಅನಂತರ ಪೂರ್ವದ ಅರಸುಗಳ ಅಭಿಪ್ರಾಯದ ಮೇರೆಗೆ ಬಿದನೂರಿಗೆ ಹೈದರನಗರ ಎಂಬ ಹೆಸರಿಟ್ಟನು.

ಕೋಟೆ ಕೊತ್ತಲಗಳನ್ನು ಸಾರ್ವಜನಿಕ ಉದ್ದೇಶದಿಂದ ರಾಜ್ಯ ರಕ್ಷಣೆಗೋಸ್ಕರ ರಾಜರು ಕಟ್ಟಿಸುತ್ತಿದ್ದರೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ಸಾಮಾನ್ಯನೂ ಕೋಟೆಯನ್ನು ಕಟ್ಟಿಸಿ ರಾಜನಿಗೆ ನೆರವಾದುದನ್ನು ಕುಂದಾಪುರದ ಕೈಫಿಯತ್ತಿನ 'ಹೊಕ್ಕರಾಮಶೆಟ್ಟಿ ಕೋಟೆ' ನಾಮವು ಹೇಳುತ್ತದೆ.

ಭಟ್ಕಳದ ಕೈಫಿಯತ್ತಿನ 'ಭಟ್ಕಳ' ನಾಮವು ಅದೇ ಹೆಸರಿನ ಒಬ್ಬ ಜೈನ ಸನ್ಯಾಸಿಯು ಕದಂಬ ವಂಶಸ್ಥರ ಕಾಲದಲ್ಲಿ ಸಂಗೀತಪುರದಲ್ಲಿ ಇದ್ದರು. ಸನ್ಯಾಸಿಯ ದರುಶನವನ್ನು ದಿನವೂ ಮಾಡುವ ಸಲುವಾಗಿ ಸ್ಥಳವನ್ನು ಕೇಳಿದಾಗ ಸನ್ಯಾಸಿಯು ಸೂಸಗಡಿಯನ್ನು ಸೂಚಿಸಿದರು. ಅಲ್ಲಿ ಗ್ರಾಮ ನಿರ್ಮಾಣ ಮಾಡಿ ಸೂಸಗಡಿಗೆ ಬದಲಾದಿ ಗುರು ಭಕ್ತಿಯಿಂದ ಬಟಕಳಾ ಎಂಬ ಹೆಸರನ್ನು ರಾಜ ಇಟ್ಟನು. ಒಬ್ಬ ವ್ಯಕ್ತಿಯನ್ನು ಪ್ರಧಾನವಾಗಿಸಿಕೊಂಡು ಸ್ಥಳ ಮತ್ತು ಘಟನೆಯನ್ನು ಈ ಸ್ಥಳನಾಮವು ಮೈಗೂಡಿಸಿಕೊಂಡಿದೆ.

ಅಂಕಾಪುರ ಕೈಫಿಯತ್ತಿನ 'ಸಿಂಗಣಕೆರೆ' ನಾಮವು ಸಿಂಗನೆಂಬ ಸರದಾರನು ಬೇರೆ ಸರದಾರರೂ ತಮ್ಮ ತಮ್ಮ ಹೆಸರಿನಲ್ಲಿ ಕೆರೆ ನಿರ್ಮಾಣ ಮಾಡುವುದನ್ನು ನೋಡಿ ತಾನು ತನ್ನ ಹೆಸರಿನಲ್ಲಿ ಕೆರೆಯೊಂದನ್ನು ಕಟ್ಟಿಸಿದನು. ಇದು ಪ್ರತಿಯೊಬ್ಬ ವ್ಯಕ್ತಿಯು ಸಮಾಜದಲ್ಲಿ ತನ್ನ ಹೆಸರನ್ನು ಶಾಶ್ವತವಾಗಿ ಉಳಿಸಿ ಹೋಗುವ ಹಂಬಲದ ಫಲವಾಗಿದೆ.

ಕುರುಗೋಡು ತಾಲೂಕ ಬಳ್ಳಾರಿ ಕೈಫಿಯತ್ತಿನಲ್ಲಿ ಬರುವ 'ಎಲ್ಲಾಪುರ' 'ಅಮ್ಮಾಪುರ' ಸ್ಥಳನಾಮಗಳು ಯಲ್ಲಪ್ಪ ನಾಯಕನೆಂಬುವವನು ಕುರುಗೋಡಿನ ನೈರುತ್ಯ ದಿಕ್ಕಿನ ಕಸುಬೆ ಭೂಮಿಯಲ್ಲಿ ಎಲ್ಲಾಪುರ ಎಂಬ ಗ್ರಾಮ ಕಟ್ಟಿಸಿದನು. ಈತನ ಹೆಂಡತಿ ಬಾದನ ಜ ಹಟ್ಟಿ ಭೂಮಿಯಲ್ಲಿ ತನ್ನ ಹೆಸರಿನಿಂದ ಅಮ್ಮಾಪುರ ಗ್ರಾಮವನ್ನು ಕಟ್ಟಿಸಿದಳೆಂದು ತಿಳಿದುಬರುತ್ತದೆ. ಈತನ ಮಗ ದಾಸನಾಳ ನಾಯಕನು ಕೆರೆಯನ್ನು ಕಟ್ಟಿಸಿ ನಾಯಕನ ಕೆರೆಯೆಂದು ಹೆಸರಿಟ್ಟನು. ಇದೇ ಕೈಫಿಯತ್ತಿನಲ್ಲಿ ಕೊಂಡಲ ನಾಯಕ ಗುಡ್ಡವು ಕೊಂಡಲ ನಾಯಕನೆಂಬುವವನು ಆ ಪೂರ್ವದಲ್ಲಿ ಆ ಗುಡ್ಡದ ಹತ್ತಿರ ವಾಸಿಸುತ್ತಿದ್ದ ಕಾರಣ ಅವನ ಹೆಸರೇ ಆ ಗುಡ್ಡಕ್ಕೆ ಬಂತೆಂದು ಗೊತ್ತಾಗುತ್ತದೆ.

ದರೋಜಿ ಗ್ರಾಮದ ಕೈಫಿಯತ್ತಿನ 'ಹಗಲಭತ್ತನ ಕೆರೆ' 'ಖಾನಕೆರೆ' ಮತ್ತು 'ಖಾನನ ಗುಡ್ಡ' ಸ್ಥಳನಾಮಗಳು ವ್ಯಕ್ತಿಯ ಹೆಸರನ್ನು ಹೊಂದಿವೆ. ಅದೇ ವ್ಯಕ್ತಿಗಳು ಅದನ್ನು

ನಿರ್ಮಿಸಿದುದರಿಂದ ಅದೇ ಹೆಸರಿನಿಂದ ಖ್ಯಾತಿಯನ್ನು ಪಡೆದುಕೊಂಡಿವೆ.

\- - - - - -

3.1.3 ಸಾಮಾಜಿಕ ವ್ಯಕ್ತಿ ಪ್ರಧಾನ ಸ್ಥಳನಾಮಗಳು:

ಒಬ್ಬ ರಾಜ, ಸಾಮಂತ ಅಥವಾ ಪಾಳೆಯಗಾರನು ಮತ್ತು ರಾಜನಿಂದ ಬಹುಮಾನವನ್ನು ಪಡೆದ ಯುಗಳ ಎಂಬ ಸಾಳೆಯು ತಮ್ಮದೇ ಆದ ಪ್ರಭಾವದಿಂದ ಅಥವಾ ಬಲದಿಂದ ಸ್ಥಳನಾಮಗಳಾಗಿಸಿ ತಮ್ಮ ಹೆಸರನ್ನು ಖ್ಯಾತಿಗೊಳಿಸಿಕೊಳ್ಳಬಹುದು ಆದರೆ ಸಾಮಾನ್ಯ ವ್ಯಕ್ತಿಗಳು ತಮ್ಮ ಹೆಸರಿನಲ್ಲಿ ಸ್ಥಳನಾಮಗೊಂಡಿರುವುದನ್ನು ವಿರಳವಾಗಿಯಾದರೂ ಕೆಲ ಸ್ಥಳನಾಮಗಳು ಹೇಳುತ್ತವೆ.

ಗೋಕರ್ಣಕ್ಕೆ ಉತ್ತರ ದಿಕ್ಕಿನಲ್ಲಿ ಶಂಕರಶೆಟ್ಟಿ ಎಂಬುವವನು ಅಘನಾಶಿನಿ ಉತ್ಪತ್ತಿಯಲ್ಲಿ ಕೆರೆ ತೋಡಿಸಿ ದೇವಸ್ಥಾನ ಕಟ್ಟಿಸಿದುದರಿಂದ 'ಶಂಕರದೇವರ ಹೊಂಡ' ಎಂದು ಶಿರಸಿ ಕೈಫಿಯತ್ತಿನ ಸ್ಥಳನಾಮವು ನಿರೂಪಿಸುತ್ತದೆ.

ಮಗಳ ಹೆಸರಿನಲ್ಲಿ ತಂದೆಯು ಪುರವನ್ನು ನಿರ್ಮಾಣ ಮಾಡಿದುದರಿಂದ ಸ್ವಾದೀ ಸೋದೆ ಸಂಸ್ಥಾನದ ಕೈಫಿಯತ್ತಿನಲ್ಲಿಯು 'ಅಜಾಪುರಿ' ಸ್ಥಳನಾಮವು ನಿರ್ಮಾಣವಾಯಿತು.

ರಾಮಲಿಂಗನ ಗುಡ್ಡವಾಗಿದ್ದ ಸ್ಥಳನಾಮವು ಅಲ್ಲಿ ನಾಗಲಿಂಗಯ್ಯ ಎಂಬ ಮಹಾತ್ಮ ತಪಸ್ಸು ಮಾಡಿದ್ದ ಕಾರಣ 'ನಾಗಲಿಂಗಯ್ಯ ಗುಡ್ಡ'ವೆಂದು ಕರೆಯುತ್ತಾರೆ. (ಕೈಫಿಯತ್ತು ಕುರುಗೋಡು) ಇದೇ ಕೈಫಿಯತ್ತಿನ ಜಿಂಕಲ ಹರವಿನ ಗುಡ್ಡವೆಂಬ ಕುರುಗೋಡಿನ ಉತ್ತರ ದಿಕ್ಕಿನ ಸ್ಥಳನಾಮವು ಗೊಲ್ಲರ ವಳಗಿ ಜಿಂಕಲರು ಯಂಬೋ ನಾಯಕರು ಉಕಡದಲ್ಲಿಯಿದ್ದ ಕಾರಣ ಜಿಂಕಲ ಹರವಿನ ಗುಡ್ಡ ಎಂದು ಕರೆಯುತ್ತಾರೆ. ಇಲ್ಲಿ ಒಂದು ಜಾತಿಯ ಹೆಸರೇ ಸ್ಥಳನಾಮದ ಹೆಸರೇ ಆಗಿದೆ.

ಮಲ್ಲದೇವರಾಯರು (ರಾಯದುರ್ಗದ) ಸ್ಥಳ ನೋಡಿ ಮುಖ್ಯಸ್ಥಳವೆಂದುಕೊಂಡು ರಾಮಲಿಂಗದೇವರು ಇದ್ದ ಬೆಟ್ಟದ ಗುಡಿಯನ್ನು ದೊಡ್ಡದಾಗಿ ಕಟ್ಟಿಸಿ ದುರ್ಗ ನಿರ್ಮಾಣ ಮಾಡಿದ, ತನ್ನ ಮನೆ ದೇವರು ಈ ಸ್ಥಳದಲ್ಲಿ ಇರಬೇಕೆಂದು ದೇವಲಾಪುರದ ಬೆಟ್ಟದ ಮೇಲೆ ಮಲ್ಲದೇವರು ಎಂದು ನಿರ್ಮಾಣ ಮಾಡಿದ. ಇದನ್ನು ದರೋಜಿ ಗ್ರಾಮದ ಕೈಫಿಯತ್ತು ನಿರೂಪಿಸುತ್ತದೆ. ನಂತರ ದೇವಲಾಪುರಕ್ಕೆ ಪ್ರತಿನಾಮ 'ಮಲ್ಲದೇವರ ದುರ್ಗ' ಎಂಬ ಪ್ರತಿ ನಾಮವಾದುದರ ವಿವರಣೆಯನ್ನು ಇದು ನೀಡುವುದು.

3.2.1 ಪೌರಾಣಿಕ ಘಟನಾ ಪ್ರಧಾನ ಸ್ಥಳನಾಮಗಳು:

ಪೌರಾಣಿಕ ಘಟನೆಗಳು ಸ್ಥಳನಾಮಗಳಿಗೆ ಸ್ಥಳ ಪುರಾಣವನ್ನು ಕಲ್ಪಿತವಾಗಿಯೋ ಅಕಲ್ಪಿತವಾಗಿಯೋ ಒದಗಿಸಿ ರಂಜನೀಯವಾಗಿಸುತ್ತವೆ. ಈ ಸ್ಥಳನಾಮಗಳ ಮೂಲಕ ಆ ಪೌರಾಣಿಕ ಘಟನೆಗಳು ಜೀವಂತವಾಗಿ ಐತಿಹ್ಯದ ರೂಪವನ್ನು ಪಡೆದುಕೊಳ್ಳುತ್ತವೆ. ಟೆಂಕಣಿಕೋಟೆಯ ದಿಬ್ಬರಾಯ ಸ್ವಾಮಿ ಕೈಫಿಯತ್ತಿನ 'ಟೆಂಕಣಿಪುರ' ನಾಮವು ಸನತ್ಕುಮಾರ ನದಿ ತೀರದಲ್ಲಿ ಅತ್ರಿ ಮಹರ್ಷಿಗಳು ತಪಸ್ಸು ಮಾಡುತ್ತಿದ್ದುದನ್ನು ಕಣ್ವರು ಕೇಳಿ ಅಲ್ಲಿಗೆ ಬಂದು ತಪಸ್ವಿಗಳಿಗೆ ರಮ್ಯವಾಗಿದೆ ಎಂದು ತಿಳಿದು ಬದರಿಕಾಶ್ರಮದ ಬಳಿ ತಪಸ್ಸು ಮಾಡಲು ಎನ್ನುವ ಸಾಧನೆ ವೇಳೆಗೆ ತಪಸ್ಸು ಮಾಡುತ್ತಿದ್ದಾಗ ದೇವಕಂಟಕನೆಂಬ ರಾಕ್ಷಸನು ವ್ಯಾಘ್ರ ರೂಪದಿಂದ ಬಂದು ತಪೋ ವಿಘ್ನಗಳನ್ನು ಮಾಡಿದ್ದರಿಂದ ಈ ಉಪದ್ರವವನ್ನು ಪರಿಹರಿಸುವವರು ಯಾರು ಎಂದು ದೇವರಲ್ಲಿ ಮೊರೆ ಇಡಲಾಗಿ ದೇವರು ಪ್ರತ್ಯಕ್ಷವಾಗಿ ಆ ಟೆಂಕಣಿ ಎಂಬ ಗದೆಯಿಂದ ದೇವಕಂಟಕನನ್ನು ಸಂಹರಿಸಿದ ಕಾರಣ ಗದೆಯ ಹೆಸರೇ ಟೆಂಕಣಿಪುರವೆಂದು ಕಣ್ವಋಷಿಗಳೇ ನಾಲ್ಕು ಯುಗಕ್ಕೆ ನಾಲ್ಕು ಹೆಸರುಗಳನ್ನು ಸೂಚಿಸುವಂತಾಯಿತು.

ಸ್ಥಳ ಪ್ರಧಾನತೆಯನ್ನು ಹೊಂದಿ ಪ್ರಮುಖ ಘಟನೆಯನ್ನು ಹಿನ್ನೆಲೆಯಾಗಿ ಹೊಂದಿರುವ ತಲಕಾಡು ಕೈಫಿಯತ್ತಿನ 'ತಲಕಾಡು' ನಾಮವು 'ಹಿಂದೆ ಕೃತಾಯುಗದಲ್ಲಿ ಕಾಶಿಯಲ್ಲಿ ವಿಶ್ವೇಶ್ವರ ಸ್ವಾಮಿ, ಆದಿ ಸೋಮದತ್ತ ಋಷೀಶ್ವರರು ತಪಸ್ಸು ಮಾಡಲಾಗಿ ತಪಸ್ಸಿಗೆ ಮೆಚ್ಚಿ ಸ್ವಾಮಿ ಸಾಯುಜ್ಯ ಕೊಡುತ್ತಿದ್ದೇವೆ ಜಿದಾರಣ್ಯ ಕ್ಷೇತ್ರಕ್ಕೆ ಪ್ರತ್ಯಕ್ಷವಾಗಿ ಹೋಗಿ ಎಂದಲ್ಲಿ ಇವರು ಬರುವ ಸಮಯದಲ್ಲಿ ಮಾರ್ಗ ಮಧ್ಯದಲ್ಲಿ ಗಜಗಳು ಇವರನ್ನು ಸಂಹಾರ ಮಾಡಲಾಗಿ, ಮತ್ತೆ ಅದೇ ಗಜ ರೂಪದಿಂದ ಜಿದಾರಣ್ಯದ ಶಾಲ್ಮಲೀ ವೃಕ್ಷದಲ್ಲಿ ಇರುವಂತ ಈಶ್ವರಗೆ ಪೂಜೆ ಮಾಡಿ ಹೊರಟು ಹೋದ ನಂತರ 'ತಲ'ಕಾಡ' ಎಂಬ ಇಬ್ಬರು ಕಿರಾತಕರು ಗಜಗಳು ವೃಕ್ಷವನ್ನು ಪೂಜೆ ಮಾಡುವುದು ಕಂಡು ಆಶ್ಚರ್ಯ ಪಟ್ಟು ಗಜಗಳು ಹೊರಟ ನಂತರ ಕೊಡಲಿಯಿಂದ ಶಾಲ್ಮಲಿಯನ್ನು ಛೇದಿಸಿದಾಗ ಸ್ವಾಮಿ ಶಿರಸ್ಸಿನ ಮೇಲೆ ಪೆಟ್ಟು ಬೀಳಲಾಗಿ ರಕ್ತ ಪ್ರವಾಹವಾಯಿತು. ಆ ಕಿರಾತಕರು ಮೂರ್ಛಿತರಾದಾಗ ಆಕಾಶವಾಣಿಯು ''ಉಕ್ಷ ಸಹ ಮೂಲವಾಗಿ ಚೂರ್ಣ ಮಾಡಿ ಹಚ್ಚಲು ರಕ್ತ ಕ್ಷೀರವಾದಂತಾದು ಆಯಿತು''..... ತಲಕಾಡರೆಂಬ ಆ ಇಬ್ಬರು ದೇಹರಿಗೆ ಅನಂತರ ಸಾಯುಜ್ಯ ಪದವಿ ದೊರೆಯಿತು. ಈ ಸ್ಥಳವನ್ನು ಅವರ ಹೆಸರಿನಿಂದ ತಲಕಾಡು ಎಂಬ ನಾಮದಿಂದ ಕರೆಯುತ್ತಾರೆ. ಗಜರೂಪದಿಂದ ಋಷಿಗಳು ಸಾಯುಜ್ಯವನ್ನು ಕೊಟ್ಟ ಕಾರಣ ಗಜಪುರಿಯೆಂದು ಕರೆಯಲಾಗುತ್ತದೆ. ತಲಕಾಡು ಕೈಫಿಯತ್ತು –2 ರಲ್ಲಿಯ ಗೋಕರ್ಣ ನಾಮವು ಇದೇ ಸ್ಥಳಪುರಾಣವನ್ನು ಗರ್ಭದಲ್ಲಿರಿಸಿಕೊಂಡುದುದಾಗಿದೆ. ಗಜಗಳು ಬಂದು ಇಬ್ಬರು ಋಷೀಶ್ವರರನ್ನು ಸಂಹಾರ ಮಾಡಿದ್ದರಿಂದ, ಅಂತ್ಯ ಕಾಲದಲ್ಲಿ ಯಾವ ಸ್ಮರಣೆಯು ಬರುತ್ತದೆಯೋ ಪುನಃ ಅದೇ ಜನ್ಮವೆ ಬರುವುದು. ಎಂಬ ವಚನದಿಂದ ಶಿಷ್ಯರ ಸಮೇತ ಗಜ ಜನ್ಮವೆ ಬಂದು, ಅನಂತರ ವಿಶ್ವೇಶ್ವರ ಸ್ವಾಮಿಯವರು ಮಣಿಕರ್ಣಿಕೆಯ ಸಮೇತರಾಗಿ ಶಾಲ್ಮಲಿ ವೃಕ್ಷದಲ್ಲಿ ಉದ್ಭವಿಸಿದರು. ಮಣಿಕರ್ಣಿಕೆಯು

'ಗೋಕರ್ಣ' ಎಂಬ ನಾಮದಿಂದ ಕರೆಸಿದವಳಾದಳು. ತರುವಾಯ ಆನೆಗಳು ಎಲ್ಲಾ ಬಂದು ಗೋಕರ್ಣಕ್ಕೆ ಸ್ವಾಮಿಯ ಸನ್ನಿಧಿಗೂ ಏಕವಾಗಿರುವ ಕ್ಷೀರವನ್ನು ನೋಡಿ ಪಾನವನ್ನು ಮಾಡಿದರು, ಆಗ ಶಿವನು ಕೈಲಾಸಕ್ಕೆ ಸಶರೀರವಾಗಿ ಹೋಗಿ ಎಂದು ಅಪ್ಪಣೆ ಕೊಡಿಸಿದನು. ತದಾರಭ್ಯವಾಗಿ ಈ ಆಶ್ರಮವು ಮುನಿಪರಿಣಿಯ ಪ್ರದೇಶದಿಂದ ಉದಕವನ್ನು ಬಿಟ್ಟುದರಿಂದ ಗೋಕರ್ಣ ಎಂದು ಹೆಸರು ಪಡೆಯಿತು.

ಗೌತಮ ಕ್ಷೇತ್ರದ ಪದ್ಮ ವನದಲ್ಲಿ ಬನಶಂಕರಿ ದೇವತೆ ಇರಲು ಆ ಸಮಯದಲ್ಲಿ ಸಪ್ತ ಮಾತೃಕೆಗಳು ಮಹಿಷಾಸುರ ಮರ್ದಿನಿ ಅಪ್ಪಣೆಯ ಮೇರೆ ಧೂಮ್ರ ಾಸುರ, ಮುಲ್ಲಾಸುರರೆಂಬ ರಾಕ್ಷಸರ ದಿನ್ನು ಆಟ್ಟಿಕೊಂಡು ಬಂದು ಸಂಹಾರ ಮಾಡಿದರು. ಈ ಸುದ್ದಿಯನ್ನು ಬನಶಂಕರಿ ದೇವತೆಗೆ ತಿಳಿದು ಇಲ್ಲಿ ಸ್ಮೃತು ಪರಿಹಾರ ಮಾಡಿಕೊಳ್ಳಿ ಎಂದು ಸಪ್ತ ಮಾತೃಕೆಗಳಿಗೆ ತಿಳಿಸಲಾಗಿ ಯೀ ಬನಶಂಕರಿ ಅಮ್ಮನವರೇ ಮಹಿಷಾಸುರ ಮರ್ದಿನಿ ಅವತಾರವೆಂದು ತಿಳಿದು ಇದ್ದರು. ಸಪ್ತಮಾತೃಕೆಗಳು ದೇವತೆಗಳಿಗೆ ಶತ್ರುಗಳಾದ ರಾಕ್ಷಸರನ್ನು ಸಂಹಾರ ಮಾಡಿ ಜಯಿಸಿದ್ದರಿಂದ ಸಮಸ್ತ ದೇವತೆಗಳು ಸಂತೋಷಪಟ್ಟು ಸುವರ್ಣವೃಷ್ಟಿ ಬೀಳಲಾಗಿ ಸಂಸ್ಕೃತದಲ್ಲಿ 'ವಸುಧಾರೆ' ಎಂಬುದಾಗಿ ಕರೆಯುತ್ತಾರೆ. ವಸು ಎಂದರೆ ಚಿನ್ನ, ಧಾರ ಎಂದರೆ ಮಳೆ. ಜನರ ಬಾಯಿಂದ 'ವಸ್ತಾರೆ'ಯಾಗಿದೆ.

ಗೋಕರ್ಣದ ಕೈಫಿಯತ್ತಿನ ನಾಂತುಕ ತೀರ್ಥ ಸ್ಥಳನಾಮವು ಪುರಾಣ ಪ್ರಸಿದ್ಧವಾದ 33 ತೀರ್ಥಗಳನ್ನು ಒಟ್ಟಿಗೆ ಸೇರಿಸಿ 'ನಾಂತುಕ ತೀರ್ಥ' ಎಂಬ ಹೆಸರು ಉಂಟಾಯಿತೆಂದು ನಿರೂಪಿಸುತ್ತದೆ.

ಬಾರಕೂರ ಸಂಸ್ಥಾನ ಕೈಫಿಯತ್ತಿನ ಈಗಿನ 'ಬಾರಕೂರು' ನಾಮವು ವಾರಕೂಲವೆಂಬ ಹೆಸರಿನಿಂದಾಗಿದೆ. ಬಾರಕೂರಿನ ಪಶ್ಚಿಮ ಭಾಗದಲ್ಲಿ ಇರುವ ಸಿದ್ಧ ಸರಸ್ಸಿನ ತೀರದಲ್ಲಿ ಪೂರ್ವದಲ್ಲಿ ಊರ್ವಶಿ ಮೊದಲಾದ 12 ಮಂದಿ ಅಪ್ಸರ ಸ್ತ್ರೀಯರು ನಿಶಾಕಾಲದಲ್ಲಿ ಬಂದು ಕ್ರೀಡಾ ನಿಮಿತ್ತ ಸಂಚಾರ ಮಾಡುವುದರಿಂದ ವೇಶ್ಯಾ ನಿಮಿತ್ತವಾಗಿ ವಾರ ಶಬ್ದವು, ತೀರ ನಿಮಿತ್ತವಾಗಿ ಕೂಲ ಎಂಬ ಶಬ್ದವು, ಪ್ರಾಪ್ತವಾದ್ದರಿಂದ ವಾರಕೂಲವೆಂಬ ಹೆಸರಾಗಿದೆ. 12 ಮಂದಿ ಅಪ್ಸರ ನಿಮಿ ಸ್ತ್ರೀಯರ ನಿಮಿತ್ತ ವಾಕನ್ಯಾ ಬಾರಕನ್ಯಾಪುರ ಎಂಬ ಹೆಸರು ಬಂತು. ಈಗ ಜನರು ಹೇಳಿಕೊಳ್ಳುವುದು ಬಾರಕೂರು ಬಾರಹಕನ್ಯಾಪುರಾ ಎಂದು.

ಮಧ್ಯ ದರೋಜಿ ತಾಲೂಕನ್ನು ಹನುಮಂತ ರಾಜನು ಆಳುತ್ತಿದ್ದ ಸಮಯದಲ್ಲಿ ಸೋಮನಹಳ್ಳಿ ಕೆರೆ ಕೋಡಿ ಬಿದ್ದು ನಾರಿಹಳ್ಳ ಗಂಡಿಯ ಬಳಿಗೆ ಹೊರಗಂಡಿಯಿಂದ ನರಸಿಂಹ ಗಂಡಿಗೆ ಮೂರು ಹರದಾರಿಯಿಂದ ಹಳ್ಳ ಹರಿದು ದರೋಜಿ ಕೆರೆ ಸೇರಿತು. ದರೋಜಿ ಹಳ್ಳವು ಒಡೆದು ಬರುವ ಪ್ರಾಕ್ಕೆಳ್ಳದಲ್ಲಿ ಆ ಕೆರೆ ಮೂಗ್ಗಿರಿ ಹಳದರಾಯನೆಂಬೋ ದೇವರು ಅಲ್ಲಿಯದ್ದ ಕಾರಣ ಅದು ನೀರಿನಲ್ಲಿ ತೇಲಿ ಹೋಗಿ ಮಣ್ಣಿನಲ್ಲಿ ಇರಲಾಗಿ, ಈ ದೊರೆ ಹನುಮಂತ ರಾಜನಿಗೆ ಸ್ವಪ್ನದಲ್ಲಿ ಬಂದು ಹೇಳಲಾಗಿ ಆ ದೊರೆಯು ಮರುದಿವಸ ನೋಡಿಸಲಾಗಿ ದೇವರುಯಿತ್ತು, ಹನುಮಂತ ದೇವರಿಗೆ ಹಳ್ಳದರಾಯನೆಂಬ ಹೆಸರಿಟ್ಟು ಅಲ್ಲಿಯೇ ಪ್ರತಿಷ್ಠಾಪನೆ ಮಾಡಿದರು. ಅಂದಿನಿಂದ ಆ ಸ್ಥಳಕ್ಕೆ 'ಹಳ್ಳದರಾಯನ ಮಡು' ಎಂದು ನಾಮಕರಣವಾಯಿತು.

ರಾಮಾಯಣದ ಕಥೆಯನ್ನು ಪ್ರಾರಂಭವಾಗಿಸಿಕೊಂಡು ಮಹಾಭಾರತ ಕತೆಗೆ ಪ್ರವೇಶಿಸಿ ಧರ್ಮರಾಯನನ್ನು ಭೀಮಸೇನನಿಗೆ ಅಪ್ಪಣೆ ಮಾಡಿ ಗೋಕರ್ಣಾದಿ ಕ್ಷೇತ್ರದ ಕೋಟಿತೀರ್ಥ ಸ್ನಾನ ಮಾಡುವ ಪ್ರಾಯಶ್ಚಿತ್ತದಲ್ಲಿ ಸಮಸ್ಥ ಋಷಿಗಳು ಕಿರುಕುಳ ಕೊಡುತ್ತಿದ್ದುದನ್ನು ತಪ್ಪಿಸುವಂತೆ ಕುಂಭಾಸುರನನ್ನು ಸಂಹಾರ ಮಾಡುವಂತೆ ಕೇಳಿ ಕೊಳ್ಳಲಾಗಿ, ಭೀಮನು ಕುಂಭಾಸುರನನ್ನು ಹರಿಹರ ಕ್ಷೇತ್ರದಲ್ಲಿ ಸಂಹಾರ ಮಾಡಿದ್ದರಿಂದ ಕುಂಭಾಕ್ಷೇತ್ರ ಎಂಬ ಹೆಸರು ಬಂತು. ಇದಕ್ಕೂ ಪೂರ್ವದಲ್ಲಿ ಉದ್ಭವ ದ್ವಾರದಲ್ಲೂ ಕಂಭದಿಂದ ಯೀಶ್ವರ ಆವಿರ್ಭೂತವಾಗಿದ್ದುದರಿಂದಲೂ ಸಹಾ ಈ ಕ್ಷೇತ್ರಕ್ಕೆ 'ಕುಂಭಕಾಶಿ' ಯೆಂಬ ಹೆಸರು.

ವಿಜಯನಗರದ ಹರಿಹರ ರಾಯರ ಕಾಲದಲ್ಲಿ ಅವರ ಕಡೆಯ ಕುದುರೆಗಳು ಬ್ಯಾಟೆ ಆಡುತ್ತಾ ಬರುವ ವೇಳೆಯಲ್ಲಿ ಉಡವು ಕಣ್ಣಿಗೆ ಕಂಡದ್ದರಿಂದ ನಾಯಿಗಳ ಬಿಟ್ಟು ಬಲೆ ಹಾಕಲು ಹೋಗಲಾಗಿ ಅದು ಯಾತಕ್ಕೂ ಸಿಕ್ಕದೆ ದೊಡ್ಡ ಉಡವಾದ್ದರಿಂದ ಆ ಸ್ಥಳದಲ್ಲಿ ಒಂದು ಗುರುತು ಮಾಡಿ 'ಹಿರೆ ಉಡಿ' ಎಂಬ ಗ್ರಾಮವನ್ನು ಕಟ್ಟಿದರು. ಹೀಗೆ ಆ ಉಡಿ ಅನೇಕ ಘಟನೆಗಳನ್ನು ಸೃಷ್ಟಿಸುತ್ತಾ ಹೋದದ್ದರಿಂದ ನೀತಿಗೆರೆ ಚಿಕ್ಕಉಡವು, ರಾಮನಹಳ್ಳಿ ಮುಂತಾದ ಘಟನಾ ಪ್ರಧಾನ ಸ್ಥಳನಾಮಗಳು ಆ ಉಡವಿನಿಂದ ನಿರ್ಮಾಣ ವಾದದ್ದನ್ನು ಉಡುಮರೂಪಿ ರಂಗನಾಥ (ಸಂತೆಬೆನ್ನೂರು ಸೀಮೆ ಕೈಫಿಯತ್ತು) ಕ್ಷೇತ್ರ ಸ್ಥಳ ಪುರಾಣವು ತಿಳಿಸುತ್ತದೆ. ಬ್ಯಾಟೆಕಾರರು ಆ ಉಡವನ್ನು ಅಟ್ಟಿಸಿಕೊಂಡು ಹೋಗುತ್ತಿರಲಾಗಿ ಅದು ನಿಂತು ನೀತಿಯನ್ನು ಹೇಳಿದುದರಿಂದ 'ನೀತಿಗೆರೆ' ಗ್ರಾಮವು ನಿರ್ಮಾಣವಾಯಿತು. ಮುಂದೆ ಆ ಉಡವು ದೇವರ ಗುಡ್ಡಕ್ಕೆ ಪ್ರವೇಶ ಮಾಡುವ ಸಂದರ್ಭದಲ್ಲಿ ರಾಮ ರಾಮಾ ಎಂಬ ಧ್ವನಿ ಹೊರಡಿಸಿದ ಸ್ಥಳಕ್ಕೆ 'ರಾಮನಹಳ್ಳಿ'ಯೆಂಬ ಗ್ರಾಮವನ್ನು ಕಟ್ಟಲು ಸಹಾಯವಾಯಿತು. ಹೀಗೆ ಈ ಉಡವು ತೋರಿಸಿದ ಮಹಿಮೆಗಳ ಸ್ಥಳಗಳೆಲ್ಲಾ ಗ್ರಾಮಗಳು ಅದಕ್ಕೆ ಸಂಬಂಧಪಟ್ಟ ಗ್ರಾಮ ನಾಮಗಳು ಹುಟ್ಟಲು ಕಾರಣವಾಯಿತು.

'ಹಳೇಬೀಡು ಕೈಫಿಯತ್ತಿನ' ನ 'ದ್ವಾರಪುರಿ' ನಾಮವು ಮಧುಸೂಧನ ರಾಯನು ರಾಮೇಶ್ವರ ಯಾತ್ರೆ ನಿಮಿತ್ತವಾಗಿ ದಕ್ಷಿಣದೇಶಕ್ಕೆ ಬರುತ್ತಿರುವಾಗ ಮಾರ್ಗ ಮಧ್ಯದ ಒಂದು ರಾತ್ರಿಯಲ್ಲಿ ಈ ಸ್ಥಳದಲ್ಲಿ ನೀನು ಪಟ್ಟಣವನ್ನು ಕಟ್ಟಿಕೊಂಡು ಇರು ಎಂಬುದಾಗಿ ಪುಷ್ಪಗಿರಿ ಮಲ್ಲಿಕಾರ್ಜುನ ಸ್ವಾಮಿಯು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ಹೇಳಿದುದರಿಂದ ಈತನು ಪಟ್ಟಣವನ್ನು ಕಟ್ಟಿಸಿ ತನ್ನ ಪಟ್ಟಣ ದ್ವಾರಾವತಿಯುದ್ದರಿಂದ ಇದಕ್ಕೂ ದ್ವಾರಾವತಿಯೆಂಬ ದೇಶ ನಾಮಧೇಯವನ್ನಿಟ್ಟನು.

'ಕೈಫಿಯತ್ತು ತಾಲೂಕೆ ಅಜಂಪುರದ' ದ 'ವಿರೂಪಾಕ್ಷಪುರ' ಎಂಬ ನಾಮವು ಸಹಿತ ಮೇಲಿನ ಸ್ಥಳನಾಮ ಘಟನೆಯಂತೆ ಬುಕ್ಕರಾಯರು ರಾಜ್ಯವನ್ನಾಳುವ ಸಮಯ ದಲ್ಲಿ ಬುಕ್ಕಾಂಬುಧಿ ಗ್ರಾಮದ ಬಳಿಯಲ್ಲಿ ದೊಡ್ಡ ಗ್ರಾಮ ಕಟ್ಟಿಸುವ ಸಮಯದಲ್ಲಿ ವಿರೂಪಾಕ್ಷ ಸ್ವಾಮಿಯವರ ತೀರ್ಥ ಪ್ರಸಾದವಿಲ್ಲದೆ ಚಿಂತಿತರಾಗಿದ್ದರು. ವಿರೂಪಾಕ್ಷ ಸ್ವಾಮಿಯವರು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ ನೀನು ಇದ್ದ ಸ್ಥಳದಲ್ಲಿ ನಾವು ಪ್ರತ್ಯಕ್ಷ ವಾಗುತ್ತವೆ. ಎಂದು ಅಪ್ಪಣೆ ಕೊಡಲಾಗಿ ಮರುದಿನ ಜಟಾಮುಕುಟ ವೇಷದಲ್ಲಿ

ಸ್ವಾಮಿ ಪ್ರತ್ಯಕ್ಷವಾಗಲಾಗಿ ಆ ಕ್ಷಣಕ್ಕೆ ಸ್ವಾಮಿಯವರಿಗೆ ೩ ಲಾಮಯ ದೇವಸ್ಥಾನ ಕಟ್ಟಿಸಿ 'ಪ್ರಸನ್ನ ವಿರೂಪಾಕ್ಷಪುರ' ಎಂಬ ಗ್ರಾಮವನ್ನು ನಿರ್ಮಾಣ ಮಾಡಿದರು.

- - - - -

3.2.2 ಚಾರಿತ್ರಿಕ ಘಟನಾ ಪ್ರಧಾನ ಸ್ಥಳನಾಮಗಳು:

ಚರಿತ್ರೆಯ ಘಟನೆಗಳು ಪೌರಾಣಿಕ ಘಟನೆಗಳಂತೆ ಕಲ್ಪಿತವಾಗಿರದೆ ಮತ್ತು ಕಲ್ಪಿತ ಕಥೆಗಳನ್ನು ಆಧರಿಸದೆ ವಾಸ್ತವವಾಗಿರುತ್ತವೆ. ಚರಿತ್ರೆಯಲ್ಲಿಯೂ ಸಹಿತ ಕಲ್ಪಿತ ಘಟನೆಗಳನ್ನಾಧರಿಸಿ ಸ್ಥಳ ನಾಮ ಹುಟ್ಟಿಕೊಂಡ ಬಗೆಯನ್ನು ಮೇಲಿನ ಕೆಲ ಸ್ಥಳ ನಾಮಗಳು ಹೇಳುತ್ತವೆ. ಆದರೆ ಈ ಮುಂದಿನ ಕೆಲ ಚರಿತ್ರೆಯ ಘಟನೆಗಳು ಸ್ಥಳನಾಮಗಳಾಗಿ ಅಂಟಿಕೊಂಡುದು ಕುತೂಹಲಕಾರಿ ಮತ್ತು ಇತಿಹಾಸವನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯಕಾರಿಯಾದವುಗಳಾಗಿವೆ.

ಆನೆಕನ್ನಂಬಾಡಿ ಕೈಫಿಯತ್ತಿನ 'ಆನೆಕನ್ನಂಬಾಡಿ' ನಾಮವು ಹಿಂದೆ ದೇವಪ್ಪ ದಣ್ಣಾಯಕರು ವಿಜಯನಗರದ ಅರಮನೆಯಲ್ಲಿ ಕರಣಿಕರ ಮನೆಗೆ ಹೊರಟರು. ಅವರು ಅಲ್ಲಿಗೆ ಅರ್ಧ ರಾತ್ರಿಯಲ್ಲಿ ತಲುಪಿದ್ದರಿಂದ ಬೊಕ್ಕಸದ ಗೊಲ್ಲರು ರಾಜ ಬೊಕ್ಕಸದ ಹಣವನ್ನು ಕದ್ದು ತೆಗೆದುಕೊಂಡು ಹೋಗುತ್ತಿರುವುದನ್ನು ಕಂಡರು. ಕಳ್ಳರು ದಣ್ಣಾಯಕರನ್ನು ಕಂಡು ಭಯಗೊಂಡು ಹಣವನ್ನು ಅರಮನೆಯ ಬಾವಿಯಲ್ಲಿ ಹಾಕಿದರು. ದಣ್ಣಾಯಕರು ಆ ತಿಥಿ, ವಾರ, ಹೊತ್ತಿಗೆ ಬರೆದಿಟ್ಟುಕೊಂಡರು. ಕೆಲವು ದಿವಸಗಳ ನಂತರ ರಾಯರು ಬೊಕ್ಕಸದ ಆದಾಯ ವೆಚ್ಚ ಕಡಿಮೆ ಆದದ್ದರ ಕಾರಣ ಕರಣಿಕರ ಮೇಲೆ ಸಿಟ್ಟುಗೊಂಡರು. ದಣ್ಣಾಯಕರಿಗೆ ಕರಣಿಕರ ಚಿಂತೆ ಅರ್ಥವಾಗಿ ದಣ್ಣಾಯಕರು ಅರಮನೆಗೆ ಬಂದು ತಾವು ಬರೆದ ಹೊತ್ತಿಗೆಯನ್ನು ತೋರಿಸಿ ಬಾವಿಯನ್ನು ಶೋಧಿಸಲಾಗಿ ಹಣ ಸಿಕ್ಕು ಹಣದ ಲೆಕ್ಕಕ್ಕೆ ಸರಿ ಹೊಂದಿ ದೊರೆಗಳಿಗೆ ದಯೆ ಬಂದು ದಣ್ಣಾಯಕರಿಗೆ 'ಏನು ಬೇಕು? ಎಂದು ಕೇಳಿದಲ್ಲಿ ದಣ್ಣಾಯಕರು "ಹೇಮಾವತಿಗೆ ಕಟ್ಟೆ ಕಟ್ಟಿಸಿ..." ಪಟ್ಟಣವ ಹೊಸ ಸ್ಥಳದಲ್ಲಿ ಕಟ್ಟಬೇಕೆಂದು ಹೇಳಿದರು". ರಾಯರು ಕಳುಹಿಸಿದ ಆನೆಯು ಎಲ್ಲಿ ಮೂರು ಮುಕ್ಕಾಲುಗಳಿಗೆ ನಿಲ್ಲುತ್ತೋ ಯಾವ ದಿಕ್ಕಿಗೆ ಅಭಿಮುಖವಾಗಿ ನಿಲ್ಲುತ್ತೋ ಅಲ್ಲಿ ಪಟ್ಟಣ, ಅರಮನೆ ಕಟ್ಟಿಸಬೇಕೆಂದು ಅಜ್ಞಾಪಿಸಲಾಗಿ ಹಾಗೆ ನಿಂತ ಸ್ಥಳದಲ್ಲಿ ಆನೆಕನ್ನಂಬಾಡಿ ಎಂಬ ನಾಮಧೇಯದಲ್ಲಿ ಪಟ್ಟಣ ಕ ಕಟ್ಟಿಸಿದರು.

ಕೈಫಿಯತ್ತು ತಾಲೂಕು ಅಜಂಪುರದ 'ಶಿವಮ್ಮಗೊಂಡನಹಳ್ಳಿ' ಇನ್ನೊಂದು ಚಾರಿತ್ರಿಕ ಘಟನೆಯನ್ನು ನಿರೂಪಿಸುತ್ತದೆ. ಶಿವಮ್ಮಗೊಂಡನಹಳ್ಳಿಯಲ್ಲಿ ವೀರ ಬಲ್ಲಾಳ ರಾಯರು ಕೊಣಬಗೊಂಡ ಗೌಡನಿಗೆ ಜಮೀನನ್ನು ಕೊಟ್ಟಿದ್ದನು. ಮನೆಯನ್ನು ಕಟ್ಟಿಕೊಂಡು ಅಲ್ಲಿ ವಾಸವಾಗಿರಲಾಗಿ ಅಲ್ಲಿಗೆ ಒಬ್ಬ ಫಕೀರನು ಬಂದು ಕಾಸಿ ಯಾತ್ರೆಗೆ ಹೋಗಿ . . ಬರುತ್ತೇನೆಂದು ಹೋಗುವ ಪೂರ್ವದಲ್ಲಿ ಸಿದ್ಧರಸದ ಭರಣಿಯನ್ನು ಜೋಳಿಗೆಯಲ್ಲಿ ಹಾಕಿ ಯಾತ್ರೆ ಮುಗಿದ ತಕ್ಷಣ ಬಂದು ತೆಗೆದುಕೊಂಡು ಹೋಗುವೆ ಎಂದು ಕೊಟ್ಟನು. ಈ ಗೌಡನ ಮಗಳು ಒಲೆಯ ಮೇಲೆ ನೆಲುವಿನಲ್ಲಿ ಇಟ್ಟಿರಲು ಅದು ಬಿಸಿಗೊಂಡು ಒಲೆಯ ಕಾವಲಿಯಲ್ಲಿ ಬೀಳಲು ಅದು ಚಿನ್ನದ ಕಾವಲಿಯಾಯಿತು. ಆ ಸಿದ್ಧ ರಸದಿಂದ ಅನೇಕ ಸುವರ್ಣ ಮಾಡಿಕೊಂಡು ದೊರೆ ಕೊಟ್ಟಂಥ

ಭೂಮಿಯಲ್ಲಿ ಅನೇಕ ಬಂಗಾರ ಸಿಕ್ಕಿತು. ಇದನ್ನು ದೊರೆಗಳಿಗೆ ತಿಳಿಸಲಾಗಿ ಅವರು "ನಿನಗೆ ಪುಂಬಳಿಯಾಗಿ ಕೊಟ್ಟಂತಹ ಭೂಮಿಯಲ್ಲಿ ನಿನ್ನ ಅದೃಷ್ಟದಿಂದ ನಿನಗೆ ಚಿನ್ನ ಸಿಕ್ಕಿದೆ..." ನಿನ್ನ ಹೆಸರಿನಿಂದ ಒಂದು ಪಟ್ಟಣವನ್ನು ಕಟ್ಟಿಸು" ಎಂಬುದಾಗಿ ಅಪ್ಪಣೆ ಕೊಟ್ಟುದರಿಂದ ತಿಮ್ಮನಗೌಡನಹಳ್ಳಿ ಎಂಬ ಗ್ರಾಮ ಹಾಕಿಸಿದನು. ರಾಜನು ಕೋಣಬ ಗೌಡನಿಗೆ ಈ ನೀತಿಯನ್ನು ಹೇಳಿದರಿಂದ ತಿಮ್ಮಗೌಡನ ಹಳ್ಳಿಗೆ ಪ್ರತಿನಾಮ 'ರಾಜನೀತಿ ಪಟ್ಟಣ'ವೆಂದೂ ಖ್ಯಾತಿಯಾಯಿತು. ಅದಕ್ಕೆ ಇನ್ನೊಂದು ಹೆಸರು 'ಕೋಣಬಗೌಡನ ಪಟ್ಟಣ'ವೆಂದೂ ಇದೆ.

ಈ ಮೇಲಿನ ಕಥೆಯ ಮುಂದುವರೆದ ರೂಪವನ್ನು ಇದೇ ಕೈಫಿಯತ್ತಿನ 'ಆಸಂದಿ' ನಾಮದ ಘಟನೆಯಲ್ಲಿ ಕಾಣುತ್ತೇವೆ. ಸಿದ್ಧರಸವನ್ನು 'ಕೊಟ್ಟ ಫಕೀರನು ಯಾತ್ರೆ ಮುಗಿಸಿ ಬಂದ ಕೋಣಬಗೌಡನನ್ನು ಕೇಳಲಾಗಿ ಜೋಳಿಗೆಯಲ್ಲಿ ಸಿದ್ಧರಸವಿಲ್ಲದುದನ್ನು ಕಂಡು ಕೋಪಗೊಂಡು ಕೋಣಗೌಡನ ಮನೆಗೆ ಮಾರಿ ಹೊಕ್ಕು ನಾಶವಾಗಲಿ ಎಂದು ಶಾಪ ಕೊಟ್ಟನು. ಒಂದು ದಿನ ಇದನ್ನು ಪರಿಹರಿಸಲಕೊಳ್ಳಲು ಮಾರಿಯನ್ನು ಕರೆ ತರಲು ತಳವಾರನನ್ನು ಕಳುಹಿಸಿದನು. ಮಾರಿಯಲ್ಲಿ ತಳವಾರನು ತಾನು ಬಂದ ಕಾರಣವನ್ನು ನಿವೇದಿಸಿಕೊಳ್ಳಲಾಗಿ ಮಾರಿಯು "ನಾನು ಬರುತ್ತೇನೆ ನೀನು ಮಾತ್ರ ತಿರುಗಿ ನೋಡದೆ ಮುಂದೆ ಹೋಗುತ್ತಿರು" ಎಂದು ವೃದ್ಧ ಸ್ತ್ರೀ ರೂಪದಲ್ಲಿ ಹೊರಟು ಬಂದಳು. ಮಾರ್ಗದಲ್ಲಿ ತಳವಾರನು ತಿರುಗಿ ನೋಡಿದಾಗ ಮಾರಿ ಕೋಪಗೊಂಡು ತಿಮ್ಮಗೌಡನ ಹಳ್ಳಿ ಹೊಕ್ಕು ಅಗ್ನಿಯಾಗಿ ದಹಿಸಿದಳು. ಪಟ್ಟಣದ ಪಶ್ಚಿಮ ಬೀದಿಯಲ್ಲಿ ರಂಗನಾಥ ದೇವರು ಇದ್ದುದರಿಂದ ಗುಡಿ ಸಂದು ಮಾತ್ರ ಸುಡದೇ ಉಳಿಯಿತು. ಆ ಭಾಗವನ್ನು 'ಆಸಂದಿ' ಎಂಬ ಹೆಸರಿನಿಂದ ಕರೆಯುತ್ತಾರೆ.

ಇದೇ ಕೈಫಿಯತ್ತಿನಲ್ಲಿ ನಿರೂಪಿಸಿರುವಂತೆ ಹರಿಹರ ರಾಯನ ನಂತರ ಬುಕ್ಕರಾಯನು ಅಧಿಕಾರಕ್ಕೆ ಬಂದನು. ಅರಗಟದ ಗ್ರಾಮವನ್ನು ದೊಡ್ಡದಾಗಿ ಕಟ್ಟಿಸಿ 'ಬುಕ್ಕಾಬ್ಧಿ(ಬುಕ್ಕಾಂಬುಧಿ) ಎಂಬ ಗ್ರಾಮವನ್ನು ನಿರ್ಮಿಸಿದನು.

ನರಸಿಂಗರಾಯರ ಕಾಲದಲ್ಲಿ ಭೂಪತಿ ರಾಮರಾಯರು ಶಿವನೇರಿ ಗ್ರಾಮವನ್ನು ದೊಡ್ಡದಾಗಿ ಕಟ್ಟಿಸಿದನು. ನರಸಿಂಗರಾಯರು ಕಣಿವೆಯುಳಿದು ಬಂದು ತಮ್ಮ ಎರಡು ಪಾದವನ್ನು ಶಿಲೆಯಲ್ಲಿ ಕಡಿಸಿ ಇಟ್ಟು ಹೋದುದರಿಂದ 'ರಾಯರ ಪಾದ' ಕಣಿವೆ ಎಂದು ಕರೆಸಿಕೊಳ್ಳುತ್ತದೆ.

ಸಾಗರದ ಕೈಫಿಯತ್ತಿನ 'ಯಾದವ ಮುರಾರಿ ಕೋಟೆ ಕೋಲಾಹಲ' ವೆಂದು ನಾಮ ಪಡೆಯಲು ಕಲ್ಪಿತ ಅಂಶವೊಂದು ಕಾರಣವಾಗಿದೆ. ಯಾದವ ಮುರಾರಿಯವರು ಗದ್ದೆಯನ್ನು ಉಳುತ್ತಾ ಇದ್ದ ಸಮಯದಲ್ಲಿ ಧನದ ಕೊಪ್ಪರಿಗೆ ಸಿಕ್ಕಿತು. ಧನಲಕ್ಷ್ಮಿ ಮುರಾರಿ ಮೇಲೆ ಆವೇಶ ಬಂದು ನರಬಲಿ ಕೊಟ್ಟರೆ ಬರುತ್ತಾ ಇದ್ದೇವೆ ಎಂದು ಆಜ್ಞಾಪಿಸಿದಳು ಅದೇ ವೇಳೆಗೆ ನಡೆದುಕೊಂಡಲ್ಲಿ ಧನದ ಕೊಪ್ಪರಿಗೆ ಸ್ವಾಧೀನವಾಯಿತು. ಅನಂತರದಲ್ಲಿ ಅವನು ಯಾದವ ಮುರಾರಿ ಕೋಟೆ ಕೋಲಾಹಲ ವೆಂದು ಖ್ಯಾತಿಯಾಯಿತು.

ಹಾನಳಪುರದಲ್ಲಿ ವೀರಬಲ್ಲಾಳ ರಾಯನು ರಾಜ್ಯವಾಳುತ್ತಿದ್ದಲ್ಲಿ ಅಲ್ಲಿರುವ ಮಹಾದೀಕ್ಷಿತನು 6 ಜನ ಬ್ರಾಹ್ಮಣರನ್ನು ಹೊಯ್ಸಳ ದೇಶದಿಂದ ಕರೆದು ತಂದನು. ಅವರಿಗೆ ಉತ್ತರವನ್ನು ಕೊಡಲು ಸ್ಥಳವನ್ನು ನೋಡಲು ಅವರೊಡನೆ ಸವಾರಿಯಲ್ಲಿ ಹೋಗುವಾಗ ಮಾರ್ಗ ಮಧ್ಯದಲ್ಲಿ ಹುಲಿಯನ್ನು ಕಂಡು ಗುಂಡಿನಿಂದ ರಾಯರು ಹೊಡೆಯಲಾಗಿ ಹೊಟ್ಟೆಯಲ್ಲಿಯ ಮರಿಗಳೆಲ್ಲವೂ ಸತ್ತವು. ಈ ಪಾಪಕ್ಕೆ ಪರಿಹಾರವೇನೆಂದು ಬ್ರಾಹ್ಮಣರನ್ನು ಕೇಳಲು ಈಗ ನೀವು ಯಾವ ಗ್ರಾಮವನ್ನು ಉತ್ತಾರ ಬಿಡುತ್ತಿರೋ ಆ ಗ್ರಾಮಕ್ಕೆ ನಿಮ್ಮ ಹೆಸರಿನಿಂದ ದೊಡ್ಡ ಕೆರೆ ಕಟ್ಟಿಸಿ ಆ ಗ್ರಾಮದ ನಾಮಧ್ಯೇಯ 'ನೋಗಾನಿ' ಎಂತ ಹೆಸರಿಟ್ಟು ಬಿಟ್ಟುಕೊಟ್ಟರೆ ಆ ದೋಷ ಪರಿಹಾರವೆಂದ ಕಾರಣ ಅದೇ ನಾಮದ ಗ್ರಾಮ ನಿರ್ಮಾಣವಾಯಿತು ಎಂದು ನೋಗಾನಿ ಅಗ್ರಹಾರದ ಕೈಫಿಯತ್ತು – 1 ತಿಳಿಸುತ್ತದೆ.

ವೀರಬಲ್ಲಾಳ ರಾಯನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಘಟನೆಯ ಆಧಾರದ ಮೇಲೆ ಸ್ಥಳನಾಮವೊಂದು ನಿರ್ಮಾಣವಾದ ಬಗೆಯನ್ನು ಹೊಳೆಹೊನ್ನೂರು ಕೈಫಿಯತ್ತು – 1 ನಿರೂಪಿಸುವುದು. ಬಲ್ಲಾಳ ರಾಯರು ಕುಷ್ಠರೋಗ ಪರಿಹಾರಾರ್ಥ ಮೂರಾವರ್ತಿ ದೋರ ಸಮುದ್ರದ ನದಿಯಲ್ಲಿ ಸ್ನಾನ ಮಾಡಲಾಗಿ ಗುಣ ಕಂಡಿದುದರಿಂದ ಅಲ್ಲಿ ಕೋಟೆ ಕಟ್ಟಿಸಿ ಗ್ರಾಮ ನಿರ್ಮಾಣ ಮಾಡಿ ಬ್ರಾಹ್ಮಣರಿಗೆ ಕೊಟ್ಟನು. ಮುಂದೆ ಹತ್ತು ಸಾವಿರ ವರಹಾ ಧರ್ಮ ಮಾಡಿದುದರ ಫಲವಾಗಿ ರೋಗ ನಿಃಶೇಷವಾಯಿತು. ಆದಾಗ್ಯೂ ಈತನ ಹಣೆಯ ಮೇಲೆ ಒಂದು ಹೊನ್ನಿನಷ್ಟು ಚುಕ್ಕೆ ನಿಂತಿತು. ದೇವರು ಸ್ವಪ್ನದಲ್ಲಿ ಬಂದು ನಿನ್ನ ದೇಹವಿರುವತನಕ ಹೋಗಲ್ಲಿಕ್ಕಿಲ್ಲ ಎಂದಿತು. ಆ ಕುಷ್ಠವಿರುವ ಜಾಗಕ್ಕೆ ಚಿನ್ನ ಮಾಡಿಸಿ ಕಟ್ಟಿತು ಅಲ್ಲಿಂದ ಆ ಗ್ರಾಮಕ್ಕೆ 'ಹೊಳೆಹೊನ್ನೂರು' ಎಂಬ ಹೆಸರು ಬಂದಿತು.

ಅಜಿಲರ ಕೈಫಿಯತ್ತಿನ ಕಡದಕಲ್ಲು ಘಟ್ಟ ನಾಮವು ಐತಿಹಾಸಿಕ ಘಟನೆಯೊಂದನ್ನು ನಿರೂಪಿಸುವುದು: ವಂಗದೇಶದ ಗಂಗನಾಡನ್ನು ತಿಮ್ಮಣ್ಣ ಅಜಿಲರು ಆಳಿಕೊಂಡಿರುವ ಸಮಯದಲ್ಲಿ ಪರ ರಾಷ್ಟ್ರದ ಅರಸರುಗಳು ಗಂಗನಾಡನ್ನು ಮುತ್ತಿಕೊಂಡರು. ತಿಮ್ಮಣ್ಣ ಅಜಿಲರ ಜೀನೆ ಲಯ ವಾಗಲು ಎಲ್ಲರೂ ಅಲ್ಲಿಂದ ಪರುಶರಾಮ ಕ್ಷೇತ್ರಕ್ಕೆ ಹೋಗಬೇಕೆಂಬ ದಾರಿಯಲ್ಲಿ ಘಟ್ಟದ ಕೆಳಗೆ ಇಳಿಯಲು ಮಾರ್ಗವಿಲ್ಲದ್ದರಿಂದ ಘಟ್ಟ ಕಡಿದು ದಾರಿ ಮಾಡಿಕೊಂಡು ಈ ಘಟ್ಟಕ್ಕೆ 'ಕಡದಕಲ್ಲುಘಟ್ಟ' ಎಂದು ಕರೆಯುವರು.

ಕುಂದಾಪುರದ ಕೈಫಿಯತ್ತಿನ 'ಕುಶಾಲಪುರ' ನಾಮವು ನಾಮವೇ ತಿಳಿಸುವಂತೆ ಗಂಗಾಧರಯ್ಯನು ಕುಂದಾಪುರವನ್ನು ಆಳುತ್ತಿದ್ದ ಸಮಯದಲ್ಲಿ ದೊಡ್ಡ ನವಾಬರು ಇಲ್ಲಿಗೆ ಬಂದು ಇದ್ದ ಸಮಯದಲ್ಲಿ ಮನಸ್ಸಿಗೆ ಕುಶಾಲು ಅನಿಸಿದರಿಂದ ಕುಶಾಲಪುರ ಎಂಬ ಹೆಸರನ್ನಿಟ್ಟರು. ಇದೇ ಕೈಫಿಯತ್ತಿನ ಮಡಲೀ ಬಂದರ ನಾಮವು ಗುಂಗವಳ್ಳಿ ಒಳಗೆ ಮತ್ಸ್ಯಗಳು ಬಂದದ್ದರಿಂದ ಮಡಲೀ ಬಂದರ ಎಂಬ ಹೆಸರನ್ನಿಟ್ಟರು.

ಆದಿಗೋಕರ್ಣದ ದಕ್ಷಿಣ ಭಾಗಕ್ಕೆ ಶತಶೃಂಗ ಪರ್ವತ ದಕ್ಷಿಣ ನಿತಂಬದಲ್ಲಿ ಕಲ್ಲಿನ ಒಳಗೆ ನೀರಿನ ತೀರ್ಥವಿದೆ. ಬಲ್ಲಾಳ ರಾಯರು ಹೋಗಿ ಅಲ್ಲಿ ಪ್ರತಪಾದ ಕಾರಣ 'ಬಲ್ಲಾಳ ತೀರ್ಥ'ವೆಂಬ ಹೆಸರು ಬಂತು.

ಬಾರಕೂರು ಸಂಸ್ಥಾನದ ಕೈಫಿಯತ್ತಿನ 'ಬಾರಕೂರು ಅಳವೆಯು' ಸಹ್ಯಾದ್ರಿ ಪರ್ವತದಿಂದ ಹೊರಟ ಸೀತಾನದಿಯು ಪಶ್ಚಿಮ ಸಮುದ್ರವನ್ನು ಕೂಡುವ ಸ್ಥಳ ಅಯರೆಗೋಡಿ ಅಳವೆ ಎಂದು ಹುಟ್ಟಿದೆ. ಇದರ ಪ್ರಾಚೀನ ನಾಮ ಬಾರಕೂರು ಅಳವೆ ಎಂದು. ಇತ್ತೀಚಿನ ನಾಮ ಗೋವೆಯಿಂದ ಅಕ್ಕಿ ವ್ಯಾಪಾರಕ್ಕೆ ಬಂದ ತಂಡುಲಿಗರು ಹೆಸರಿಸಿದ 'ಅಂಗಾರಕಟ್ಟೆ ಅಳವೆ'ಯೆಂಬ ಹೆಸರಿನಿಂದಲೂ ಕರೆಯುತ್ತಿದ್ದಾರೆ.

ತಾಲೂಕು ಕಂಪಲಿ ಕೈಫಿಯತ್ತಿನ 'ಕುಮಾರ ರಾಮನ ಕುಪ್ಪಳು' ಕುಮಾರ ರಾಮನ ಬಗೆಗಿರುವ ಘಟನೆಯನ್ನು ನಿರೂಪಿಸುವುದು. ಕುಮಾರ ರಾಮನು ಪ್ರಸಿದ್ಧ ಯಣಿಗಿ ಇರುವಾಗ ಓರಂಗಲ್ಲ ಪ್ರತಾಪರುದ್ರನ ಮೇಲೆ ಯುದ್ಧ ಮಾಡಿ ಜಯ ಹೊಂದಿ ಸಕಲ ಬಿರುದಾವಳಿಗಳನ್ನು ತೆಗೆದುಕೊಂಡಿರುತ್ತಿರುವಾಗ ಈ ಸಮಾಚಾರವನ್ನು ಕೇಳಿದ ಉತ್ತರ ದೇಶದ ನೇಮಿಯರರು ತಮ್ಮ ಸಕಲ ಸೈನ್ಯದಿಂದ ಬಂದು ಕುಪ್ಪಳದಲ್ಲಿ ಇದ್ದ ಕುಮಾರ ರಾಮನ ಸಂಗಡ ಯುದ್ಧ ಮಾಡಿ ಜೈಸಿ ಅವನ ತಲೆಯನ್ನು ಕಡಿದು ತೆಗೆದುಕೊಂಡು ಹೋದರು. ಆದ್ದರಿಂದ ಆ ಕುಪ್ಪಳು ಕುಮಾರ ರಾಮನ ಕುಪ್ಪಳು ವೆಂಬ ವಾಡಿಕೆಯಾಯಿತು.

3.2.3 ಸಾಮಾಜಿಕ ಘಟನಾ ಪ್ರಧಾನ ಸ್ಥಳನಾಮಗಳು:

ಸಾಮಾಜಿಕರ ಸಾಮಾನ್ಯ ಘಟನೆಗಳು ಸಹಿತ ಸ್ಥಳ ನಾಮಗಳಾಗಿ ಮಾರ್ಪಡುವ ಬಗೆಯನ್ನು ಈ ಕೆಳಗಿನ ಸ್ಥಳನಾಮಗಳಲ್ಲಿ ಗುರುತಿಸಿ ಕೊಳ್ಳಬಹುದು:

ದೇವೇಗೌಡನ ಹಳ್ಳಿ ಕೈಫಿಯತ್ತಿನ 'ಪರಿದತ್ತಿ' ನಾಮವು ಪೂರ್ವದೇಶದಿಂದ ಬಂದ ಬೇಗರು ಪಂಡನದಿ ಕ್ಷೇತ್ರದ ದಂಡಕಾರಣ್ಯದ ಒಂದು ಹುತ್ತಿನ ಮರೆಯಲ್ಲಿ ವಾಸಮಾಡಿಕೊಂಡು ಇರುತ್ತಿದ್ದ ಸಮಯದಲ್ಲಿ ತಾವು ಗ್ರಾಮವನ್ನು ನಿರ್ಮಾಣ ಮಾಡಿಕೊಳ್ಳಲು ನಾಗಾ ಜೋಯಿಸರನ್ನು ಕೇಳಲಾಗಿ ಒಂದಾನೊಂದು ದಿವಸ ಅತ್ತಿ ಮರಕ್ಕೆ ತೊಟ್ಟಿಲು ಕಟ್ಟಿಕೊಂಡು ಇದ್ದ ಸಮಯದಲ್ಲಿ ಒಂದು ದೊಡ್ಡ ಸರ್ಪ ತೊಟ್ಟಿಲ ಮೇಲೆ ಹತ್ತಿ ಆ ಶಿಶುವಿಗೆ ಸೂರ್ಯ ಕಿರಣ ಉಪದ್ರವಿಲ್ಲದ ಹಾಗೆ ಸಂರಕ್ಷಣೆ ಮಾಡಿಕೊಂಡು ಇರುತ್ತಾ, ಇರುವ ಸ್ಥಳದಲ್ಲಿ ಗ್ರಾಮ ಕಟ್ಟಬೇಕೆಂದು ಹೇಳಿದಲ್ಲಿ ಹಾಗೆ ಮಾಡಿದುದರಿಂದ ದ್ರವ್ಯವೂ ಲಭಿಸಿದುದರಿಂದ ಗ್ರಾಮವನ್ನು ಕಟ್ಟಿ ಪರಿದತ್ತಿಯೆಂಬ ನಾಮಧೇಯದ ಗ್ರಾಮವನ್ನು ನಿರ್ಮಿಸಿದರು.

ಕೈಫಿಯತ್ತು, ಭಟ್ಟರಹಳ್ಳಿ, ತಾಲೂಕೆ ಬಳ್ಳಾರಿಯಿಂದ 'ಭಟ್ಟರಹಳ್ಳಿ' ನಾಮವು ಪೂರ್ವದಲ್ಲಿ ಕೊಮಾರ ರಾಮನೆಂಬ ಅರಸು ಭಟ್ಟರಿಗೆ ಉಂಬಳಿಯಾಗಿ ಕೊಟ್ಟದ್ದರಿಂದ ಆ ಹೆಸರು ಪಡೆಯಿತು.

ಹತ್ತಿಬೆಳಗಲ್ಲು ಕೈಫಿಯತ್ತಿನ 'ಚನ್ನಾಪುರ' ನಾಮವು ಉಡುವರೂಪಿ ರಂಗನಾಥ ನಾಮದ ಹಿನ್ನೆಲೆಯ ಒಂದು ಉಪ ಸ್ಥಳನಾಮವಾಗಿದೆ. ಉಡುವನ್ನು ಹರಿಹರ ರಾಯರು ಅಟ್ಟಿಸಿಕೊಂಡು ಹೋಗುತ್ತಿದ್ದರಿಂದ ಆ ಉಡವು ತೋರುತ್ತಿದ್ದ ಮಹಿಮೆಯ ಸ್ಥಳಗಳೆಲ್ಲವೂ ಸ್ಥಳನಾಮಗಳಾಗಿ ಪರಿವರ್ತನೆ ಹೊಂದಿದವು. ಹೋಗುತ್ತಿದ್ದ ಉಡವು ಚೆನ್ನಾಗಿ ನಿಂತು ಬೇಟೆಕಾರರನ್ನು ನೋಡಿದ್ದರಿಂದ ಚನ್ನಾಪುರ ಎಂಬ ಹೆಸರು ಬಂತು. ಅದರ ಮುಂದಿನ ನಾಮವು ತಗರೂರು ಎಂದು ಉಡವು ನಮ್ಮ ವಶವಾಗದೆಂದು ಬ್ಯಾಟೆ ಕಾರರು ತರ್ಕ ಮಾಡಿದ್ದಕ್ಕೆ ಆ ನಾಮ ಬರಲು ಕಾರಣವಾಯಿತು.

ಇದೇ ಕೈಫಿಯತ್ತಿನ 'ಹತ್ತಿಬೆಳಗಲ್ಲು' ನಾಮವು ಸಾಮಾಜಿಕ ವರ್ಗದಲ್ಲಿಯ ಒಂದು ಮೋಸಗಾರಿಕೆಯ ಘಟನೆಯು ಹೇಗೆ ಸ್ಥಳ ನಾಮವಾಗಿ ಪರಿವರ್ತನೆಯಾಗ ಬಲ್ಲದೆಂಬುದನ್ನು ತಿಳಿಸುತ್ತದೆ. ಹತ್ತಿ ವರ್ತಕನೊಬ್ಬ ವರ್ತಕರ ಕಡೆಯಿಂದ ಹತ್ತಿ ಮಾರುತ್ತೇನೆಂದು ಲಕ್ಷಾಂತರ ರೂಪಾಯಿ ಹಣವನ್ನು ಹಲವಾರು ವರ್ತಕರಿಂದ ಪಡೆದು ಬೆಳಗಲ್ಲು ಗುಡ್ಡ ತೋರಿಸಿ ಇಲ್ಲಿ ಸ್ಥಳದಲ್ಲು ಹತ್ತಿ ರಾಸಿ ಹಾಕಿಯದ್ದೇನೆ ಎಂದು ಹೇಳಿ, ಪರದೇಶಕ್ಕೆ ಹೊರಟು ಹೋದನು. ಹಣ ಕೊಟ್ಟ ವರ್ತಕರು ಈ ಸ್ಥಳಕ್ಕೆ ಬಂದು ನೋಡಲಾಗಿ ಹತ್ತಿ ಕಾಣದೆ ಬೆಳಗಲ್ಲು ಕಂಡು ಮೋಸ ಹೋದರು. ಅಂದಿನಿಂದ ಅದು ಹತ್ತಿಬೆಳಗಲ್ಲೆಂದು ಪ್ರಖ್ಯಾತಿಯಾಯಿತು.

3.3 ಸ್ಥಳ ಪ್ರಧಾನ ಸ್ಥಳ ನಾಮಗಳು:

ಘಟನೆ ಮತ್ತು ವ್ಯಕ್ತಿಯನ್ನು ಹಿನ್ನೆಲೆಯಾಗಿಸಿಕೊಂಡು ಸ್ಥಳವೇ ಪ್ರಧಾನವಾಗಿ ತೋರುವ ಅನೇಕ ಸ್ಥಳ ನಾಮಗಳು ನಮಗೆ ಸಿಗುತ್ತವೆ. ಅವುಗಳನ್ನು ನಾವು ಸ್ಥಳ ಪ್ರಧಾನ ಸ್ಥಳ ನಾಮಗಳೆಂದು ಗುರುತಿಸಿಕೊಳ್ಳಬಹುದು. ಘಟನೆ ಮತ್ತು ವ್ಯಕ್ತಿಗಳು ಅಲ್ಲಿ ಗೌಣವಾಗಿ ಸ್ಥಳವೇ ಮುಖ್ಯವಾಗುತ್ತದೆ. ಒಂದರ್ಥದಲ್ಲಿ ಆ ಸ್ಥಳದ ಮಹಿಮೆಯಿಂದಲೇ ಆ ಘಟನೆ ಜರುಗುವುದಕ್ಕೆ ಗಂಡುನೆಲ ವೆಂದು ಗುರ್ತಿಸಿಕೊಳ್ಳುವುದಕ್ಕೆ ಕಾರಣವಾಗಬಹುದು. ಅಲ್ಲದೆ ಪ್ರಕೃತಿ ಹಾ ಸಹಜ ವ್ಯಾಪಾರಕ್ಕೆ ವಿರುದ್ಧವಾಗಿ ಘಟನೆಗಳು ನಡೆದಲ್ಲಿ ಅಂಥವನ್ನು ಸಹಿತ ಗಂಡುನೆಲ ವೆಂದು ಗುರ್ತಿಸಿಕೊಳ್ಳಲಾಗುತ್ತದೆ.

3.3.1 ಪೌರಾಣಿಕ ಸ್ಥಳ ಪ್ರಧಾನ ಸ್ಥಳನಾಮಗಳು:

ಪೌರಾಣಿಕ ಸ್ಥಳ ಪ್ರಧಾನ ಸ್ಥಳನಾಮಗಳಲ್ಲಿ ದೇವತಾ ಮೂರ್ತಿಯು ಆ ಸ್ಥಳದಲ್ಲಿ ಸಿಗುವುದರಿಂದ, ಋಷಿ ಮುನಿಗಳು ಅಲ್ಲಿ ನೆಲೆಸುವುದರಿಂದ, ಪುರಾಣಗಳು ಕೆಲವು ಸ್ಥಳಗಳ ಮಹಾತ್ಮೆಯನ್ನು ಹೊಗಳುವುದರಿಂದ, ಕಲ್ಪಿತ ಮಹಾರಾಕ್ಷಸರು ಸ್ಥಳ ದಲ್ಲಿ ಉಪದ್ರವ ನೀಡಿದ ಪರಿಣಾಮವಾಗಿ ಇಂಥಹ ಪೌರಾಣಿಕ ಸ್ಥಳ ಪ್ರಧಾನ ಸ್ಥಳ ನಾಮಗಳು ಹುಟ್ಟಿಕೊಳ್ಳಬಹುದಾಗಿದೆ.

ಚಂದ್ರಗುತ್ತಿ ಮಠಕೆ ಸಲ್ಲುವ ಪ್ರದೇಶದಲ್ಲಿ ಉಡದಲಾ ಮುಖ್ಯ ಪ್ರಾಣ ದೇವರು ಸಿಕ್ಕಿದುದರಿಂದ ಮತ್ತು ಉಡವು ಒತ್ತಿದ್ದು ನಾಯಿ ಬೋಳಿ ಬಿದ್ದದ್ದರಿಂದ 'ಉಡುಗಣಿಯಂತಾ ನಾಮಧೇಯವಾಯಿತು.

ಪೂರ್ವದಲ್ಲಿ ವಿಷ್ಣುವರ್ಧನ ಬಲ್ಲಾಳ ರಾಜನು ಬಗ್ಗವಳ್ಳಿ ಎಂಬ ಗ್ರಾಮಕ್ಕೆ ಬಂದು ಇದ್ದಲ್ಲಿ ಆ ಸ್ಥಳವು ಮಹಾ ಅರಣ್ಯವಾಗಿ ಬೆಳೆದು ಇದ್ದಲ್ಲಿ ಅಲ್ಲಿ ನರಸಿಂಹ ವಿಗ್ರಹ ವೊಂದು ಸಿಗಲು, ಅದು ಅಲ್ಲಿ ಇರಲು ಕಾರಣವೇನೆಂದು ವಿಚಾರಿಸಲಾಗಿ ಈ ಸ್ಥಳವು ಭಾರ್ಗವ ಋಷಿಗಳ ಆಶ್ರಮ, ಅದು ಈ ಋಷಿಗಳ ದೇವತಾರ್ಚನೆ ಮೂರ್ತಿಯೆಂದು ತಿಳಿಸಲು ಇದು ದೊಡ್ಡ ಸ್ಥಳವೆಂದು ತಿಳಿದು 'ಭಾರ್ಗವಪುರಿ' ಎಂಬ ಹೆಸರಿನಲ್ಲಿ ಪುರವನ್ನು ನಿರ್ಮಿಸಿದರು (ಕೈಫಿಯತ್ತು, ತಾಲೂಕೆ ಅಜಂಪುರಿ).

ತಿರುಮಕೂಡಲ ಕೈಫಿಯತ್ತಿನ 'ರುದ್ರತೀರ್ಥ'ನಾಮವು ಶಿವಪುರಾಣವನ್ನು ಕುರಿತಂಥದು. ಪರಮೇಶ್ವರ ಸ್ವಾಮಿಯು ತಾಂಡವ ನೃತ್ಯ ಮಾಡುತ್ತಾ, ಬ್ರಹ್ಮ ಶಿರಸ್ಸನ್ನು ಛೇದಿಸುತ್ತಾ ಇರಲಾಗಿ ಸಾಕ್ಷಾತ ಬ್ರಹ್ಮ ದೇವರು ಸ್ವಾಮಿಯ ಕೈಯಾ ಹಿಡಿದ್ದರಿಂದ, ಬ್ರಹ್ಮ ಕಪಾಲ ಬಿಡುವುದಕ್ಕೋಸ್ಕರ ಮೂರು ಯುಗದಲ್ಲಿಯಿರುವ ತೀರ್ಥಗಳ ಸೇವೆಯನ್ನು ಮಾಡಿಕೊಂಡು ಬರುತ್ತಾ, ಇರಲಾಗಿ ಬ್ರಹ್ಮ ಹತ್ಯಾದಿ ವಿಮೋಚನೆಯು ತೀರ್ಥಗುಣ ಉಂಟುಮಾಡಿದ್ದರಿಂದ ಕಾಶಿಕ್ಷೇತ್ರವನ್ನು ರುದ್ರತೀರ್ಥ ವೆಂದು ಕರೆದರು.

ಬಿಳ್ಳದ ಕೆರೋಟಿ ಕೈಫಿಯತ್ತಿನ 'ಕಮಲಾಚಲ' ಸ್ಥಳ ನಾಮವು ಪ್ರಾಕೃತಿಕ ಮೂಲ ಪಡೆದು ಪೌರಾಣಿಕವಾಗಿ ಆರೋಪಿಸಲ್ಪಟ್ಟು ಹುಟ್ಟಿದ ಸ್ಥಳನಾಮವಾಗಿದೆ. ಅಗಸ್ತ್ಯ ಮುನೀಶ್ವರರು ಋಷಿಗಳ ಸಮೂಹವನ್ನು ಈ ಪರ್ವತಕ್ಕೆ ಕಮಲಾಚಲ ವೆಂಬ ಹೆಸರು ಬಂದ ನಿಮಿತ್ತವೇನು? ಎಂದು ಪ್ರಶ್ನೆಯನ್ನು ಮಾಡಲಾಗಿ, ಈ ಪರ್ವತಕ್ಕೆ ಕಮಲಾಕಾರವಾದ ಅಷ್ಟದಳ ಉಂಟಾದ ಕಾರಣ ಕಮಲಾಚಲವೆಂಬ ಹೆಸರು ಪ್ರಸಿದ್ಧವಾಯಿತು. ಆ ಅಷ್ಟದಳಕ್ಕೆ ವಿವರವೇನು ಎಂದರೆ ಪೂರ್ವ ದಿಗ್ಭಾಗದಲ್ಲಿ ತ್ರ್ಯಂಬಕಾದ್ರಿಯೆಂಬ ದಳ, ಶೇಷಾದ್ರಿದಳ, ಆಗ್ನೇಯ ಭಾಗದಲ್ಲಿ ಕುಮುದಾದ್ರಿ ದಳ, ದಕ್ಷಿಣಭಾಗದಲ್ಲಿ ಶಂಬರಾದ್ರಿದಳ, ನೈರುತ್ಯಭಾಗದಲ್ಲಿ ಗರುಡಾದ್ರಿಯೆಂಬ ದಳ, ವರುಣ ಭಾಗದಲ್ಲಿ ನೀಲಾದ್ರಿಯೆಂಬ ದಳ, ವಾಯುವ್ಯಕ್ಕೆ ಫಲ್ಲವಾದ್ರಿ, ಕುಬೇರಕ್ಕೆ ಮಂಗಳಾದ್ರಿ, ಈಶಾನ್ಯಕ್ಕೆ ತುಂಗಾದ್ರಿ ಈ ಅಷ್ಟ ದಿಕ್ಕುಗಳಲ್ಲಿಯೂ ಅಷ್ಟ ದಳವು ಪ್ರಸಿದ್ಧವಾಗಿ ಇರುವುದರಿಂದ ಕಮಲಾಚಲವೆಂಬ ಹೆಸರು ಪ್ರಸಿದ್ಧವಾಯಿತು.

ಮಾಂಡವ್ಯ ಬ್ರಾಹ್ಮಣನೊಬ್ಬನಿಗೆ ಚಾಂಡಾಲ ಸ್ಪರ್ಶ ಮಾತ್ರದಿಂದಲೇ ಪಾಪಿಯಾಗಿ ಅದರ ಪರಿಹಾರಾರ್ಥವಾಗಿ ತುಂಗಾ ಮಧ್ಯದ ಗದ್ದೆಯಲ್ಲಿ ತಪಸ್ಸು ಮಾಡುತ್ತಾ, ಇದರಿಂದ 'ಮಾಂಡವ್ಯ ಆಶ್ರಮ ಅಂಥಾ ಖ್ಯಾತಿಯಾಯಿತು.

ಹಿರೇಮಗಳೂರು ಕೈಫಿಯತ್ತಿನ 'ಸಿದ್ಧಕ್ಷೇತ್ರ' ನಾಮವು ಸಹಜವಾಗಿ ಪೌರಾಣಿಕವೂ ಮತ್ತು ಸ್ಥಳ ಪ್ರಧಾನವೂ ಆಗಿದೆ. ಪೂರ್ವ ತ್ರೇತಾ ಯುಗದಲ್ಲಿ ಸುಧರ್ಮಕ ಎಂಬ ಬ್ರಾಹ್ಮಣನು ಸಂತಾನಯಿಲ್ಲದೆ ತಪಸ್ಸು ಮಾಡಿದ್ದರಿಂದ ಸ್ವಾಮಿಯು ಸ್ವಪ್ನದಲ್ಲಿ ಭಾರ್ಗವಪುರಿಯಲ್ಲಿ ತಪಸ್ಸುಮಾಡು ಎಂದು ಹೇಳಿದ್ದರಿಂದ ಅಲ್ಲಿ ತಪಸ್ಸು ಮಾಡಲು 9 ಮಂದಿ ಮಕ್ಕಳು ಹುಟ್ಟಿದ್ದರಿಂದ ಅದು ಸಿದ್ಧಕ್ಷೇತ್ರವೆಂದೂ ಅವರು ನವ ಸಿದ್ಧರೆಂದೂ ಹೆಸರಾದರು.

ಭಾರ್ಗವ ಋಷೀಶ್ವರರು ಪಿಲಾರಕಾನ ಎಂಬಬನದಲ್ಲಿ ತಪೋನಿಷ್ಠರಾಗಿ ಇರುವಾಗ್ಗೆ ಸಮುದ್ರ ತೀರದಲ್ಲಿ ಪೂರ್ವ ಸ್ನಾನ ಮಾಡಿ ಆ ಸರಸ್ಸಿನಲ್ಲೂ ಬೀಜವ್ಯಾಪ ಇಲ್ಲದೆ ಕಮಲೋತ್ಪತ್ತಿ ಆಗುವಂತೆ ವರವನ್ನು ಕೊಟ್ಟು, 'ಕಮಲಾ ಸರೋವರ' ಎಂಥಾ ನಾಮಧೇಯವನ್ನಿಟ್ಟರು ಎಂದು ಕಾಪಿನ ದೇವಸ್ಥಾನದ ಕೈಫಿಯತ್ತು ಹೇಳುತ್ತದೆ.

ಕಾಳಿಕೋಡು ಪರಗಣಿ (ಕೈಫಿಯತ್ತಿನ)ಯ ಕಣ್ವ (ಕಣ್ವ)ಋಷೀಶ್ವರರ ಆಶ್ರಮವಾಗಿದ್ದರಿಂದ ಕಾಣ್ವಕೋಡುಯೆಂತ ಹೆಸರುಬತ್ತು. ಪೌರಾಣಿಕ ವ್ಯಕ್ತಿಯ ನಾಮವನ್ನು ಪ್ರಧಾನವಾಗಿಸಿಕೊಂಡು ಸ್ಥಳವನ್ನು ಪ್ರತಿಬಿಂಬಿಸುವುದು.

ಗೋಕರ್ಣದ ಕ್ಷೇತ್ರಮೂರ್ತಿನ 'ಮಹಾಬಲೇಶ್ವರ' ನಾಮವು ಈಗಾಗಲೇ ನಾಡಿನಾದ್ಯಂತ ಜನಜನಿತವಾಗಿರುವ ಪೌರಾಣಿಕ ಘಟನೆಯನ್ನು ನೇರಾಗನಾಗಿ ನಿರೂಪಿಸುವುದು. ಈಶ್ವರನ ವರಪ್ರಸಾದದಿಂದ ಪ್ರಾಣಲಿಂಗವನ್ನು ಪಡೆದುಕೊಂಡು ಹೋರಟ ರಾವಣನ ಸಂಧ್ಯಾವಂದನೆ ಮಾಡುವ ಮುಂಚಿತ್ತ ಪ್ರಾಣ ಲಿಂಗವನ್ನು ಕೆಳಗೆ ಇಡದೆ ಬೇರೆಯವರ ಕೈಯಲ್ಲಿ ಕೊಡಬೇಕಿತ್ತು. ಅಲ್ಲಿಯೇ ಇದ್ದ ವಿಘ್ನೇಶ್ವರನಿಗೆ ಕೊಡಲಾಗಿ ಆತನು ಅದನ್ನು ಬಹಳ ಹೊತ್ತು ಹಿಡಿದುಕೊಂಡು ಸಾಕಾಗಿ ರಾವಣನನ್ನು ಕೂಗಲು ಅವನು ಬರದೇ ಹೋದದ್ದರಿಂದ ಆ ಲಿಂಗವನ್ನು ಅಲ್ಲಿಯೇ ಇಟ್ಟನು. ರಾವಣಾಸುರ ಬಂದು ಲಿಂಗವನ್ನು ಹಿಡಿದು ಕೀಳಿದರೂ ಬರಲಿಲ್ಲ. ಆನಂತರ ಸಮಸ್ತ ದೇವತೆಗಳು ಬಂದು ಮಹಾಬಲ ಎಂಬ ಹೆಸರನ್ನಿಟ್ಟರು.

ಧರ್ಮಸ್ಥಳದ ಕ್ಷೇತ್ರಮೂರ್ತಿನ 'ಧರ್ಮಸ್ಥಳ' ನಾಮವು ಮಹಾತ್ಮೆಯನ್ನು ಒಬ್ಬರ ಪೌರಾಣಿಕ ಘಟನೆಗಳ ಹಿನ್ನೆಲೆಯಲ್ಲಿ ಹೇಳುತ್ತದೆ. ಧರ್ಮಸ್ಥಳದಲ್ಲಿ ಜೈನ ಜಾತಿ ಅಮ್ಮಾದೇವಿ ಬಲ್ಲಾಳರುತಿಂಬುವರಿಗೆ ಪ್ರಸನ್ನ ಆಗಿ(ಸ್ವಪ್ನದಲ್ಲಿ) ನಾವುಂಬದೆ ನೆಲ್ಯಾಡಿ ಬೀಡಿನಲ್ಲಿ ವಾಸವಾಗಿರುತ್ತೇವೆ. ಇದೇ ಸ್ಥಳದಲ್ಲಿ (ಮನಶ್ಯನ) ಇರಿಸಿ ದೀಪಾ ಹಚ್ಚಿ ಪೂಜೆ ಮಾಡಿಕೊಂಡು ನೀವು ಬಾಹುದು... ಎಂಬ ಅಪ್ಪಣೆಯ ಮೇರೆಗೆ ಪೂಜೆ ಮಾಡುತ್ತಾ ಕಾಲದಲ್ಲಿ ಉಡುಪಿಯ ವಾದಿರಾಜ ಸ್ವಾಮಿಯವರು ಇದೇ ಸ್ಥಳದಲ್ಲಿ ನಾಳಿನ ದಿವಸ ನಿಂತು ಭಿಕ್ಷಾ ತೆಗೆದುಕೊಂಡು ಹೋಗಬೇಕೆಂದು ಹೇಳಿದಲ್ಲಿ ಸ್ವಪ್ನದ ಪ್ರಕಾರ ಅಮ್ಮನವರು ಮಂಜುನಾಥ ದೇವರ ಲಿಂಗವನ್ನು ಪ್ರತಿಷ್ಠೆ ಮಾಡಿದರು. ಮುಂದೆ ವಾದಿರಾಜರು ಅಲ್ಲಿಯೇ ಬಂದು ಭಿಕ್ಷೆ ಸ್ವೀಕರಿಸಿದರು..... ಆ ಸ್ಥಳದಲ್ಲಿ ಧರ್ಮ ಸಾಂಗವಾಗಿ ನಡೆಸಿಕೊಂಡು ಬರತಕ್ಕ ಬಗ್ಗೆ ನಾಲ್ಕು ಜನ ಬುದ್ಧಿವಂತರಿಗೆ ಗೊತ್ತು ಮಾಡಿ ಇವುಗಳು ಅವರ ಮುಖದಲ್ಲಿ ನಡೆಸಿಕೊಂಡು ಬರುವುದು ಎಂಬ ದರುಶನದ ಅಪ್ಪಣೆಯ ಮೇರೆಗೆ ಪಾರಂಪರ್ಯ ನಡೆದು ಬರುತ್ತದೆ. ಈ ಧರ್ಮದಿಂದಲೇ ಅದು ಧರ್ಮಸ್ಥಳವಾಯಿತು.

ಬಾರಕೂರು ಸಂಸ್ಥಾನ ಕ್ಷೇತ್ರಮೂರ್ತಿನ 'ರಸದ ಬಾವಿ' ಮುಕುಂದತೀರ್ಥ' ಸ್ಥಳ ನಾಮಗಳು ಪೌರಾಣಿಕ ಸ್ಥಳ ಪ್ರಧಾನ ಸ್ಥಳನಾಮಗಳಾಗಿವೆ. ಬಾರಕೂರ ಪಂಚಲಿಂಗೇಶ್ವರ ದೇವರ ಪಳಪ್ರಕಾರದ ಒಳಗೆ ಉತ್ತರ ದಿಕ್ಕಿನಲ್ಲಿ ಮಾರ್ಕಾಂಡೇಯರು ಕುಳಿತು ತಪಸ್ಸು ಮಾಡಿದ ಸ್ಥಳದಲ್ಲಿ ಧಾತ್ರಿ ವೃಕ್ಷ ಇದೆ ಇಲ್ಲಿ ಮಾರ್ಕಾಂಡೇಯರು ಶಿವಲಿಂಗ ಪ್ರತಿಷ್ಠೆ ಮಾಡಿದರು. ಇದರ ಆಗ್ನೇಯ ದಿಕ್ಕಿಗೆ ಸಣ್ಣ ಗುಹೆ ಇದೆ. ಅದರಲ್ಲಿ ಒಂದು ಬಾವಿ ಇದೆ ಅದು ರಸದಭಾವಿಯಂತೆ. ಈ ಬಾವಿಯೊಳಗೆ ಕಬ್ಬಿಣವನ್ನು ಹಾಕಿದಲ್ಲಿ ಚಿನ್ನವಾಗುತ್ತದೆ.

ಮುಕುಂದನೆಂಬ ಋಷಿಯು ಬಾರಕೂರು ಸ್ಥಳದಲ್ಲಿ ಆಶ್ರಮವನ್ನು ಕಟ್ಟಿಕೊಂಡಿರುವಲ್ಲಿ ಅಲ್ಲಿರುವ ಲಿಂಗದ ಮೇಲೆ ಆಕಳೊಂದು ಕ್ಷೀರವನ್ನು ಸುರಿಸುತ್ತಿರುವುದನ್ನು ಕಂಡುಕೊಂಡು ಇಲ್ಲಿ ಯಾವಾಗಲೂ ಜಲ ಸಮೃದ್ಧಿಯಿರಬೇಕೆಂದು ತಟಾಕವನ್ನು ಮುಕುಂದರು ಕಟ್ಟಿದರು. ಅದಕ್ಕಾಗಿ ಅದನ್ನು ಮುಕುಂದತೀರ್ಥ ಎನ್ನುವರು.

ಮೃಗವಧೆ ಮಾಗಣಿ ಕೈಫಿಯತ್ತಿನ 'ಮೃಗ' ನಾಮವು ಮೃಗರೂಪಾಯೆಂಬ ಹೆಸರಿನೊಂದಿಗೆ ಬಂದಹಾಗಿದೆ. ಹಿಂದೆ ಕೃತಯುಗದಲ್ಲಿ ಮೇಘನಾಥನೆಂಬ ರಾಕ್ಷಸನ ಭಯಕ್ಕೋಸ್ಕರ ಪಶ್ಚಿಮ ಸಮುದ್ರದ ಮಧ್ಯದ   ಘೋರಾರಣ್ಯವನ್ನು ನೋಡಿ ಅಲ್ಲಿ ಶಿಲಾಗುಹೆಗಳಲ್ಲಿ ವಾಸ ಮಾಡಿಕೊಂಡು ಇರುವಾಗ್ಗೆ ಅಲ್ಲಿ ಮೃಗಗಳು ಬಹಳ ಇದ್ದುದರಿಂದ ಆ ನಾಮ ಬಂತು.

ಹಿಂದೆ ಮಾಧವಭಟ್ಟರೆಂಬ ಬ್ರಾಹ್ಮಣರು ದಾರಿದ್ರ್ಯ ನಿವಾರಣೆಗಾಗಿ ತಪಸ್ಸು ಮಾಡಲು ಸ್ಥಳವನ್ನು ಹುಡುಕಿಕೊಂಡು ಬಂದಾಗ ಪಂಪಾಸರೋವರಕ್ಕೆ ಪಶ್ಚಿಮ ಭಾಗದಲ್ಲಿ ಕಮಲಾದೇವಿಯೆಂಬುವ ದುರ್ಗಾ ದೇವಸ್ಥಾನವನ್ನು ಕಂಡು ತಪಸ್ಸು ಮಾಡಿ ಸಿದ್ಧಿಯನ್ನು ಪಡೆದನು. ಅದಕ್ಕಾಗಿ ಆ ಸ್ಥಳವನ್ನು 'ಕಮಲಾಪುರ'ವೆಂಬ ನಾಮದಿಂದ ಕರೆಯುತ್ತಾರೆ.

3.3.2 <u>ಚಾರಿತ್ರಿಕ ಸ್ಥಳ ಪ್ರಧಾನ ಸ್ಥಳ ನಾಮಗಳು:</u>

ಚಾರಿತ್ರಿಕ ಸ್ಥಳ ಪ್ರಧಾನ ಸ್ಥಳ ನಾಮಗಳು ಇತಿಹಾಸವನ್ನು ಅರ್ಥವತ್ತಾಗಿ ಕಟ್ಟಿಕೊಡುವುದಕ್ಕೆ ಸಹಾಯಕವಾಗುತ್ತವೆ. ಇಂಥ ಸ್ಥಳನಾಮಗಳೇ ಕೈಫಿಯತ್ತುಗಳಲ್ಲಿ ಹೇರಳವಾಗಿ ಕಂಡುಬರುತ್ತವೆ. ಸುಮಾರು 40 ಇಂಥ ಸ್ಥಳನಾಮಗಳನ್ನು ನಾವು ಗುರುತಿಸಿಕೊಳ್ಳಬಹುದಾಗಿದೆ.

ಅರಿಕುಠಾರದ ಕೈಫಿಯತ್ತಿನ 'ಅರಿಕುಠಾರ'ದ ನಾಮವು ವಿಜಯನಗರದಿಂದ ದೊಡ್ಡ ವೀರಭದ್ರನಾಯಕ, ವೀರಭದ್ರನಾಯಕ ಮುಂತಾದ 50 ಜನರ ಗುಂಪು ಹೈಕೋಟೆಯಲ್ಲಿ ವಾಸಿಸುತ್ತಿರುವ ಸಂದರ್ಭದಲ್ಲಿ ಬೇಟೆಗಾಗಿ ಬಂದ ವೀರಭದ್ರನಾಯಕನಿಗೆ ಅದು ಗಂಡು ಭೂಮಿಯೆನಿಸಿದ್ದರಿಂದ ಮತ್ತು ಇಲ್ಲಿಗೆ ಬಂದ ವೈರಿಗಳನ್ನು ಸಂಹಾರ ಮಾಡುವಂತ ಸ್ಥಳ ಇದಾದ್ದರಿಂದ ಅರಿಕುಠಾರವೆಂದು ಕರೆದರು.

ಪ್ರಧಾನದಾಳಪ್ಪರು ಗೋವಿಂದ ರಾಯರು ಕೃಷ್ಣದೇವರಾಯರಿಗೆ ಧರ್ಮವಾಗಬೇಕೆಂದು ವಿದ್ಯಾರಣ್ಯ ಕ್ಷೇತ್ರದ ಮಾಗುರನ್ನು ಸ್ಥಳವನ್ನು ಕೊಟ್ಟರು. ಇಲ್ಲಿಯ ಅಗ್ರಹಾರವೊಂದು ಶಿಥಿಲವಾದಲ್ಲಿ ಕೃಷ್ಣದೇವರಾಯರು ಜೀರ್ಣೋದ್ಧಾರ ಮಾಡಿ 'ರಾಜಪುರಿ' ಯೆಂದು ಹೆಸರಿಟ್ಟರು ಎಂಬ ನಿರೂಪಣೆ ತಲಕಾಡು ಕೈಫಿಯತ್ತಿನಲ್ಲಿ ಬರುತ್ತದೆ.

ಮುಳುಬಾಗಲು ಸಾಸಿವೆ ಹಳ್ಳಿ ಸೀಮೆಯ ಕೈಫಿಯತ್ತಿನ 'ಗಂಗಾಸಮುದ್ರ' ನಾಮವು ಬಲ್ಲಾಳ ವಂಶ ವಿಕ್ರಮರಾಜನ ತಮ್ಮ ವೀರಪ್ರತಾಪರಾಯನು ಸ್ವರ್ಗಾವತಿ ಪಟ್ಟಣದ ಶೇಷ ಜನರು ತೃಷ್ಣೆಯಾಗಿ ಕೆರೆಯನ್ನು ಕಟ್ಟಿಸಿಕೊಡೆಂದು ಕೇಳಿದುದಕ್ಕಾಗಿ ಗಂಗಾ ಸಾಗರದ ಹೆಸರಲ್ಲಿ ಗಂಗಾ ಸಮುದ್ರವನ್ನು ನಿರ್ಮಿಸಿದನು.

ಬೆಟ್ಟದ ಕೋಟೆ ಕೈಫಿಯತ್ತಿನ 'ಯಲ್ಲಿ ಮೊಲದ ಕೋಟೆ' ನಾಮವು ಸ್ಪಷ್ಟವಾಗಿ ಸ್ಥಳ ಪ್ರಧಾನವಾಗಿದೆ. ಮತ್ತು ಚಾರಿತ್ರಿಕವಾಗಿದೆ. ಸದಾಶಿವರಾಯ ನಾಯಕರು ಸುತ್ತ ಮುತ್ತ ಇದ್ದ ಪಾಳೆಗಾರರನ್ನು ಮುರಿಯುವ ಪ್ರಯುಕ್ತ ಸವಾರಿಗೆ ಬಂದ ಕಾರಣ ಯಿಕ್ಕೇರಿ ಸ್ಥಳದಲ್ಲಿ ಅವನ ಸಂಗಡಿಗರು ಮೊಲದ ಮೇಲೆ ನಾಯಿ ಬಿಡ ಕಾರಣ ನಾಯಿಯನ ಮೊಲ ಬಂದು ಕಚ್ಚಿತು ಯೀ ವರ್ತಮಾನವನ್ನು ರಾಯ ಅರಿತು ಯಲ್ಲಿ ಮೊಲದ ಕೋಟೆಯನು ಕಟ್ಟಿಸಿದನು.

ಹೊದಿಗೆರೆ ಸೀಮೆ ಕೈಫಿಯತ್ತಿನ 'ಹೊದಿಗೆರೆ' ನಾಮವು ನಾಡಿಗ ಈಶ್ವರಯ್ಯನ ಮಕ್ಕಳಾದ ಮುಟ್ಟ ಮಲ್ಲಪ್ಪ ಮುಂತಾದವರು ಉಚ್ಚಂಗಿ ವೆಂಕಟೆ ಸಲ್ಲುವ ಕೆದಿಗೆರೆ ಗ್ರಾಮವು ನಮ್ಮ ಹಿರಿಯರು ಪಡೆದಂತ ಸ್ಥಳ ಅದನ್ನು ನಮಗೇ ಒಪ್ಪಿಸಿಕೊಡಿರೆಂದು ಕೆಂಗಪ್ಪ ನಾಯಕರಿಗೆ ಕೇಳಿಕೊಂಡಲ್ಲಿ ಗಸೆಬಿದ್ದಲು ಇದ್ದ ಸ್ಥಳವಾದ್ದರಿಂದ ಕೆದಿಗೆರೆ ಯೆಂದು ನಾಮವಿದ್ದ ಹಳ್ಳಿಗೆ ಹೊದಿಗೆರೆಯೆಂಬ ನಾಮವನ್ನಿಟ್ಟರು.

ಕುಂದಾಪುರ ಕೈಫಿಯತ್ತಿನ 'ಕುಂದಾಪುರ' ನಾಮವು ಉತ್ತರದ ಹೈದ್ಯ ದೇಶದಿಂದ ವಸುರಾಯನು ಸಂಚಾರಾರ್ಥವಾಗಿ ದಕ್ಷಿಣದ ಸಮಸ್ತ ತೀರ್ಥಕ್ಷೇತ್ರಗಳನ್ನು ನೋಡಿಕೊಂಡು ಬರುತ್ತಾ ಹ ವಸುಪುರ ಗ್ರಾಮ ನಿರ್ಮಿಸಿದರು. ಈತನಪ್ರಧಾನಿ ಕುಂದಿರಾಯರು ವಸುಪುರಕ್ಕೆ ಪಶ್ಚಿಮದಲ್ಲಿ ಗ್ರಾಮವನ್ನು ಕಟ್ಟಿಸಿ ಕುಂದೇಶ್ವರ ಲಿಂಗ ಪ್ರತಿಷ್ಠೆ ಮಾಡಿ ಕುಂದಾಪುರ ಗ್ರಾಮವನ್ನು ನಿರ್ಮಿಸಿದನು. ಈ ಕುಂದಾಪುರದ ಸಂಕಣ್ಣ ನಾಯಕರು ಸಮುದ್ರ ದಡದ ಆಳಿವೆಯ ಬಳಿಯಲ್ಲಿ ಪಂಚನದೀ ಸಂಗಮವಾಗುತ್ತಿದ್ದರಿಂದ (ಗಂಗಾವಳಿ) ಗಂಗುಳ್ಳಿ ಎಂಬ ಕೋಟೆಯನ್ನು ನಿರ್ಮಿಸಿದನು.

ಚೌಟ ಅರಸುಗಳ ಕೈಫಿಯತ್ತಿನ 'ಕಾಯರ ಮಂಜದ ಅರಮನೆ' ನಾಮವು ಬೊಂಡ್ಯದ ಬೆಟ್ಟಿನ ತಿಮ್ಮಪ್ಪ ಬಂಗಾಯೆಂಬುವನು ಪ್ರಬಲನಾಗಿದ್ದ ಈತನ ಮಾವ ಚನ್ನರಾಯ ಚೌಟರು ಜೊತೆಗೂಡಿ ಮತ್ತಿಗೆಯಲ್ಲು ಕಟ್ಟಿದ ಅರಮನೆಗೆ ಮನಹಾ ಬಂದು, ಯೀ ಅರಮನೆಗೆ ಕಾರನಕನ ಮರ ಕಡದ ಸ್ಥಳದ ಬಳಿಯಲ್ಲಿ ಕಟ್ಟಿದ ಕಾರಣ ಕಾಯರ ಮಂಜದ ಅರಮನೆಯೆಂತ ಹೆಸರುಂಟಾಯಿತು ಎಂದು ನಿರೂಪಿಸಲಾಗಿದೆ.

ಮುರದಾಳ ಕೈಫಿಯತ್ತಿನ 'ನೀರಜಿ' ನಾಮವು ಉತ್ತರ ದೇಶದ ಬಾಲಬಲ್ಲಾಳ ರಾಯನು ಮುರದಾಳ ಅರಣ್ಯಕ್ಕೆ ರಾಯ ಸರ್ಕಾರದಿಂದ ಪಟ್ಟ ಕಟ್ಟಿಸಿಕೊಂಡಿದ್ದನು. ಒಂದಾನೊಂದು ದಿವಸ ನೆರೆಯ ಅರಸುಗಳು ಈತನನ್ನು ಹೊಡೆದು ರಾಜ್ಯ ತೆಗೆದುಕೊಳ್ಳಬೇಕೆಂದು ಅಧಿಕಾರ ಗುತ್ತಿನವರನ್ನು ಬಲ್ಲಾಳಗೆ ಹೊಡೆಯಲು ಕಳುಹಿಸಲು ಆ ಸಮಯದಲ್ಲಿ ಬಲ್ಲಾಳ ಶಿವ ಪೂಜೆ ಮಾಡುತ್ತಿದ್ದನು. ಅವನನ್ನು ಕಾಪಾಡಲು ಪಲ್ಲದ ಪುರುಷು ಭೂತಾ ಕತ್ತಿ ತೆಗೆದುಕೊಂಡು ಹೋಗಿ ಸಂಹಾರ ಮಾಡಿತು ಗುತ್ತಿನವನ ತಲೆ ಹೊಡೆದು ಬೀಳುವಾಗ್ಯೆ ನೀರಜಿಯೆಂಬ ಸ್ಥಳ ನಿರ್ಮಾಣವಾಯಿತು.

ಯೆಳರೆ ಮಾಗಣೆ ಕೈಫಿಯತ್ತಿನ 'ಯೆಳು ಅರೆ' ನಾಮವು ಘಟ್ಟದ ಮೇಲಿನ ಮಾಂಡಿಗರು, ಘಟ್ಟದ ಕೆಳಗಿನ ಕೊರಗರು ಯೆಳರೆ ಯೆಂಬ ಜಾಗದಲ್ಲಿ ಅಂಪಾರು ಯೆಂಬ ಸ್ಥಳದಲ್ಲಿ ಯೆಳು ಅರೆ ಯೆಂಬ ಹೆಸರು ಹಾಕಿ ಆಳುತ್ತಾ ಬಂದರು. ಇದಕ್ಕೆ ಈ ಹೆಸರು ಬರಲು ಅದರ ಸುತ್ತ ಇರುವ ಅಂಪಾರು, ಕಾವರಾಲ, ಮುಡಿಬಾಗಿ, ಗುಡಿಬೆಟ್ಟು, ಹಳ್ಳನಾಡು, ಪಾಲುತ್ರಾರು, ಕಂಡೂರು ಯೆಂತ ಯೆಳುಗ್ರಾಮ ಕಾರಣ.

ಬಾರಕೂರು ಭೂತ ಪಾಂಡ್ಯರಾಯನ ಸಂತತಿಯಲ್ಲಿ ಹುಟ್ಟಿದ ಶಂಕರನಾರಾಯಣಭಟ್ಟನು ಬಗ್ವಾಲಿಯಲ್ಲಿ ಕೋಟೆ ಕಟ್ಟಿ ಲೋಕಾದಿತ್ಯ ರಾಯನ ಕಾಲದಿಂದಲೂ ಪ್ರತ್ಯೇಕವಾಗಿಯಿದ್ದ ಹಾರವ ನಾಡನ್ನು ಸೇರಿಸಿಕೊಂಡಿದ್ದರಿಂದ ಆ ನಾಮ ಬಂತೆಂದು 'ಹಾರನಾಡು' ಮಾಗಣೆ ಕೈಫಿಯತ್ತು ನಿರೂಪಿಸುವುದು.

ಹೊಸಂಗಡಿ ಮಾಗಣೆ ಕೈಫಿಯತ್ತಿನ 'ಹೊಸಂಗಡಿ' ನಾಮವು ಲೋಕಾದಿತ್ಯ ರಾಯನ ರಾಜ್ಯವನ್ನು ಮಾಡುತ್ತಿದ್ದ ಮಾಗಣೆಯು ಮುಖ್ಯತು ಆಗಿದ್ದುದರಿಂದ ಅದನ್ನು ಕಡದು ಅಂಗಡಿಪೇಟೆ ಮುಂತಾಗಿ ಕಟ್ಟಿದ್ದರಿಂದ ಹೊಸಂಗಡಿಯೆಂಬ ನಾಮ ಪೇಟೆ ಸ್ಥಳಕ್ಕೆ ಬಿತ್ತು.

ದರೋಜಿ ಕೈಫಿಯತ್ತಿನ ಈಗಿನ 'ದರೋದಿ' ನಾಮವು ಅದರ ಮೂಲರೂಪ ದರಿಯಾ ತಲಾಬುದಿಂದ ಬಂದಿದೆ. ಈ ಕೆರೆಯನ್ನು ಬಾದಾಳ ಸರದಾರರು ಸೇರಿ ಕಟ್ಟಿದ ಕಾರಣ ತುರುಕ ಮಾತಿನಿಂದ ಸಮುದ್ರಕ್ಕೆ ದರಿಯಾಯೆಂದು ಹೆಸರು, ಈ ಕೆರೆ ಸಮುದ್ರಕ್ಕೆ ಸಮನಾದುದರಿಂದ ಆ ಹೆಸರು ಜನರ ಮಾತಿನಲ್ಲಿ ಅದು ದರೋದಿ ಯೆಂತಾ ಆಯ್ತು.

ಅಂಕಾಪುರ ಕೈಫಿಯತ್ತಿನ 'ವಡ್ಡು' ನಾಮವು ದರೋಜಿ ಕೆರೆಯ ಉತ್ತರ ಭಾಗ ಬಾನಸಕೆರೆ, ಪಶ್ಚಿಮ ಭಾಗ ಸಿಂಗನ ಕೆರೆ, ದರೋಜಿ ಕೆರೆಗೆ ಎರಡು ಕರದಾರಿ ಮೇಲೆ ದಕ್ಷಿಣಕ್ಕೆ ವಡ್ಡರು ಯಿಳಿದ ಕಾರಣ ವಡ್ಡು ಎಂದು ಹೆಸರಿಟ್ಟು ಗ್ರಾಮನಿರ್ಮಾಣ ಮಾಡಿದರು.

ಕೈಫಿಯತ್ತು ಕುರುಗೋಡು ತಾಲೂಕ ಬಳ್ಳಾರಿಯ 'ಕುರುಗೋಡು' ನಾಮವು ಪೂರ್ವದಲ್ಲಿ ಈ ಗ್ರಾಮದ ಪಶ್ಚಿಮ ಭಾಗ ಎರಡು ಯೋಜನೆಯಲ್ಲಿ ದಕ್ಷಿಣ ಕಾಶಿ ಯೆನಿಸುವ ಪಂಪಾಕ್ಷೇತ್ರವಿತ್ತು ಮತ್ತು ಇದೆ. ಮಾತಂಗ, ಮಾಲ್ಯವಂತ, ಹೇಮಕೂಟ, ಋಷಿಶೃಂಗ, ಕಿಷ್ಕಿಂದಾ ಕಿಷ್ಕಿಂದಾ ಈ ಪಂಚ ಪರ್ವತದ ಮಧ್ಯ ಇರುವ ಪಂಪಾ ವಿರೂಪಾಕ್ಷೇಶ್ವರ ಕ್ಷೇತ್ರಕ್ಕೆ ಪೂರ್ವ ದ್ವಾರವಾಗಿರುವ ನಂದೀಶ ಇರುವಂತ ನಂದಿದುರ್ಗವಿದೆ. ನಂದೀಶ್ವರ ಎದುರಾಗಿರುವ ಈ ಶೃಗಗಳು ಕಿರಿಯದಾಗಿ ಇರುವುದರಿಂದ ಕಿರಿಗೋಡು ಯೆಂಬೋ ನಾಮ ಇದಕ್ಕೆ ಬತ್ತು. ಜನರ ಮಾಡಿಕೆಯಲ್ಲಿ ಕುರುಗೋಡು ಆಯಿತು. ಇದರ ಪೂರ್ವಭಾಗದಲ್ಲಿ ಪ್ಯಾಟಿ ಕಟ್ಟಿಸಿದ್ದರಿಂದ ಹೊಸ ಕುರುಗೋಡು ನಿರ್ಮಾಣವಾಯಿತು.

ಇದೇ ಕೈಫಿಯತ್ತಿನ 'ವಿಜಯನಗರ' ನಾಮವು ವಿದ್ಯಾರಣ್ಯರಿಂದ 1258ನೇ ಧಾತು ಸಂವತ್ಸರ ವೈಶಾಖ ಶುದ್ಧ 117 ಸೋಮವಾರದಲ್ಲಾ ನಿರ್ಮಿತವಾಯಿತು. ಅವರೇ ಆ ನಾಮವನ್ನಿಟ್ಟು ಬುಕ್ಕರಾಯನ ಮಗ ಹರಿಹರ ರಾಯನಿಗೆ ವಿಜಯನಗರದ ಪಟ್ಟಾಭಿಷೇಕ ಮಾಡಿದರು. ಮೊಲವು ನಾಯಿಯನ್ನು ಓಡಿಸಿ ಕೊಂಡು ಹೋಗುತ್ತಿದ್ದ ಕಾರಣ ಗಂಡು ನೆಲವೆಂದು ವಿದ್ಯಾರಣ್ಯರು ಭಾವಿಸಿ ವಿಜಯನಗರವನ್ನು ನಿರ್ಮಿಸಿದರು.

ತಾಲೂಕು ಕಂಪ್ಲಿ ಕೈಫಿಯತ್ತಿನ 'ಕಂಪ್ಲಿ' ನಾಮವು ದೊರೆ ಮುಮ್ಮಡಿ ಸಿಂಗನಾಯಕನು ತನಗೆ ಪುತ್ರ ಸಂತಾನವಿಲ್ಲದ ಕಾರಣ ಸೋಮೇಶ್ವರ ದೇವರಿಗೆ ಬೇಡಿಕೊಳ್ಳಲಾಗಿ ಪುತ್ರ ಸಂತಾನವಾಯಿತು. ಪುತ್ರನಿಗೆ ಕಂಪಲ ರಾಯನೆಂದು ನಾಮಧ್ಯೇಯವಿಟ್ಟು ಕೋಟೆ ಕಟ್ಟಿಸಿದನು. ಪೂರ್ವ ತ್ರೇತಾಯುಗದಲ್ಲಿ ತುಂಗಾಭದ್ರ ನದಿ ತೀರದಲ್ಲಿ ಕಪಿಲ ಋಷಿಗಳು ತಪಸ್ಸು ಮಾಡಿಕೊಂಡಿದ್ದರು. ಎಂಬ ಪ್ರತೀತಿಯೇ ಈ ನಾಮವಿಡುವುದಕ್ಕೆ ಕಾರಣವಾಗಿದೆ. ಕಂಪಿಲ ರಾಯನಿಂದ ನಿರ್ಮಿತಗೊಂಡು ಕಂಪ್ಲಿ ನಾಮ ಬಂತೆಂದೂ ದರೋಜಿ ಗ್ರಾಮದ ಕೈಫಿಯತ್ತು ನಿರೂಪಿಸುವುದು.

ಇದೇ ಕೈಫಿಯತ್ತಿನ 'ಹೊಸಮಲೆದುರ್ಗ' ನಾಮವು ಕಂಪಲ ರಾಯರು ರಾಯದುರ್ಗದಿಂದ ಬ್ಯಾಟಿ ಮಾರ್ಗವಾಗಿ ಬರಲಾಗಿ ಸೊಂಡೂರು ಸುತ್ತ ಗುಡ್ಡದಲ್ಲಿ ದುರ್ಗವನ್ನು ಕಟ್ಟಿ ಹೊಸಮಲೆದುರ್ಗ ನಿರ್ಮಾಣ ಮಾಡಿದರು.

ಇದೇ ಕೈಫಿಯತ್ತಿನಲ್ಲಿ ನಿರೂಪಿತವಾಗಿರುವಂತೆ 'ಕಪಿಲ ಗ್ರಾಮವು' ಶಕವರ್ಷ 1385ರ ಸ್ವಭಾನು ಸಂವತ್ಸರದಲ್ಲಿ ಪಟ್ಟಕ್ಕೆ ಬಂದ ವಿರೂಪಾಕ್ಷ ದೇವರಾಯನು ಕಪಿಲ ಋಷಿಗಳ ಆಶ್ರಮ ನೋಡಿ ಇದು ದೊಡ್ಡ ಸ್ಥಳವಿರಬೇಕೆಂದು ತಿಳಿದು ಗ್ರಾಮ ಕೋಟೆ ಕಟ್ಟಿಸಿ ಕಪಿಲಗ್ರಾಮ ಎಂದು ಹೆಸರಿಟ್ಟನು.

ಬಳ್ಳಾರಿ ಕೈಫಿಯತ್ತಿನ 'ಬಳಹರಿ' ನಾಮವು ಕಲಿಯುಗದಲ್ಲಿ ಬಳ್ಳಾಳ ರಾಯನ ವಂಶಸ್ಥನಾದ ಸಿಂಧು ಬಳ್ಳಾಳ ರಾಯನು ಇಲ್ಲಿ ರಾಜ್ಯಭಾರ ಮಾಡುತ್ತಾ ಇರುವ ವೇಳೆಯಲ್ಲಿ, ಚತುರಂಗ ಬಲ ಸಮೇತನಾಗಿ ಬೇಟೆಗೆ ಹೊರಟು ಅರಣ್ಯದಲ್ಲಿ ವ್ಯಾಘ್ರ ಮುಂತಾದ ಕ್ರೂರ ಮೃಗಗಳನ್ನು ಸಂಹರ ಮಾಡುತ್ತಾ, ಈ ಪರ್ವತ ಪ್ರದೇಶಕ್ಕೆ ಬಂದು, ಈ ಪರ್ವತದ ಮೇಲೆ ಇರುವ ನಿರ್ಝರೋದಕ ಪೂರಿತವಾಗಿರುವ ದಿವ್ಯ ಜೀವ ಜಾತಕಗಳನ್ನು ಕಂಡು, ಈ ಸ್ಥಳವು ಗ್ರಾಮಕಟ್ಟಲಿಕ್ಕೆ ಯೋಗ್ಯಗಿದೆಯೆಂದು ತಿಳಿದು, ಅರಣ್ಯವನ್ನು ಛೇದಿಸಿ,....... ಇದಕ್ಕೂ ಈ ಪರ್ವತದ ಉತ್ತರ ಭಾಗಕ್ಕೆ ಸಮೀಪವಾಗಿರುವ ಬಾಲ ಗುಡ್ಡಕ್ಕೂ ಮಧ್ಯದಲ್ಲಿ ಭೂಮಿ ಸಮನಾಗಿದ್ದ ಸ್ಥಳದಲ್ಲಿ ಪಟ್ಟಣವನ್ನು ಕಟ್ಟಿಸಿ, ಬಳಹರಿಯೆಂಬ ನಾಮವಿಟ್ಟು ವ್ಯವಹರಿಸಿಕೊಂಡನು.

\- - - - - - - - -

3.3.3 ಸಾಮಾಜಿಕ ಸ್ಥಳ ಪ್ರಧಾನ ಸ್ಥಳ ನಾಮಗಳು:

ಸಾಮಾನ್ಯ ಜನವರ್ಗದಲ್ಲಿಯ ಘಟನೆಗಳು, ಪ್ರಾಕೃತಿಕವಾಗಿ ಕೆಲ ಹಳ್ಳಿಗಳು ಒಂದೇ ಕಡೆ ನಿರ್ಮಿತವಾಗಿರುವ ಪ್ರಯುಕ್ತ, ಸ್ಥಳ ಪ್ರಧಾನಗೊಂಡು ಸಾಮಾಜಿಕ ಸ್ಥಳ ಪ್ರಧಾನ ಸ್ಥಳ ನಾಮಗಳು ನಿರ್ಮಾಣವಾಗಿರುವುದನ್ನು ಗಮನಿಸಬಹುದು.

ಆರ್ಕಾಟ ಸಂಸ್ಥಾನದ ಕೈಫಿಯತ್ತಿನ 'ಆರ್ಕಾಟ' ನಾಮವು ಹಿಂದೆ ಜುಲ್ಫಿಕರ ಖಾನರು ಈ ರಾಜ್ಯಕ್ಕೆ ಬಂದು ಕ್ಷೀರನದಿ ತೀರದಲ್ಲಿರುವ ಷಡಾರಣ್ಯವೆಂಬ ಅಡವಿಯಲ್ಲಿ ಇಳಿದುಕೊಂಡು, ತಾವು ಇಳಿದಿದ್ದ ಅರಣ್ಯದಲ್ಲಿ ಒಂದು ಊರು ಕಟ್ಟಿಸಿ ಅದಕ್ಕೆ ಆರುಕಾಡು ಎಂಬುದಾಗಿ ಹೆಸರಿಟ್ಟರು.

ಕೈಫಿಯತ್ತು ಕುರುಗೋಡು ತಾಲೂಕೆ ಬಳ್ಳಾರಿಯ 'ಕೋಟೆದುರ್ಗ' ನಾಮವು ಪಶ್ಚಿಮದಿಕ್ಕಿಗೆ ದಿಡ್ಡಿ ಹನುಮಂತನ ಕಣಿವೆ, ಇದರ ಸಮೀಪ ಹಾಲಬಾವಿ ಕಣಿವೆ, ಸದರಿಯೀ ಬೆಟ್ಟಗಳನ್ನು ಒಳಗೆ ಮಾಡಿ ಸುತ್ತು ಕೋಟೆ ಮಧ್ಯದಲ್ಲಿ ಹಳೆ ಕುರುಗೋಡು ಎಂಬ ಸ್ಥಳ ಪ್ರಖ್ಯಾತಿಯಾಗಿಯಿದ್ದ ಸ್ಥಳ ಕುಂತಳದೇಶಕ್ಕೆ ಸಲ್ಲುವ ಈ ಕುರುಗೋಡನ್ನು ಕೋಟೆ ದುರ್ಗವೆಂದು ಜನ ಕರೆಯುತ್ತಿದ್ದರು.

ಇದೇ ಕೈಫಿಯತ್ತಿನ 'ಭಟ್ಟರಹಳ್ಳಿ' ನಾಮವು ಕುರುಗೋಡಿನ ವಾಯುವ್ಯ ದಿಕ್ಕಿಗೆ ಕೊಮಾರರಾಮ ಅರಸನು ಭಟ್ಟರಿಗೆ ಉಮ್ಮಳಿಯಾಗಿ ಕೊಟ್ಟ ಗ್ರಾಮ ಅದಕ್ಕಾಗಿ ಅದನ್ನು ಭಟ್ಟರಹಳ್ಳಿ ಎಂದು ಕರೆಯುವರು.

ಹತ್ತಿ ಬೆಳಗಲ್ಲು ಕೈಫಿಯತ್ತಿನ 'ಬೆಳಗಲ್ಲು ಗುಡ್ಡ' ನಾಮವು ಈ ಊರಿಗೆ ಬೆಳಗಲ್ಲುಗುಡ್ಡ ಎಂಬ ಹೆಸರು ಆದುದಕ್ಕೆ ಕಾರಣ, ಈ ಊರು ಕೋಟೆ ಮನೆ ಮುಂತಾದವು ಇದ್ದ ಪರ್ವತಕ್ಕೆ ಊರುಗುಡ್ಡವೆಂಬ ಹೆಸರು. ಅದಕ್ಕೆ ಕಾರಣ ಈ ಊರು ಗುಡ್ಡಕ್ಕೆ ಸೇರಿ ಇರುವ ಗುಡ್ಡಾ ಬೆಳ್ಳಗ ಇದ್ದುದರಿಂದಾ ಈ ಊರಿಗೆ ಬೆಳಗಲ್ಲುಗುಡ್ಡ ಎಂದು ಹೆಸರು.

\- - - - - - -

3.4 ಪ್ರತಿನಾಮಗಳು:

ಪೂರ್ವದಲ್ಲಿ ಇದ್ದ ನಾಮಕ್ಕೆ ಬದಲಾಗಿ ಮತ್ತೊಂದು ನಾಮವನ್ನು ಇಟ್ಟಿರುವುದು ಕೈಫಿಯತ್ತುಗಳಲ್ಲಿ ಕಂಡು ಬರುತ್ತದೆ. ಈ ಪ್ರತಿನಾಮಗಳಿಗೆ ಕಾರಣ ಪೌರಾಣಿಕವಾಗಿರಬಹುದು ಅಥವಾ ಚಾರಿತ್ರಿಕವಾಗಿರಬಹುದು. ಪ್ರತಿ ನಾಮಕರಣವಾದ ನಂತರ ಮೂಲ ನಾಮ ಮರೆಯಾಗಿ ಪ್ರತಿನಾಮವೇ ಜಾರಿಯಲ್ಲಿ ಬರುವುದು– ಸಾಮಾನ್ಯವಾಗಿದೆ. ಈ ಕೆಳಗಿನ ಎಲ್ಲಾ ಪ್ರತಿನಾಮಗಳಿರಿ ಆಗಾಗುವುದಕ್ಕೆ ಕಾರಣ ಸಿಗಲಾರದಾದರೂ ಕೆಲವು ಪ್ರತಿನಾಮಗಳಿಗೆ ಪೌರಾಣಿಕ ಮತ್ತು ಚಾರಿತ್ರಿಕ ಕಾರಣಗಳನ್ನು ಕೈಫಿಯತ್ತಿನ ನಿರೂಪಣೆಗಳು ನೀಡುತ್ತವೆ.

ಅಕಿಯಬ್ಯಾಳು (ನರಸೀಪುರ ತಾಲೂಕು) ಕೈಫಿಯತ್ತಿನ ಚಂಡಗವುಡನಹಳ್ಳಿ ಪ್ರತಿನಾಮ 'ದೇವರಾಜಪುರ' ನಾಮವು ಶ್ರೀರಂಗ ಪಟ್ಟಣದ ಗೌತಮ ಕ್ಷೇತ್ರದಲ್ಲಿ ದೇವರಾಜ ಮಹಿಪಾಲಕನು ಆಳುತ್ತಿರುವುದರ ಚಾರಿತ್ರಿಕ ಕಾರಣವಾಗಿ ಚಂಡಗವುಡನ ಹಳ್ಳಿಗೆ ಪ್ರತಿನಾಮ ದೇವರಾಜ ಪುರವೆಂದಾಯಿತು.

ಕೊಣಗೊಂಡ ಕೊಣಬಗೊಂಡನಿಗೆ ವೀರ ಬಲ್ಲಾಳ ರಾಯರು ನೀತಿಯನ್ನು ಹೇಳಿ ಪಟ್ಟಣವನ್ನು ಕಟ್ಟಿಸಲು ತಿಳಿಸಿದಕ್ಕೆ ತಿಮ್ಮಗೊಂಡನ ಹಳ್ಳಿಗೆ ಪ್ರತಿನಾಮ 'ರಾಜನೀತಿ ಪಟ್ಟಣ'ವಾಗಲು ಕಾರಣವಾಯಿತು ಎಂದು ಕೈಫಿಯತ್ತು, ತಾಲೂಕೆ ಅಜಂಪುರ ನಿರೂಪಿಸುತ್ತದೆ.

ದಕ್ಷಿಣ ಗೋವರ್ಧನ ಗಿರಿಗೆ ಪ್ರತಿನಾಮ 'ಕಮಲಾಚಲ' ನಾಮವು ಪ್ರಾಕೃತಿಕ ಮೂಲದಿಂದ ಬಂದದ್ದಾಗಿದೆ. ಕಮಲದ ದಳದಂತೆ ಅಷ್ಟ ಪರ್ವತಗಳು ಸುತ್ತುಗಟ್ಟಿ ಕೊಂಡಿರುವ ಕಾರಣ ಅದಕ್ಕೆ ಕಮಲಾಚಲವೆಂದು ಹೆಸರಾಯಿತು. ಯಗಟಿ ಕೈಫಿಯತ್ತಿನ ಚಂದ್ರದ್ರೋಣ ಪರ್ವತಕ್ಕೆ ಪ್ರತಿನಾಮ ಗಾಳಿಪುಜಿ ಹಬ್ಬಿಗೆ ನಾಮವು ವೇದಾವತಿ ನದಿಯ ಪ್ರವಾಹದಿಂದ ಹರಿಯುವ ಪರಿಣಾಮವಾಗಿ ಅಲ್ಲಿಯ ಗಾಳಿಯ ರಭಸದಿಂದ ಗಾಳಿ ಪುಜಿ ಹಬ್ಬಿಗೆ ನಾಮವು ಬಂದಿರಬಹುದಾಗಿದೆ.

ಬಿದರೂರನ್ನು ಹೈದರಾಲಿಯು ವೀರಮ್ಮಾಜಿಯಿಂದ ವಶಪಡಿಸಿಕೊಂಡ ನಂತರ ಮತ್ತು ಅಲ್ಲಿ ಕೋಟೆಯನ್ನು ನಿರ್ಮಿಸಿದ ನಂತರ ತಾವೇ ಈ ಪ್ರತಿ ನಾಮವನ್ನು (ಹೈದರ ನಗರ) ಇಟ್ಟಿರುವುದು ಚಾರಿತ್ರಿಕವಾಗಿದೆ.

ಅಜರಲರ ಕೈಫಿಯತ್ತಿನ 'ವಂಗಾಡಿ' ನಾಮವು ದೇಶನಾಮದಿಂದ ಬಂದುದು ಇದಕ್ಕೆ ಪ್ರತಿನಾಮವಾಗಿರುವ ಕಲ್ಲುಗುಂಡು ನಾಮವು ಅದರ ಆಕಾರ ಮಾತ್ರದ ಪ್ರಾಕೃತಿಕ ಕಾರಣದಿಂದ ಬಂದದ್ದಾಗಿದೆ.

ವಸುರಾಜನ ಕಾರಣದಿಂದ 'ವಸುಪುರ' ನಾಮವು ಬಂದರೆ ಅವನು ಮಳಲಿನಿಂದ ಲಿಂಗವನ್ನು ಪ್ರತಿಷ್ಠೆ ಮಾಡಿದ ಬಳಿಕ ಬಸುರೂರು ಎಂದಾಯಿತು. ಇದೇ ಮುಂದೆ ವಸುಧಾರೆಯೂರಾಯಿತು. ಇದನ್ನು ಈಗ ವಸ್ರಾರೆ ಎಂದು ಕರೆಯುವರು. ಇದು ಸಂಸ್ಕೃತೀಕರಣಕ್ಕೆ ಒಳಗಾದ ನಾಮವಾಗಿದೆ.

ಮಹಾಬಲೇಶ್ವರ ಸ್ವಾಮಿಯವರು ಗೋಕರ್ಣ ಕ್ಷೇತ್ರದಲ್ಲಿ ವಾಸಮಾಡಿ ಕೊಂಡಿದ್ದುದರಿಂದ ಗೋಕರ್ಣಕ್ಕೆ 'ಮಹಾಬಲೇಶ್ವರ ತೀರ್ಥ'ವೆಂಬ ಪ್ರತಿನಾಮ ಬರಲು ಕಾರಣವಾಯಿತು ಎಂದು ಗೋಕರ್ಣದ ಕೈಫಿಯತ್ತು ನಿರೂಪಿಸುತ್ತದೆ.

ಭಟ್ಕಳದ ಕೈಫಿಯತ್ತಿನ ಹಾಡುವಳ್ಳಿಗೆ ಪ್ರತಿನಾಮ 'ಸಂಗೀತಪುರ' ನಾಮವು ಸಂಸ್ಕೃತೀಕರಣಕ್ಕೆ ಒಳಗಾದ ನಾಮವಾಗಿದೆ ಮತ್ತು ಆ ನಾಮಕ್ಕೆ ಸಹಜವಾದ ನಾಮವಾಗಿದೆ.

ಭಟ್ಟರಹಳ್ಳಿ ಕೈಫಿಯತ್ತಿನ 'ಭಟ್ಟರ ಹಳ್ಳಿ' ನಾಮವು ಭಟ್ಟರು ಆ ಗ್ರಾಮಕ್ಕೆ ಆ ನಂತರ ಬಂದದ್ದರಿಂದ ಬಂದದ್ದಾಗಿದೆ. ಆದರೆ ಪ್ರಾಚೀನ ನಾಮ ಕಾಟಗೊಂಡನ ಹಳ್ಳಿ ಯೆಂದು. ಕಾಟಗೊಂಡ ಎಂಬ ವ್ಯಕ್ತಿ ಯಿಂದ ಆಹೆಸರು ಬಂದಿದೆ. ಮೇಲ್ವರ್ಗದವರು ಒಂದು ಗಾಮಕ್ಕೆ ಬರುವಿಕೆಯಿಂದ ಪ್ರಾಚೀನ ನಾಮವನ್ನು ಅಳಿಸಿ ಹಾಕಬಲ್ಲುದೆಂಬುದನ್ನು ಈ ಪರತಿನಾಮ ನಿರೂಪಿಸುವುದು.

ದೇವಲಾಪುರಕ್ಕೆ ಪ್ರತಿನಾಮ 'ಮಲ್ಲಿಕಾರ್ಜುನ ಪುರ'ವೆಂಬ ನಾಮವು ಆ ದೇವರ ಅಲ್ಲಿ ಇರುವಿಕೆಯಿಂದ ಬಂದದ್ದಾಗಿದೆ. ಬಲಕುಂದಿ ಯೆಂಬೋ ಗ್ರಾಮಕ್ಕೆ ಪ್ರಾಚೀನ ನಾಮ 'ಕುಂತಳ' ಈ ನಾಮವು ದೇಶ ನಾಮವಾಗಿದೆ.

ಹತ್ತಿ ಬೆಳಗಲ್ಲು ಕೈಫಿಯತ್ತಿನ 'ಹತ್ತಿ ಬೆಳಗಲ್ಲು' ನಾಮವು ಸಾಮಾಜಿಕ ಘಟನೆಯಲ್ಲಿಯ ಮೋಸಗಾರಿಕೆಯ ಫಲದಿಂದ ಬಂದದ್ದಾದರೆ ಬೆಳಗಲ್ಲು ಎಂಬ ಪ್ರಾಚೀನ ನಾಮವು ಅಲ್ಲಿರುವ ಬಿಳಿದಾದ ಗುಡ್ಡದಿಂದ ಬಂದದ್ದಾಗಿದೆ.

ಹರಿಹರ ಪುರಕ್ಕೆ 'ಹಿರೆಹಾಳ' ಎಂಬ ಪ್ರತಿನಾಮ ಬರಲು ಹಿರೆಕೆರೆಯು ಒಡೆದು ಊರು ಹಾಳಾದುದಕ್ಕೆ ಹಿರೆಹಾಳು ಎಂದಾಯಿತು. ಪ್ರಕೃತಿ ವಿಕೋಪದ ಕಾರಣ ವಾಗಿಯೂ ನಾಮ ಬರಬಹುದೆಂಬುದನ್ನು ಈ ನಾಮ ದೃಢಪಡಿಸುವುದು.

ಹೀಗೆ ಪ್ರತಿನಾಮಗಳು ಪ್ರಸ್ತುತವಾಗಿ ನಾಮಗೊಂಡು ಮೂಲನಾಮಗಳನ್ನು ತಮ್ಮ ಜೊತೆಯಲ್ಲೇ ಇರಿಸಿಕೊಂಡು ಕರೆಸಿಕೊಳ್ಳುತ್ತವೆ.

3.5 ಸಂಕೀರ್ಣ ಸ್ಥಳನಾಮಗಳು:

ಈ ಕೆಳಗಿನ ಕೆಲ ಸ್ಥಳನಾಮಗಳು ಜಾತಿ ಪ್ರಧಾನದಿಂದ, ಪ್ರಾಣಿ ಪಕ್ಷಿ ಪ್ರಧಾನದಿಂದ ಬಂದದ್ದಾಗಿವೆ. ಈ ಸ್ಥಳನಾಮಗಳ ಮೂಲಕ ಪ್ರಾಕೃತಿಕ ಮೂಲಕ ಸ್ಥಳನಾಮಗಳಿಗೆ ಇವುಗಳನ್ನು ಹೋಲಿಸಿಕೊಳ್ಳಬಹುದು.

ಅಜಲರ ಕೈಫಿಯತ್ತಿನ 'ಅಜಲರು' ನಾಮವು ಜಾತಿ ಮೂಲದಿಂದ ಬಂದದ್ದಾಗಿದ್ದರೆ ಬಂಗರು ನಾಮವು ದೇಶಮೂಲದಿಂದ ಬಂದದ್ದಾಗಿದೆ. ತಿಮ್ಮಣ್ಣಾಜಲರು ಮತ್ತು ಲಕ್ಷ್ಮಣ ಅಜಲರು ಒಂದೇ ಸ್ಥಳದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಆಳಿಕೊಂಡಿದ್ದರು. ತಾವು ಅಣ್ಣತಮ್ಮಂದಿರು ಪ್ರತ್ಯೇಕ ಇದ್ದ ವೇಳೆ ಇಬ್ಬರಿಗೂ ಒಂದೇ ನಾಮಧೇಯ ವಾಗುತ್ತದೆ. ಬೇರೆ ಬೇರೆ ಹೆಸರಿಟ್ಟುಕೊಳ್ಳಬೇಕು. ಎಂಬುದಾಗಿ ಆಲೋಚಿಸಿ ತಿಮ್ಮಣ್ಣಾಜಲರು ತಮ್ಮ ಮನೆತನದ ಹೆಸರನ್ನು ಲಕ್ಷ್ಮಣಪ್ಪನು ತಮ್ಮ ಊರು ವಂಗದೇಶ ವಾದಕಾರಣ ವಂಗರು ಎಂದು ಹೆಸರಿಟ್ಟುಕೊಂಡರು. ಲೋಕ ರೂಢಿಯಲ್ಲಿ ಅದು ಬಂಗರು ಆಯಿತು.

ಸೋದೆ ಸಂಸ್ಥಾನ ಕೈಫಿಯತ್ತಿನ 'ನಾಗೂರು' ನಾಮವು ಕರಹಾಡ ದೇಶದ ತ್ರಿಕಾಳ ವಾಸುದೇವನು ಮಟ್ಟು ಒಂದು ಗ್ರಾಮವನ್ನು ಕೊಟ್ಟು ಮಟ್ಟನವರು ಎಂದು ನಾಗೂರುಯೆಂಬೋ ಗ್ರಾಮಕೊಟ್ಟು ನಾಗೂರು ಯೆಂತ ಹೆಸರು ಕೊಟ್ಟನು.

ಸಂತೆಬೆನ್ನೂರು ಸೀಮೆ ಕೈಫಿಯತ್ತಿನ 'ಮದಕರಿ' ನಾಮವು ಹಿಂದೆ ಹರಿಹರ ದೇವರಾಯನ ರಾಜ್ಯವಾಳುತ್ತಿದ್ದ ಸಮಯದಲ್ಲಿ ಹರಿಹರ ಸ್ಥಳದಲ್ಲಿ ಮದೋನ್ಮತ್ತವಾದ ಆನೆಯೊಂದು ಇರುತ್ತಿರಲಾಗಿ ಅದನ್ನು ತಮ್ಮ ಕೈ ವಶ ಮಾಡಿಕೊಳ್ಳಲೆಂದು ರಾಯರು ಸವಾರಿ ಬಂದು ಕೈ ವಶವಾಗದ ವ್ಯಾಕುಲರಾಗಿ ನರಸಿಂಹಭಟ್ಟನನ್ನು ಕೇಳಲಾಗಿ ಉದಯವಾದ ಗಳಿಗೆ ಮೂರಕ್ಕೆ ಆನೆಯು ಕೈ ವಶವಾಗುತ್ತದೆ ಎಂಬುದಾಗಿ ರಾಯರಿಗೆ ಅದೇ ವೇಳೆಗೆ ಕೈ ವಶವಾಯಿತು. ಅಲ್ಲದೆ ಅದೇ ಸ್ಥಳದಲ್ಲಿ ಹುತ್ತದಲ್ಲಿ ಮಾಣಿಕ್ಯದೋಪಾದಿಯಲ್ಲಿ ಲಿಂಗಾಕಾರದ ಪ್ರಸನ್ನ ಮೂರುತಿ ಗೋಚರವಾಯಿತು. ಅದಕ್ಕಾಗಿ ಆ ಸ್ಥಳದಲ್ಲಿ ಮದಕರಿಯೆಂಬುದಾಗಿ ಹೆಸರಿಸಿ ಗ್ರಾಮ ನಿರ್ಮಾಣ ಮಾಡಿದರು.

ನಗರ ಸೀಮೆ ಕೈಫಿಯತ್ತಿನ 'ಹಂಸತೀರ್ಥ' ನಾಮವು ಸರೋವರದಲ್ಲಿ ಹಂಸಪಕ್ಷಿಯು ಇರುವಿಕೆಯಿಂದ ಬಂದದ್ದಾಗಿದೆ. ಇದೇ ರೀತಿ ಮಲ್ಲೂರು ನಾಸಿವೆಹಳ್ಳಿ ಸೀಮೆ ಕೈಫಿಯತ್ತಿನ ಹುಲಿಗನ ಘಟ್ಟ ನಾಮವು ಗಂಗಾ ಸಮುದ್ರದ ದಕ್ಷಿಣ ದಿಗ್ಭಾಗದಲ್ಲಿ ಮೃಗಬಾಧೆ ತಪ್ಪಿಸಿದುದರಿಂದ ಹುಲಿಗನಾ ಘಟ್ಟ ಯೆಂದು ನಾಮವಾಯಿತ್ತು. ಈಗ ಅದನ್ನು ಹುಣಸಘಟ್ಟ ಎಂದು ಕರೆಯುವರು. ಇದೇ ಕೈಫಿಯತ್ತಿನ ಕಪ್ಪೆಕಲ್ಲು ನಾಮವು ಗಂಗಾ ಸಮುದ್ರ ಕೆರೆಯನ್ನು ನೋಡಿಕೊಂಡು ಬರಲು ಸೂಳೆ ಕೆರೆಯ ಕಪ್ಪೆಗಳು ಇಷ್ಟ ಪಟ್ಟು ಅಲ್ಲಿ ಕೆಲದಿನ ವಾಸವಿದ್ದು ಪುನಃ ಸೂಳೆಕೆರೆಗೆ ಬರುವ ದಾರಿಯಲ್ಲಿ ದೈತ್ಯನ್ನ ತಪ್ಪಿ ಅಲ್ಲಿಯೇ ನಿಂತುಬಿಟ್ಟವು. ಸಾಕ್ಷಿಯಾಗಿ ಕಲ್ಲಿನ ಮೇಲೆ ಕಪ್ಪೆ ಆಕಾರವಾಗಿ ಗುರುತು ಇದೆ ಎಂದು ಆ ನಾಮವು ಪ್ರಚಲಿತವಾಗಿದೆ. ಕುರುಗೋಡು ಕೈಫಿಯತ್ತಿನ 'ಕೋಳಿಗುಡ್ಡ' ನಾಮವು ಕುರುಗೋಡಿನ ಪಶ್ಚಿಮಕ್ಕೆ ಇರುವ ಬೆಟ್ಟದ ಆಕಾರವು ಕೋಳಿಯ ಹಾಗಿದ್ದುದರಿಂದ ಆ ನಾಮವು ಬಂದಿತು.

ಭಾಗ 4 : ಸಮಾರೋಪ

4.1 : ಸ್ಥಳನಾಮ ನಿರೂಪಣೆಯ ಸೈದ್ಧಾಂತಿಕ ನೆಲೆಗಳು

4.2 : ಅಧ್ಯಯನದ ಮುಖ್ಯಾಂಶಗಳು

4·1 : ಸ್ಥಳನಾಮ ನಿರೂಪಣೆಯ ಸೈದ್ಧಾಂತಿಕ ನೆಲೆಗಳು:

3ನೇ ಅಧ್ಯಾಯದಲ್ಲಿ ನಿರೂಪಿಸಿದ ಪ್ರಕಾರ ಸ್ಥಳ ನಾಮಗಳು ಪೌರಾಣಿಕ ಚಾರಿತ್ರಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ಅಭಿವ್ಯಕ್ತಗೊಂಡಿವೆ. ವ್ಯಕ್ತಿ, ಘಟನೆ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆಯು ಇವು ನಿಖರವಾಗಿವೆ. ಪ್ರಸ್ತುತ ಅಧ್ಯಾಯದಲ್ಲಿ ಈ ಬಗೆಯ ನಿರೂಪಣೆಗಳ ಹಿಂದಿನ ಸೈದ್ಧಾಂತಿಕ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

ಸುಮಾರು 35 ಕೈಫಿಯತ್ತುಗಳಲ್ಲಿ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಒಂದಲ್ಲ ಒಂದು ರೀತಿಯಲ್ಲಿ ಪುರಾಣ ವ್ಯಕ್ತಿಗಳು ಪ್ರತ್ಯಕ್ಷರಾಗಿರುತ್ತಾರೆ. ಇಲ್ಲಿ ಪುರಾಣ ವ್ಯಕ್ತಿಗಳ ಕಾರಣವಾಗಿ ನಿರ್ದಿಷ್ಟ ಸ್ಥಳಕ್ಕೆ ಆ ಹೆಸರು ಬಂತೆಂದು ವಾದಿಸಲಾಗುತ್ತದೆ. ಇಲ್ಲಿ ಪ್ರತ್ಯಕ್ಷವಾಗುವ ಪುರಾಣ ವ್ಯಕ್ತಿಗಳೆಂದರೆ ಅತ್ರಿ ಋಷಿ ರಾಮ, ಅರ್ಜುನ, ಋಷ್ಯಶೃಂಗ, ಕುಬಮಾಳಿ ದೇವತೆ, ಬಂದುಪುರ ಋಷಿ, ದಂಡಕನೆಂಬ ರಾಕ್ಷಸ, ಬಳಹರಿ ರಾಕ್ಷಸ, ಪೌರಾಣಿಕ ಘಟನೆಯನ್ನಾಧರಿಸಿ ದೇವ ಕಂಟಕನೆಂಬ ರಾಕ್ಷಸ, ತಲಕಾಡು ಎಂಬ ಇಬ್ಬರು ರಾಕ್ಷಸರು, ಮಣಿಕರಣಿಕೆ ದೇವತೆ, ಬನಶಂಕರಿ ದೇವತೆ, ಅಪ್ಸರ ಸ್ತ್ರೀಯರು, ಹನುಮಂತ ದೇವರು, ಭೀಮ, ಕುಂಭಾಸುರ, ವಿರೂಪಾಕ್ಷದೇವರು, ಉಡುಚಲಾ ದೇವತೆ, ಭಾರ್ಗವ ಋಷಿ, ಪರಮೇಶ್ವರ, ಕಮಲಾ ದೇವಿ ಮತ್ತು ಮಾಂಡವ್ಯ ಋಷಿ ಈ ಪಟ್ಟಿಯಲ್ಲಿ ಒಳಗೊಂಡಿರುವ ದೇವತೆಗಳು, ರಾಕ್ಷಸರು ಹೆಸರುಗಳನ್ನು ಗಮನಿಸಿದರೆ ಇವು ಅಖಿಲ ಭಾರತ ಮಟ್ಟದಲ್ಲಿ ಜನಪ್ರಿಯವಾಗಿರುವ ದೇವತೆಗಳ ಹೆಸರುಗಳೆಂದು ತಾನೇ ಸ್ಪಷ್ಟವಾಗುತ್ತದೆ. ಇಲ್ಲಿ ಜನಸಾಮಾನ್ಯರ ದೇವತೆಗಳಾದ ಹುಲಿಗೆಮ್ಮ, ಮಾರೆಮ್ಮ, ಸಂಕಲಮ್ಮ, ಮಾದೇಶ್ವರ, ಈರಣ್ಣ, ಮುಂತಾದ ಜನಪದ ದೇವತೆಗಳ ಗೈರು ಹಾಜರಿಯನ್ನು ವಿಶೇಷವಾಗಿ ಲಕ್ಷಿಸಬೇಕು. ಅದರೆ ಮೇಲ್ವರ್ಗದ ದೇವತೆಗಳು ಬಹುಮಟ್ಟಿಗೆ ಭಾರತೀಯ ವೈದಿಕ ಪರಂಪರೆಗೆ ಸೇರಿದ ಹೆಸರುಗಳೆಂಬುದು ಸ್ಪಷ್ಟವಾಗುತ್ತದೆ. ವಸಾಹತು ಶಿಕ್ಷಣಕ್ಕೆ ಒಳಗಾದ ಅಥವಾ ಅದರ ಪರಿಣಾಮವಾದ ಉದಿಯಮಾನ ಮಧ್ಯಮವರ್ಗದ ಚಿಂತನಾ ಕ್ರಮದ ತರ್ಕಬದ್ಧ ಅಂತ್ಯವಿದು. ಆ ಕಾಲದಲ್ಲಿ ಬ್ರಿಟೀಷ್ ಆಳ್ವಿಕೆಯ ಕಾರಣದಿಂದ ಕಾಣಿಸಿಕೊಂಡ ರಾಷ್ಟ್ರೀಯತೆಯ ಪರಿಣಾಮವಾಗಿ ಆ ಕಾಲದ ನಿರೂಪಕರು ಹೇಗೆ ಅಖಿಲ ಭಾರತ ಮಟ್ಟದಲ್ಲಿ ಯೋಚಿಸುವುದು ಅನಿವಾರ್ಯವಾಗಿದೆ ಎಂಬುದನ್ನು ತೋರಿಸುವುದು. ಇದನ್ನು ಸ್ವಲ್ಪ ಬೇರೆಯಾಗಿಯೂ ಕೂಡ ನೋಡಲು ಸಾಧ್ಯವಿದೆ. ಹೇಗೆಂದರೆ ಈ ಪಟ್ಟಿಯಲ್ಲಿ ಯಾವ ಬಗೆಯ ಹೆಸರುಗಳು ಕಾಣಿಸಿಕೊಂಡಿವೆ ಎಂಬುದಕ್ಕಿಂತ ಯಾವ ಬಗೆಯ ಹೆಸರುಗಳು ಕಾಣಿಸಿಕೊಂಡಿಲ್ಲ ಎಂದು ಯೋಚಿಸುವುದೂ ಕೂಡ ಅಗತ್ಯವೆಂದು ತೋರುತ್ತದೆ. ಕೈಫಿಯತ್ತುಗಳಲ್ಲಿ ಭಟ್ಟರ ಹಳ್ಳಿ ದೊರೆಯುತ್ತದೆ. ಅದರೆ ಗಾಳೆಮ್ಮನಗುಡಿ, ಮಾದಿಗರ ಹಳ್ಳಿ ದೊರೆಯುವುದಿಲ್ಲ. ಹಾಗೆಯೇ ವಿರೂಪಾಕ್ಷಪುರ ಕಾಣಿಸಿಗುತ್ತದೆ. ಆದರೆ ಮೈಲಾರಪುರ ಕಾಣಿಸಿಗುವುದಿಲ್ಲ. ಇದರ ಅರ್ಥ ಇಷ್ಟೆ

ಕ್ರೋಡೀಕೃತ ಸಮಾಜದ ಮೌಲ್ಯದಿಂದ ಜನರ ಚಿಂತನಾ ಕ್ರಮದಲ್ಲಿದ್ದ ಹೆಸರುಗಳು ಇಲ್ಲಿ ಪ್ರತ್ಯಕ್ಷವಾಗಿವೆ. ಕೆಳತರದಿಂದ ಜನರ ಸಂಕಥನಗಳು ಇಲ್ಲಿ ಕಾಣಿಸಿಕೊಂಡಿಲ್ಲ. ಹೀಗಾಗಿ ಜನಪದದ ದೈವಗಳ, ಸಾಂಸ್ಕೃತಿಕ ವೀರರ ಹೆಸರುಗಳುಳ್ಳ ಸ್ಥಳನಾಮಗಳು ಕೈಫಿಯತ್ತುಗಳಲ್ಲಿ ಕಾಣೆಯಾಗಿವೆ ಅಥವಾ ಬಹು ಮಟ್ಟಿಗೆ ಗೌಣವಾಗಿವೆ. ಈ ಅಂಶ ಕೂಡಾ ನಾನು ಹಿಂದೆ ವಿಶ್ಲೇಷಿಸಿದ ಸಾಂಸ್ಕೃತಿಕ ಕಾರಣಗಳ ನೇರ ಪರಿಣಾಮವಾಗಿವೆ.

ಚಾರಿತ್ರಿಕ ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೆಸರುಗಳು ಕೈ ಕೈಫಿಯತ್ತುಗಳಲ್ಲಿ ಕಾಣಸಿಗುತ್ತವೆ. ಬಾಗಡೆ ತಿಮ್ಮಪ್ಪ, ಬಾಲನಾಯಕ, ಬಸವನಾಯಕ, ಕೇಸನಾಯಕ, ಗಿರಿನಾಗತಿ, ಈರನಾಯಕ, ಯಗ್ಗಟಿ, ಹೈದರ, ಟೊಕ್ಕರಾಮಶೆಟ್ಟಿ, ಕದಂಬ ವಂಶಸ್ಥರ ಕಾಲದ ಭಟ್ಟಕಳ, ಸಿಂಗನೆಂಬ ಸರದಾರ, ಎಲ್ಲಪ್ಪನಾಯಕ, ಕೊಂಡಲನಾಯಕ, ಖಾನ ಸಾಹೇಬ, ದೇವಪ್ಪ ಪಣ್ಣ್ಯನಾಯಕ, ವೀರಬಲ್ಲಾಳರಾಯ, ತಿಮ್ಮಪ್ಪ ನಾಯಕ, ಕೊಣಬಗೌಡ, ಹರಿಹರ ರಾಯ, ಬುಕ್ಕರಾಯ, ನರಸಿಂಗರಾಯ, ರಾಮರಾಯ, ದಯಜವ ಮುರಾರಿ, ತಿಮ್ಮಣ್ಣ ಅಜಿಲರು, ಗಂಗಾಧರಯ್ಯ, ಕುಮಾರರಾಮ, ಓರಂಗಲ್ಲು ಪ್ರತಾಪರುದ್ರ, ವೀರಭದ್ರನಾಯಕ, ಗೋವಿಂದರಾಯರು, ವಿಕ್ರಮರಾಜ, ಸದಾಶಿವರಾಯ, ನಾಡಿಗ ಈಶ್ವರಯ್ಯ, ಕುಂದಿರಾಯರು, ಸಂಕಣ್ಣನಾಯಕ, ಚನ್ನರಾಯ, ಸಿಂಗನಾಯಕ, ಮತ್ತು ಸಿಂಧು ಭಳ್ಳಾಳರಾಯ.

ಈ ಹೆಸರುಗಳನ್ನು ಗಮನಿಸಿದಾಗ ಈ ಐತಿಹಾಸಿಕ ವ್ಯಕ್ತಿಗಳು ಸಾಮಾನ್ಯ ಜನವರ್ಗಕ್ಕೆ ಹತ್ತಿರವಾದ ಜನರಾಗಿದ್ದರೆಂಬುದು ಬಹಳ ಮುಖ್ಯವಾದ ಅಂಶವಾಗಿದೆ. ನಮ್ಮ ಚರಿತ್ರಕಾರರು ಉಲ್ಲೇಖಿಸುವ ಚರಿತ್ರೆಯ ಮಹಾನ್ ನಾಯಕರು ಇಲ್ಲಿ ಕಾಣೆಯಾಗಿ ಅಂಥ ಅರಸರ ಕೈ ಕೆಳಗಿದ್ದ ಸಾಮಾನ್ಯ ನಾಯಕರೆ ಇಲ್ಲಿ ಪ್ರಮುಖರಾಗಿ ಕಾಣಿಸಿಕೊಂಡಿದ್ದಾರೆ. ಅರಸ ಇಲ್ಲಿ ಮುಖ್ಯವಲ್ಲ. ಆದರೆ ಅರಸನಿಗೆ ಸುಖ ಕೊಟ್ಟ ಸೂಳೆ ಇಲ್ಲಿಯ ನಿರೂಪಣೆಯ ಕೇಂದ್ರವಾಗಿದ್ದಾಳೆ (ಯಗ್ಗಟಿ ಕೈಫಿಯತ್ತು). ಹಾಗೆಯೇ ಇತರರು ಕೂಡ. ಇದನ್ನು ಗಮನಿಸಿದಾಗ ನಮ್ಮ ಜನರು ತಮಗೆ ಹತ್ತಿರವಾಗಿದ್ದ ಜನರಿಗೆ ಮಾತ್ರ ಪ್ರತಿಕ್ರಿಯಿಸುವುದು ಸ್ಪಷ್ಟವಾಗುತ್ತದೆ. ಕುಮಾರ ರಾಮನ ಕುರಿತಾದ ಕೈಫಿಯತ್ತು ಇದಕ್ಕೆ ಅತ್ಯುತ್ತಮ ಉದಾಹರಣೆ. ಸ್ಥಳನಾಮ ದೊರೆತಿರುವ ಚಾರಿತ್ರಿಕ ವ್ಯಕ್ತಿಗಳಾದ ಬಾಗಡೆ ತಿಮ್ಮಪ್ಪ, ಎಲ್ಲಪ್ಪ ನಾಯಕ, ಯಗಟಿ ಮುಂಕಾರವರು ಜನಸಾಮಾನ್ಯರಿಗೆ ಪೂರ್ತಿಯಾಗಿ ಹತ್ತಿರದವರಾಗಿದ್ದರೆಂಬುದು ಗಮನಾರ್ಹ. ಜನಸಾಮಾನ್ಯರಿಗೆ ಇವರು ಆಳ್ವ ರಾಜರಿಗಿಂತ ಹತ್ತಿರ ವಾಗಿದ್ದರು. ಇವರು ಆಳುವ ಅರಸರ ಮತ್ತು ಜನರ ನಡುವೆ ಕೊಂಡಿಯಂತೆ ಕೆಲಸ ನಿರ್ವಹಿಸುತ್ತಿದ್ದರು. ಜನಸಾಮಾನ್ಯರ ಕಷ್ಟನಷ್ಟಗಳನ್ನು ಅರಿತು ಜನಪರ ಕೆಲಸಗಳಾದ ಕೆರೆ ತೋಡಿಸುವುದು, ಕೋಟೆ ನಿರ್ಮಾಣ ಮಾಡುವುದು ಮುಂತಾದ ಕಾರ್ಯಗಳನ್ನು ಮಾಡುತ್ತಿದ್ದರು. ಆದಕಾರಣ ಈ ಸಾಮಾನ್ಯ ವ್ಯಕ್ತಿಗಳು ಚಾರಿತ್ರಿಕ ವ್ಯಕ್ತಿಗಳಾಗಿ ಸ್ಥಳನಾಮಗಳಾಗಿ ಪರಿವರ್ತನೆಗೊಂಡದ್ದನ್ನು ಕೈಫಿಯತ್ತುಗಳಲ್ಲಿ ಕಾಣಬಹುದಾಗಿದೆ.

ಚರಿತ್ರೆಯು ಈ ನಾಯಕರ ಸಂಕಥನದಲ್ಲಿ ಉದಾರವಾದೀ ದೃಷ್ಟಿಕೋನ ಹೊಂದು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಚರಿತ್ರೆಯು ಎಲ್ಲಾ ನಾಯಕರನ್ನು ಇಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಕೊಂಡಾಡಲಾಗಿದೆ. ಚರಿತ್ರೆಯನ್ನು ಹೀಗೆ ಅಪ್ಪಿಕೊಳ್ಳುವ ಮತ್ತು ಒಪ್ಪಿಕೊಳ್ಳುವ ದೃಷ್ಟಿಕೋನವೊಂದು 18 ಮತ್ತು 19ನೇ ಶ.ದಲ್ಲಿ ತೀರ ಸಾಮಾನ್ಯವಾಗಿ ಕಾಣಿಸಿಕೊಂಡಿದೆ. 20ನೇ ಶ.ಮಾನದ ಆರಂಭದಲ್ಲಿ ಕಾಣಿಸಿಕೊಂಡು ಚಾರಿತ್ರಿಕ ಕಾದಂಬರಿಗಳಲ್ಲಿಯೂ ಇಂಥ ದೃಷ್ಟಿಕೋನದ ಕೆಲಸ ಮಾಡಿದೆ. ಗಳಗನಾಥರ 'ಕನ್ನಡಿಗರ ಕರ್ಮಕಥೆ' ದೇವುಡು ಅವರ 'ಮಹಾಬ್ರಾಹ್ಮಣ', 'ಮಹಾಕ್ಷತ್ರಿಯ', ಬಿ.ವೆಂಕಟಾಚಾರ್ಯರು ಅನುವಾದಿಸಿದ ಬಂಗಾಳಿ ಕಾದಂಬರಿಗಳೆಲ್ಲಾ ಇದಕ್ಕೆ ಅತ್ಯುತ್ತಮ ಉದಾಹರಣೆಗಳು. ಚರಿತ್ರೆಯ ಬಗೆಗೆ ಇಂಥ ಉದಾರವಾದೀ ಅ-ವಿಮರ್ಶಕ ದೃಷ್ಟಿಕೋನವೊಂದು ಯಾಕೆ ಕ್ರಿಯಾಶೀಲ ವಾಯಿತು ಎಂಬುದಕ್ಕೆ ಕಾರಣಗಳನ್ನು ಕಂಡುಕೊಳ್ಳಬೇಕು. ಬ್ರಿಟೀಷ್ ವ್ಯವಸ್ಥೆಯು ತನ್ನ ಆಳ್ವಿಕೆಯ ಸಂದರ್ಭದಲ್ಲಿ ತನ್ನ ಸಂಸ್ಕೃತಿ ಮತ್ತು ಚರಿತ್ರೆಯನ್ನು ಮುಂದಿಡುತ್ತದೆ. ಮತ್ತು ಅದನ್ನು ಒಪ್ಪಿಕೊಳ್ಳುವಂತೆ ಪ್ರೇರಣೆ ನೀಡುತ್ತದೆ. ಈ ಅರ್ಥದಲ್ಲಿ ಬ್ರಿಟೀಷ ಆಡಳಿತವು ಆ ಸಂಸ್ಕೃತಿಯ ಸಮರ್ಥನೆಯಾಗಿ ಕ್ರಿಯಾಶೀಲವಾಗುತ್ತದೆ. ರಾಷ್ಟ್ರೀಯ ಚಳುವಳಿಯು ಇಂಥ ನಂಬುಗೆಗಳನ್ನು ಪ್ರಶ್ನಿಸುತ್ತದೆ. ಮತ್ತು ಆಳುವವರ ಸಂಸ್ಕೃತಿಗೆ ವಿರುದ್ಧವಾಗಿ ತನ್ನ ಸಂಸ್ಕೃತಿಯನ್ನು ಎತ್ತಿಹಿಡಿಯುತ್ತದೆ.

ಈ ಎತ್ತಿ ಹಿಡಿಯುವ ಪ್ರಕ್ರಿಯೆ ಯಾವಾಗಲೂ ಉದಾರವಾಗಿ ನಡೆಯುತ್ತದೆ. ಒಂದರ್ಥದಲ್ಲಿ ಇಂಥ ಕೆಲಸಗಳು ಆಳುವ ಸಂಸ್ಕೃತಿಯ ವಿರುದ್ಧ ನಡೆಸಿದ ಆಳವಾದ ಪ್ರತಿಭಟನೆಯೇ ಆಗಿರುತ್ತದೆ. ಕೃತಿಯಕರ್ತೃಗಳ ನಿರೂಪಕರು ಹೀಗೆ ಚರಿತ್ರೆಯನ್ನು ಉದಾರಗೊಳಿಸುವುದರ ಮೂಲಕ ಬ್ರಿಟೀಷ್ ವ್ಯವಸ್ಥೆಗೆ ಪ್ರತಿಕ್ರಿಯಿಸಿದ್ದಾರೆ ಎಂಬುದು ಸಧ್ಯಕ್ಕೆ ಮುಖ್ಯವಾದ ವಿಚಾರವಾಗಿದೆ.

ಸಾಮಾಜಿಕ ಸ್ಥಳನಾಮಗಳಲ್ಲಿ ಈ ಕೆಳಗಿನ ಹೆಸರುಗಳು ಮತ್ತು ಘಟನೆಗಳು ಕಾಣಸಿಗುತ್ತವೆ.

ಅಜಾಪುರಿ,ನಾಗಲಿಂಗಯ್ಯ,ಮಲ್ಲದೇವರು; ಮಾದವಭಳ್ಳರು, ಪರಿದತ್ತ ಘಟನೆಯಲ್ಲಿ ನಿರೂಪಿತವಾಗಿರುವ ಸಾಮಾನ್ಯ ಜನವರ್ಗ, ಹತ್ತಿಬೆಳಗಲ್ಲು ಕೈಫಿಯತ್ತಿನಲ್ಲಿ ನಿರೂಪಿತವಾಗಿರುವ ಉಡುಮ್ಮರೂಪಿ ರಂಗನಾಥನ ಸ್ಥಳ ನಾಮಗಳಲ್ಲಿ ಅಲ್ಲದೆ ಹತ್ತಿಬೆಳಗಲ್ಲು ನಾಮದಲ್ಲಿ ಸಾಮಾನ್ಯ ಜನವರ್ಗದ ಜೀವನ ಮತ್ತು ವ್ಯವಹಾರಗಳು ಪರಿಚಿತವಾಗುತ್ತವೆ. ಇದನ್ನು ಗಮನಿಸಿದಾಗ ಎರಡು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಇಲ್ಲಿ ಕಾಣಿಸಿಕೊಂಡ ವ್ಯಕ್ತಿಗಳು ಜನರಿಗೆ ಉಪಯುಕ್ತವಾಗಿವೆ. ಜನಸಾಮಾನ್ಯರಿಗೆ ಊರು ನಿರ್ಮಾಣ ಕಾಲುವೆ ನಿರ್ಮಾಣ, ಮಂತ್ರವಾದಿಗಳಿಂದ ಜನರ ರಕ್ಷಣೆ ಮಾಡುವುದು , ಇತ್ಯಾದಿಗಳು ಜನರಿಗೆ ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಂಡ ಕೆಲಸಗಳನ್ನು ಹಿನ್ನೆಲೆಯಾಗುಳ್ಳ ಸ್ಥಳ ನಾಮಗಳಾಗಿವೆ. ಈ ಉಪಯುಕ್ತತೆಯು ಕೃಷಿ ಸಂಬಂಧಿ

ಯಾಗಿದೆ ಎಂಬುದನ್ನು ಇಲ್ಲಿಯೇ ಗಮನಿಸಬಹುದು. ಇನ್ನೂ ಕೆಲ ಸ್ಥಳನಾಮಗಳು ವ್ಯಕ್ತಿಯೊಬ್ಬನ ಅಸಾಮಾನ್ಯ ಗುಣಗಳನ್ನು ಗಮನದಲ್ಲಿರಿಸಿಕೊಂಡು ಸೃಷ್ಟಿಯಾಗಿರುವುದು ಕಂಡು ಬರುತ್ತದೆ. ಈ ಅಸಾಮಾನ್ಯತ್ವ ಜನರು ಸ್ವೀಕರಿಸಿಕೊಂಡ ಮೌಲ್ಯ ವಿನ್ಯಾಸಕ್ಕಿಂತ ಭಿನ್ನವೂ ಎಷ್ಟೋ ಬಾರಿ ವಿರುದ್ಧವೂ ಆಗಿರುವುದಾಗಿ ಕಾಣುತ್ತದೆ. ಉದಾಹರಣೆ ಗೃಹಸ್ಥ ಆಶ್ರಮವನ್ನು ಒಪ್ಪಿಕೊಂಡ ಜನಗಳ ದೃಷ್ಟಿಯಿಂದ ಅದನ್ನು ವಿರೋಧಿಸಿದ ಸನ್ಯಾಸದ ಕಲ್ಪನೆಯು ಮುಖ್ಯವಾಗುತ್ತದೆ. ಅದಕ್ಕಾಗಿ ಸ್ವಾಮಿಗಳ ಹೆಸರಿನಲ್ಲಿ ಊರು ಕೇರಿಗಳು ನಿರ್ಮಾಣಗೊಳ್ಳುತ್ತವೆ. ಊರಿನಲ್ಲಿರುವ ಜನಗಳಿಗೆ ಕಾಡಿನಲ್ಲಿ ಬದುಕುವ ಜನರು ಬೇರೆಯಾಗಿ ಕಾಣಿಸಿಕೊಳ್ಳುತ್ತಾರೆ. ಹೀಗೆ ಸಂಸ್ಕೃತಿಯು ಸ್ವೀಕೃತ ಮೌಲ್ಯಗಳಿಗಿಂತ ಭಿನ್ನವಾಗಿರುವ ಮೌಲ್ಯಗಳನ್ನು ಪ್ರತಿಪಾದಿಸುವ ಜನರ ಮೇಲೆ ಪ್ರಭಾವ ಬೀರಿದ್ದಾರೆ. ಮತ್ತು ಅಂಥ ವ್ಯಕ್ತಿಗಳ ಹೆಸರುಗಳನ್ನು ಜನರು ಊರುಗಳಿಗೆ ಇರಿಸಿಕೊಂಡಿದ್ದಾರೆ. ಸಂಸ್ಕೃತಿಯೊಂದು ಯಾವುದನ್ನು ಪರಿಗ್ರಹಿಸುತ್ತದೆ ಮತ್ತು ತಿರಸ್ಕರಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಬಗೆಯ ಸಂಕಥನಗಳು ಮುಖ್ಯವಾಗುತ್ತವೆ.

ಪೂರ್ವದಲ್ಲಿದ್ದ ನಾಮಕ್ಕೆ ಬದಲಾಗಿ ಪ್ರತಿನಾಮಗೊಂಡ ಸ್ಥಳನಾಮಗಳ ಸುಮಾರು 18 ಉದಾಹರಣೆಗಳು ಕೈಫಿಯತ್ತುಗಳಲ್ಲಿ ಸಿಗುತ್ತವೆ. ಪ್ರತಿ ನಾಮಕರಣವಾದ ನಂತರ ಮೂಲ ನಾಮ ಮರೆಯಾಗಿ ಪ್ರತಿನಾಮ ಜಾರಿಯಲ್ಲಿ ಬರುತ್ತಿದ್ದು ಸಾಮಾನ್ಯವಾದರೂ ಹಿಂದಿನ ನಾಮಗಳೂ ಸಹಿತ ಜನಮನದಲ್ಲಿ ಅಚ್ಚೊತ್ತಿಕೊಂಡಿರುವ ಕಾರಣ ಆ ಹೆಸರುಗಳೂ ಪ್ರತಿನಾಮಗಳೊಂದಿಗೆ ಜೊತೆಯಲ್ಲಿ ಉಳಿಯುತ್ತವೆ. ಇಂಥ ಮೂಲ ನಾಮಗಳು ಪ್ರತಿ ನಾಮಗಳನ್ನು ಯಾಕಾಗಿ ಹುಟ್ಟು ಹಾಕಿಕೊಂಡವು ಎಂಬುದನ್ನು ಸಹಿತ ಆ ಕಾಲದ ಅರಸುತನ, ಸಂಸ್ಕೃತೀಕರಣ ಜನಸಾಮಾನ್ಯರ ವ್ಯವಹಾರಗಳು ಕಾರಣವಾಗುತ್ತವೆ. ಎಂಬ ಅಂಶವನ್ನು ಈ ಉದಾಹರಣೆಗಳ ಮೂಲಕ ಕಂಡು ಕೊಳ್ಳಬಹುದಾಗಿದೆ.

ಅಳರಸರ ಆಳ್ವಿಕೆಯ ಫಲವಾಗಿ ಚಂಡಿಗೌಡನ ಹಳ್ಳಿಯು ದೇವರಾಜ ಮಹಿಪಾಲಕನಿಂದ ದೇವರಾಜಪುರವಾಗುವುದು, ತಿಮ್ಮಗೊಂಡನಹಳ್ಳಿ ರಾಜನೀತಿ ಪಟ್ಟಣವಾಗುವುದು, ಬಿದುರೂರು ಹೈದರನಗರವಾಗುವುದು ಕಂಡುಬರುತ್ತದೆ.

ಪ್ರಾಕೃತಿಕ ಮೂಲದಿಂದಲೂ ಪ್ರತಿನಾಮಗಳು ಬರಬಹುದಾಗಿದೆ ದಕ್ಷಿಣ ಗೋವರ್ಧನ ಗಿರಿಗೆ ಕಮಲಾಚಲ ಹೆಸರು ಬರಲು ಕಾರಣ ಕಮಲದ ದಳದಂತೆ ಸುತ್ತುಗೊಂಡಿರುವ ಬೇರೆ ಬೇರೆ ಪರ್ವತಗಳ ನೈಸರ್ಗಿಕ ರಚನೆಯಿಂದ ಅದೇರೀತಿ ವಂಗಾಡಿಗೆ ಕಲ್ಲುಗುಂಡು ಎಂಬ ಪ್ರತಿನಾಮ ಬಂದಿದೆ.

ದೇಶ ನಾಮಗಳು ಸ್ಥಳೀಯ ನಾಮಗಳ ಮೇಲೆ ಒತ್ತಡ ಗೊಂಡು ಪ್ರತಿ ನಾಮಗೊಳ್ಳುವುದಕ್ಕೆ ವಂಗದೇಶ ನಾಮವು 'ವಂಗಾಡಿ'ಯಾದದ್ದು, ಬಲಕುಂದಿಗೆ ಕಂತಳ 'ಕುಂತಳನಗರ' ನಾಮ ಬಂದದ್ದು ಸಾಕ್ಷಿಯಾಗಿವೆ. ಈ ದೇಶ ನಾಮಗಳೂ ಸಹಿತ ಆಳರಸರ ಆಳ್ವಿಕೆಯ ಫಲ ಎಂಬುದು ಗಮನಾರ್ಹ. ಏಕೆಂದರೆ ಸ್ಥಳೀಯ ಜನರು ಮೂಲ ಹೆಸರುಗಳಿಗೆ ಬದ್ಧರಾಗಿರುತ್ತಾರೆ. ಎಂಬುದು ಸಾಮಾನ್ಯವಾದ ಅಂಶವಾಗಿದೆ.

ಪ್ರತಿನಾಮಗೊಳ್ಳುವುದಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಸಂಸ್ಕೃತೀಕರಣಕ್ಕೆ ಒಳಗಾಗುವುದು. ಈ ರೀತಿಯ ಸಂಸ್ಕೃತೀಕರಣವೂ ಸಹಿತ ಆಳುವ ವರ್ಗ ಮತ್ತು ಮೇಲ್ವರ್ಗದ ಹೇರಿಕೆಯಾಗಿ ತೋರುತ್ತದೆ. ಏಕೆಂದರೆ ಆ ಕಾಲದ ಜನ ವರ್ಗಕ್ಕೆ ಶಿಕ್ಷಣ ಮತ್ತು ನಾಗರಿಕ ಸೌಲಭ್ಯಗಳಿದ್ದಿಲ್ಲವೆಂಬುದು ಗಮನಾರ್ಹವಾದುದು. ಈ ಕೆಳಗಿನ ಸ್ಥಳ ನಾಮಗಳು ಈ ಅಂಶಗಳನ್ನು ಎತ್ತಿ ಹೇಳುತ್ತವೆ. ಬಸರೂರು ನಾಮವು 'ವಸುಧಾರೆ'ಯಾದುದು ಸಂಸ್ಕೃತೀಕರಣ ಹೊಂದಿದ್ದಕ್ಕೆ ನಿದರ್ಶನ. 'ವಸು' ಎಂದರೆ ಸಂಸ್ಕೃತದಲ್ಲಿ ಚಿನ್ನವೆಂದೂ 'ಧಾರ' ಎಂದರೆ ನೀರು ಅಥವಾ ಮಳೆಯೆಂದರ್ಥ. ಅದೇ ರೀತಿ ಹಾಡುವಳ್ಳಿಗೆ ಪ್ರತಿನಾಮ ಸಂಗೀತ ಪುರವು ಸಹಜನಾಮವಾಗಿ ಕಂಡು ಬಂದರೂ ಸಂಸ್ಕೃತೀಕರಣಗೊಂಡದ್ದರ ಸೂಚನೆಯಾಗಿದೆ. ಮೂಲದಲ್ಲಿ ಕಾಟಗೊಂಡನಹಳ್ಳಿಯಾಗಿದ್ದ ನಾಮವು ಭಟ್ಟರು ಬಂದು ವಾಸಿಸುವುದರ ಕಾರಣ ಭಟ್ಟರಹಳ್ಳಿಯಾಗಿ ಮೇಲ್ವರ್ಗ ಸೂಚಕ ಪ್ರತಿನಾಮವಾಗಿ ಕಾಣಿಸಿಕೊಂಡಿತು. ಗೋಕರ್ಣಕ್ಷೇತ್ರ ಮಹಾಬಲೇಶ್ವರ ನಾಮವು ವ್ಯಕ್ತಿ ಪ್ರಧಾನತೆಯನ್ನು ಹೇಳುವವರ ಜೊತೆಗೆ ಸಂಸ್ಕೃತೀಕರಣ ಗೊಂಡದ್ದನ್ನು ಸೂಚಿಸುವುದು. ಮೇಲಿನ ಇಂಥ ಪ್ರತಿನಾಮಗಳಿಗೆ ಅಪವಾದವಾಗಿರುವ ಒಂದು ಪ್ರತಿ ನಾಮವೆಂದರೆ ಹರಿಹರವು ಹಿರೆಹಾಳು ಆದದ್ದು. ಅಲ್ಲದೆ ಹಿರೆಕೆರೆಯು ಒಡೆದು ಹರಿಹರವನ್ನು ಸರ್ವನಾಶ ಮಾಡಿದ ಕಾರಣ ಹಿರೆಹಾಳು ಎಂದಾಯಿತು.

ಜನಸಾಮಾನ್ಯರ ವ್ಯಾಪಾರ ವ್ಯವಹಾರಗಳಲ್ಲಿಯ ಮೋಸಗಾರಿಕೆಯ ಘಟನೆಯು ಪ್ರತಿನಾಮವಾಗಬಹುದೆಂದು ಬಿಜಗಲ್ಲಿಗೆ ಪ್ರತಿನಾಮ 'ಹತ್ತಿಬೆಳಗುಲ್ಲ' ನಾಮವು ಹೇಳುತ್ತದೆ. ಹೀಗೆ ಪ್ರತಿನಾಮಗೊಂಡ ವಿವಿಧ ನೆಲೆಗಳ ಬಗೆಗೆ ಮಾಹಿತಿಯನ್ನು ಬಿಟ್ಟುಕೊಡುವ ಸಾಕಷ್ಟು ಕಾರಣಗಳನ್ನು ಕೈಫಿಯತ್ತುಗಳು ತೋರ್ಪಡಿಸುತ್ತವೆ.

ಕೆಲವು ಸ್ಥಳನಾಮಗಳು ಸಂಕೀರ್ಣ ಭಾಗದಲ್ಲಿ ಅಡಕಗೊಳ್ಳುತ್ತವೆ. ಏಕೆಂದರೆ ಅವು ಯಾವ ಪೌರಾಣಿಕ ಚಾರಿತ್ರಿಕ ವರ್ಗಕ್ಕೆ ಸೇರದೆ ಜಾತಿ ಪ್ರಧಾನವಾಗಿಯೂ ಪ್ರಾಣಿ ಪಕ್ಷಿಗಳಿಗೆ ಸಂಬಂಧಿಸಿದಂತೆಯೂ ಸ್ಥಳ ನಾಮಗೊಂಡಿವೆ. ಅಚಲರು ನಾಮವು ಜಾತಿ ಪ್ರಧಾನತೆಯನ್ನು ಮದಕರಿ, ಕಪ್ಪಿಕಲ್ಲು, ಹಂಸತೀರ್ಥ, ಹುಲಿಗನಘಟ್ಟ, ಸ್ಥಳ ನಾಮಗಳು ಪ್ರಾಣಿ ಪಕ್ಷಿ ಪ್ರಧಾನತೆಯನ್ನು ತೋರುತ್ತವೆ. ಮತ್ತು ಆ ಮೂಲಕ ಪ್ರಾಕೃತಿಕ ಮೂಲದ ಸ್ಥಳ ನಾಮಗಳಿಗೆ ಹೋಲಿಸಲ್ಪಡುತ್ತವೆ.

4.2: ಅಧ್ಯಯನದ ಮುಖ್ಯಾಂಶಗಳು:

ಈ ಸ್ಥಳನಾಮಗಳ ಅಧ್ಯಯನಕ್ಕೆ ಆಕರವಾಗಿ ಡಿ.ಕೆ.ಮೆಕೆಂಜಿ ಸಂಗ್ರಹಿಸಿದ ಕೈಫಿಯತ್ತುಗಳನ್ನು ಮಾತ್ರ ಆಧರಿಸಿಕೊಳ್ಳಲಾಗಿದೆ. ಈ ಅಧ್ಯಯನವನ್ನು ಕೈಫಿಯತ್ತುಗಳ ಪರಿಚಯದಿಂದ ಹೊರಟು, ಅವುಗಳ ಸಂಗ್ರಹ ಕಾರ್ಯ ಪ್ರಕಟಣೆ ಕೆಲಸಗಳು ಮತ್ತು ಅಧ್ಯಯನದ ಒಟ್ಟು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಒಟ್ಟು ಕೈಫಿಯತ್ತುಗಳ ನಿರೂಪಕರನ್ನು ಅವರ ಜಾತಿ ಮತವನ್ನು, ನಿರೂಪಣೆ ಮಾಡಿದ ಕಾಲ ಮುಂತಾದ ಎಲ್ಲಾ ವಿವರಗಳನ್ನು ಪಟ್ಟಿ ಮಾಡಿಕೊಳ್ಳಲಾಗಿದೆ. ಇದು ಅಧ್ಯಯನದ ಪ್ರಾಥಮಿಕ ಹೆಜ್ಜೆಯೂ ಹೌದು.

ಅನಂತರ ಕೈಫಿಯತ್ತುಗಳ ಸಂಗ್ರಹ ಕಾರ್ಯದ ಸಾಂಸ್ಕೃತಿಕ ನೆಲೆಗಳನ್ನು ರಾಷ್ಟ್ರೀಯ ಚಳುವಳಿಯ ಹಿನ್ನೆಲೆಯಲ್ಲಿ ಮತ್ತು ಒಟ್ಟು ನಿರೂಪಕರ ಸಾಮಾಜಿಕ ಜೀವನದ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ. ರಾಷ್ಟ್ರೀಕರಣದ ಪ್ರಭಾವದಿಂದ ವಸಾಹತು ಶಾಹಿಯ ದಟ್ಟಹೆಣಿಕೆಯಿಂದ ಮೇಲ್ವರ್ಗದ ಜನ ಸಾಮಾಜಿಕ ಸ್ಥಿತ್ಯಂತರಕ್ಕೆ ಒಳಪಟ್ಟರು. ಈ ಜನ ಪಾಶ್ಚಾತ್ಯ ನಾಗರಿಕತೆಗೆ ಒಗ್ಗಿದ, ಈ ಕಡೆ ತಾನೇ ನಿರ್ಮಿಸಿಕೊಂಡ ಊಳಿಗಮಾನ್ಯ ಪದ್ಧತಿ ಮತ್ತು ಖಾಸಗಿ ಭೂಒಡೆತನದ ಫಲವಾಗಿ ಜನಸಾಮಾನ್ಯ ವರ್ಗದಿಂದ ದೂರಾಗಿ ಉದೀಯಮಾನ ಮಧ್ಯಮ ವರ್ಗವಾಗಿ ಕಾಣಿಸಿಕೊಂಡರು. ಶೇಕಡ 60 ಕೈಫಿಯತ್ತುಗಳನ್ನು ನಿರೂಪಣೆ ಮಾಡಿದವರೆಲ್ಲರೂ ಈ ವರ್ಗಕ್ಕೆ ಸೇರಿದ ಜನರಾಗಿದ್ದಾರೆ. ಒಂದರ್ಥದಲ್ಲಿ ಕೈಫಿಯತ್ತುಗಳು ಶಿಷ್ಟ ಅಥವಾ ಜನಪ್ರಿಯ ವರ್ಗದ ಸೃಷ್ಟಿಯಾಗಿವೆ ಎಂಬ ಸ್ಪಷ್ಟ ತೀರ್ಮಾನಕ್ಕೆ ಬರಲಾಗಿದೆ.

ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳ ನಾಮಗಳ ಅಧ್ಯಯನಕ್ಕೆ ಹೊರಟಾಗ ಅವುಗಳನ್ನು ವಿಂಗಡಿಸಿಕೊಳ್ಳುವುದು ಅಧ್ಯಯನದ ಉದ್ದೇಶದಿಂದ ಸೂಕ್ತ ಮತ್ತು ಅನಿವಾರ್ಯವಾಗಿ ತೋರಿತು. ಆದರೆ ಈ ಹಿಂದೆ ಪ್ರಕಟವಾಗಿರುವ ಆಕರ ಗ್ರಂಥಗಳು ಕೈಫಿಯತ್ತುಗಳನ್ನು ಪ್ರಾದೇಶಿಕವಾಗಿ ವರ್ಗೀಕರಿಸಿಕೊಂಡಿದ್ದಾರೆ. ಆದರೆ ಇವುಗಳು ರಚನೆಯಾದ ಕಾಲವನ್ನು ಗಮನಿಸಿಕೊಂಡರೆ ಸಾಮಾಜಿಕ ಸ್ಥಿತ್ಯಂತರಕ್ಕೆ ಒಳಗಾದ ಜನವರ್ಗದ ಪ್ರತಿಕ್ರಿಯೆಯಾಗಿ ಕಂಡುಬರುತ್ತದೆ. ಮತ್ತು ಅವುಗಳು ಉದೀಯಮಾನ ಮಧ್ಯಮ ವರ್ಗದ ಸೃಷ್ಟಿ ಎಂಬುದು ನಿಸ್ಸಂದೇಹ ಅಲ್ಲದೆ ಎಲ್ಲಾ ಸ್ಥಳನಾಮಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವ ದೃಷ್ಟಿಕೋನದಿಂದ ಪೌರಾಣಿಕ, ಚಾರಿತ್ರಿಕ, ಧಾರ್ಮಿಕ ಮತ್ತು ಸಾಮಾಜಿಕವಾಗಿ ವ್ಯಕ್ತಿ, ಘಟನೆ ಮತ್ತು ಸ್ಥಳ ಪ್ರಧಾನದ ಹಿನ್ನೆಲೆಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಏಕೆಂದರೆ ಕೈಫಿಯತ್ತುಗಳ ಒಳಗಡೆ ಪೌರಾಣಿಕ, ಚಾರಿತ್ರಿಕ ಮತ್ತು ಸಾಮಾಜಿಕ ನೆಲೆಗಳಿವೆ.

ಈ ಮೇಲಿನ ವರ್ಗೀಕರಣ ಕ್ರಮದಲ್ಲಿ ಕೈಫಿಯತ್ತುಗಳಲ್ಲಿ ನಿರೂಪಿತವಾಗಿರುವ ಸ್ಥಳನಾಮಗಳನ್ನು ಅಲ್ಲಿ ನಿರೂಪಿತವಾಗಿರುವಂತೆ ವಿವರಿಸಿಕೊಳ್ಳಲಾಗಿದೆ. ಈ ವಿವರಣೆಯ ಮೂಲಕ ಸ್ಥಳ ನಾಮ ನಿರೂಪಣೆಯ ಸೈದ್ಧಾಂತಿಕ ನೆಲೆಗೆ ತಲುಪಲಾಗಿದೆ.

ಇಲ್ಲಿಯ ಪೌರಾಣಿಕ ವ್ಯಕ್ತಿ ಪ್ರಧಾನ, ಪೌರಾಣಿಕ ಘಟನಾ ಪ್ರಧಾನ ಮತ್ತು ಪೌರಾಣಿಕ ಸ್ಥಳ ಪ್ರಧಾನ ಸ್ಥಳ ನಾಮಗಳು ರಾಮಾಯಣ, ಮಹಾಭಾರತ, ಭಾಗವತ ಚರಿತ್ರೆಯನ್ನು ಕಥೆ ಘಟನೆಗಳನ್ನು ಪೌರಾಣಿಕ ಕಥೆಗಳನ್ನಾಧರಿಸಿ ಸ್ಥಳನಾಮ ನಿರೂಪಗೊಂಡಿವೆ. ಈ ಬಗೆ ನಿರೂಪಣೆಗಳು ಹೊಂದಿರುವ ಸೈದ್ಧಾಂತಿಕ ನೆಲೆಗಳನ್ನು ಚಾರಿತ್ರಿಕವಾಗಿ ಅಧ್ಯಯನದಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ. ವಸಾಹತು ಶಿಕ್ಷಣ ನಿರ್ಮಾಣ ಮಾಡಿದ ಉದೀಯ ಮಾನ ಮಧ್ಯಮ ವರ್ಗವು ರಾಷ್ಟ್ರೀಯ ಚಳುವಳಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾ ಹೇಗೆ ವಸಾಹತೀಕರಣದ ವಿರುದ್ಧ ಹೋರಾಟ ನಡೆಸಿತೆಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗಿದೆ. ಕೈಫಿಯತ್ತುಗಳ ನಿರೂಪಕರು ಭಾರತೀಯ ಪುರಾಣಗಳನ್ನು ಲೌಕಿಕಕ್ಕೆ ಅನ್ವಯಗೊಳಿಸುತ್ತಾ, ಚರಿತ್ರೆಯ ಬಗೆಗೆ ಉದಾರವಾಗಿರುತ್ತ, ವಸಾಹತೀಕರಣ ಪ್ರಕ್ರಿಯೆಗೆ ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ವಿಶ್ಲೇಷಣೆಯಲ್ಲಿ ಸಮರ್ಥಿಸಲಾಗಿದೆ.

ಇಲ್ಲಿಯ ಚಾರಿತ್ರಿಕ ವ್ಯಕ್ತಿ ಪ್ರಧಾನ, ಚಾರಿತ್ರಿಕ ಘಟನಾ ಪ್ರಧಾನ ಮತ್ತು ಚಾರಿತ್ರಿಕ ಸ್ಥಳ ಪ್ರಧಾನ ಸ್ಥಳ ನಾಮಗಳು ಸಾಮಾನ್ಯ ವರ್ಗಕ್ಕೆ ಪೂರ್ತಿ ಹತ್ತಿರವಾಗಿದ್ದು ಮತ್ತು ಆಳರಸರು ಜನರ ಮಧ್ಯ ಕೊಂಡಿಯಂತೆ ಕೆಲಸ ಮಾಡುತ್ತಿದ್ದ ವ್ಯಕ್ತಿ ಘಟನೆಗಳನ್ನಾಧರಿಸಿ ಇಂಥ ಸ್ಥಳ ನಾಮಗಳು ನಿರೂಪಗೊಂಡಿವೆ. ಇವು ಹೆಚ್ಚು ಕೃಷಿ ಸಂಬಂಧಿಯಾದ ಸ್ಥಳ ನಾಮಗಳಾಗಿವೆ. ಇಲ್ಲಿಯ ಘಟನಾ ಪ್ರಧಾನ ಚಾರಿತ್ರಿಕ ಸ್ಥಳ ನಾಮಗಳು ಚರಿತ್ರೆಯನ್ನು ಕಟ್ಟಿ ಕೊಡುವಲ್ಲಿ ನೆರವಾಗುತ್ತವೆ.

ಸಾಮಾಜಿಕ ವ್ಯಕ್ತಿ, ಸಾಮಾಜಿಕ ಘಟನೆ ಮತ್ತು ಸಾಮಾಜಿಕ ಸ್ಥಳ ಪ್ರಧಾನ ಸ್ಥಳನಾಮಗಳು ಸಾಮಾನ್ಯ ಜನರ ಜೀವನ ವ್ಯವಹಾರಗಳು ಸಾಮಾನ್ಯ ಜನರೂ ಸಾರ್ವಜನಿಕರಿಗಾಗಿ ಮಾಡುವ ಉಪಯುಕ್ತ ಕೆಲಸಗಳನ್ನು ಆಧರಿಸಿ ನಿರೂಪಗೊಂಡ ಸ್ಥಳನಾಮಗಳಾಗಿವೆ. ಇಲ್ಲಿಯ ಪ್ರತಿ ನಾಮಗಳು ಇದಕ್ಕೆ ವಿರುದ್ಧವಾಗಿ ಕಂಡುಬರುತ್ತವೆ. ಅವು ಆಳರಸರ ಪ್ರಭಾವದಿಂದ ಸಂಸ್ಕೃತೀಕರಣದಿಂದ ದೇಶನಾಮದ ಪ್ರಭಾವದಿಂದ ಬಂದದ್ದಾಗಿವೆ. ಸಂಕೀರ್ಣದಲ್ಲಿ ನಿರೂಪವಾಗಿರುವ ಸ್ಥಳ ನಾಮಗಳು ಜಾತಿ ಪ್ರಧಾನ ಪ್ರಾಣಿ ಪಶು ಪಕ್ಷಿ ಮೂಲದಿಂದ ಸ್ಥಳನಾಮಗೊಂಡಿವೆ. ಎಂಬುದನ್ನು ಸಾಬೀತು ಪಡಿಸುತ್ತವೆ.

ಹೀಗೆ ಕೈಫಿಯತ್ತುಗಳ ಪ್ರಸ್ತುತ ಅಧ್ಯಯನದಲ್ಲಿ ಸ್ಥಳನಾಮಗಳನ್ನು ಸಾಂಸ್ಕೃತಿಕವಾಗಿ ವಿಶ್ಲೇಷಿಸಲಾಗಿದೆ. ಇಂಥ ವಿಶ್ಲೇಷಣೆಗಳು ನಮ್ಮ ಚರಿತ್ರೆಯ ಬಗೆಗೆ ಹೊಸ ಹೊಳಹುಗಳನ್ನು ಕೊಟ್ಟು ರಾಷ್ಟ್ರೀಯತೆಯ ಕುರಿತಾಗಿ ಹೊಸ ಒಳನೋಟಗಳನ್ನು ನೀಡಬಲ್ಲವು ಎಂದು ಭಾವಿಸಲಾಗಿದೆ. ಸ್ಥಳನಾಮಗಳ ಹಾಗೆ ಕೈಫಿಯತ್ತುಗಳಲ್ಲಿಯ ಇತರ ವಿವರಗಳ ಕುರಿತು ಅಧ್ಯಯನ ನಡೆದಾಗ ಈ ಕುರಿತು ಇನ್ನಷ್ಟು ಬೆಳಕು ಚೆಲ್ಲಲು ಸಾಧ್ಯ ಎಂದು ಹೇಳಬಹುದು.

ಭಾಗ5 : ಅನುಬಂಧ

5·1 : ಸ್ಥಳನಾಮ ಕುರಿತ ಕೆಲವು ಪತ್ರಗಳು

5·2 : ಗ್ರಂಥಋಣ

5·1 ಸ್ಥಳನಾಮ ಕುರಿತ ಕೆಲವು ಪಠ್ಯಗಳು:

ಈ ಕೆಳಗಿನ ಕೆಲವು ಸ್ಥಳನಾಮ ಪಠ್ಯಗಳನ್ನು ಅಂತೂ ಕೈಫಿಯತ್ತುಗಳಲ್ಲಿ ನಿರೂಪಿಸಿಕೊಂಡ ಮಾದರಿಯಲ್ಲಿ ಕೊಡಲಾಗುತ್ತದೆ. ಇದರ ಮೂಲಕ ಅಂತೂ ನಿರೂಪಕರ ಭಾಷೆಯ ಉಚ್ಚಾರಣೆ ಮತ್ತು ಭಾಷಾ ಪ್ರೌಢಿಮೆಗಳನ್ನು ಕಂಡುಕೊಳ್ಳಬಹುದಾಗಿದೆ. ಅಲ್ಲದೆ ಈ ಪಠ್ಯಗಳನ್ನು ಓದಿಕೊಳ್ಳುವುದರ ಮೂಲಕ ಈ ಪಠ್ಯಗಳು ನಿರೂಪಕರೊಂದ ಬಗೆಯನ್ನು ಮೇಲ್ವರ್ಗದವರದೇ ಎಂಬ ತೀರ್ಮಾನಕ್ಕೆ ಬರಬಹುದಾಗಿದೆ. ಏಕೆಂದರೆ ವಾಕ್ಯ ಸಮೂಹದಲ್ಲಿ ಅನೇಕ ಸಂಸ್ಕೃತ ಶಬ್ದಗಳು ಧಾರಾಳವಾಗಿ ಬಳಕೆಗೊಂಡಿವೆ:—

1) ಬಳ್ಳಾರಿಯ ನಾಮ (ಬಳ್ಳಾರಿಯ ಕೈಫಿಯತ್ತು)

'ಪಂಪಾಧಿನಾಥನಾದ ಶ್ರೀ ವಿರೂಪಾಕ್ಷೇಶ್ವರ ಕ್ಷೇತ್ರಕ್ಕೆ ಪೂರ್ವಭಾಗದಲ್ಲಿ ಮೂರು ಗಾವುದದ ಮೇಲೆ ಕೇವಲ ಅರಣ್ಯವಾಗಿದ್ದ ಸ್ಥಳದಲ್ಲಿ ಕೆಲವು ಪರ್ವತಗಳುಂಟು. ಈ ಪ್ರದೇಶವು ಸ್ವಾಯಂಭುವ ಮನುವಿನ ಆದಿ ಕೃತಯುಗ ಮೊದಲಾಗಿ ಈ ಕಡೆಗೆ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷ (ಷು) ಷ ವೈವಸ್ವತ ಮನುವಿನ ಇಪ್ಪತ್ತೆಂಟನೆಯ ಮಹಾಯುಗದಲ್ಲಿ ಕೃತ ಯುಗ ಪರ್ಯಂತವೂ ಮನುಷ್ಯ ಸಂಚಾರವಿಲ್ಲದೆ, ವನವಾಸಿಗಳಿಗೆ ಇರುವ ಋಷಿಗಳಿಗೆ ಆಸ್ಪದವಾಗಿತ್ತು. ತ್ರೇತಾ ಯುಗದಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ದ್ವಾಪರದಲ್ಲಿ ಹಸ್ತಿನಾಪುರದ ರಾಜಧಾನಿಯ ರತ್ನಸಿಂಹಾಸನಾಧೀಶ್ವರರಾಗಿ ರಾಜ್ಯವಾಳಿದ ಚಂದ್ರವಂಶದ ಅರಸುಗಳು ಯಯಾತಿ ಸಂತತಿಯ ದುಷ್ಯಂತ ಮಹಾರಾಯ, ಈತನ ಮಗ ಭರತ, ಈ ಸಂತತಿಯವನಾದ ಶಂತನು ಚಕ್ರವರ್ತಿ, ಈತನ ಪೌತ್ರನಾದ ಪಾಂಡುರಾಯ, ಈತನ ಸಂಬಂಧಿಯಾದ ದುರ್ಯೋಧನ ಮಹಾರಾಯ, ಆ ತರುವಾಯ ಪಾಂಡುರಾಯನ ಪುತ್ರನಾದ ಧರ್ಮರಾಯನು ಹಸ್ತಿನಾಪುರ ಸಿಂಹಾಸನಾಧೀಶ್ವರನಾಗಿ ರಾಜ್ಯ ಮಾಡುವ ವೇಳೆಯಲ್ಲಿ ನರ್ಮದಾ ನದಿಗೆ ದಕ್ಷಿಣ ದೇಶದಲ್ಲಿ ತುಂಗಭದ್ರಾ ಮಹಾನದಿಗೆ ದಕ್ಷಿಣಕ್ಕೆ ಎರಡು ಹರದಾರಿಯಲ್ಲಿ ಇರುವ ಕುಂತಳನಗರವೆಂಬ ಪಟ್ಟಣದಲ್ಲಿ ಇದ್ದ ಚಂದ್ರಹಾಸರಾಯನು ಈ ಸೀಮೆಯ ಪ್ರಭುತ್ವ ಮಾಡುವ ವೇಳೆಯಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ ಬಳಾಸುರನೆಂಬ ಒಬ್ಬ ರಾಕ್ಷಸನು ಆಶ್ರಯ ಮಾಡಿಕೊಂಡು ಜೀವ ಕೋಟಿಗಳಿಗೆ ಬಹು ಉಪದ್ರವ ಮಾಡುತ್ತ ಇರಲಾಗಿ, ಸ್ವರ್ಗಲೋಕದಿಂದ ದೇವ ಕನ್ಯಗಳು ಇಚ್ಛಾ ವಿಹಾರದಲ್ಲಿ ವಿಹರಿಸುತ್ತ, ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರಲಾಗಿ, ಈ ಪರ್ವತದಲ್ಲಿ ವಾಸ ಮಾಡಿಕೊಂಡಿರುವ ಬಳಾಸುರನೆಂಬ ದೈತ್ಯನು ಆ ದೇವ ಕನ್ನಿಕೆಗಳನ್ನು ಕಂಡು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟದ್ದರಿಂದ ಆ ದೇವ ಕನ್ನಿಕೆಗಳು ದೇವಲೋಕಕ್ಕೆ ಹೋಗಿ ದೇವೇಂದ್ರನಿಗೆ ಮೊರೆ ಇಡಲಾಗಿ ಇಂದ್ರ ದೇವರು ಬಳಾಸುರನನ್ನು ವಧೆ ಮಾಡುವ ನಿಮಿತ್ತ ಭೂಲೋಕಕ್ಕೆ ಬಂದು ಬಳಾಸುರನ ಸಂಗಡ ಘೋರ ಯುದ್ಧವನ್ನು ಮಾಡಿ, ಅವನನ್ನು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಈ ಗುಡ್ಡಕ್ಕೆ ಬಳ್ಳಾರಿ (ಬಳಾರಿ) ಎಂಬ ನಾಮವು ಪ್ರಸಿದ್ಧ ಹೊಂದಿತು.'

* ಕರ್ನಾಟಕದ ಕೈಫಿಯತ್ತುಗಳು * ಎಂ.ಎಂ. ಕಲಬುರ್ಗಿ ಪು.524

3) <u>ಬಿದನೂರಿಗೆ ಹೈದರನಗರ ನಾಮವು</u> (ನೀರೋಗಾನಿ ಅಗ್ರಹಾರದ ಕೈಫಿಯತ್ತು—2)

ಆ ಸಮಯದಲ್ಲಿ ಚಿತ್ರದುರ್ಗದ ಪಾಳೇಗಾರನ ಕೂಡಿಕೊಂಡು ಬಹದರನು ಬಂದು ಬಿದನೂರು ತೆಗೆದುಕೊಂಡದ್ದು ಚಿತ್ರಭಾನು ಸಂವತ್ಸರದ ಮಾಘಮಾಸದ ಏಂಗೀ.. ಈಕೆಂಯು ಚಿತ್ರಭಾನು ಸಂವತ್ಸರದ ಏಂಗೀ ಅಳಿದಳು. ವೀರಮ್ಮಾಜಿ ಈ ನಗರದ ಸಂಸ್ಥಾನಕ್ಕೆ ಅಯ್ಯರಾಣಿಯು. ಆ ಬಳಿಕ ಹೈದರಲ್ಲಿಖಾನನು ವೀರಮ್ಮಾಜಿಯರನ್ನು ಕೈಸೆರೆ ಹಿಡಿದು, ಮದ್ದಗಿರಿಯೊಳಗೆ ಇಟ್ಟದ್ದು. ಬಿದನೂರಿಗೇ ಇದಕ್ಕೆ ಪೂರ್ವದ ಅರಸುಗಳು ಅಭಿಪ್ರಾಯವನ್ನು ತಿಳಿದು ಹೈದರನಗರವೆಂಬ ಹೆಸರಿಟ್ಟನು.

ಕರ್ನಾಟಕದ ಕೈಫಿಯತ್ತು: ಕಲಬುರ್ಗಿ ·ಎಂ·ಎಂ· ಪುಟ:166.

4) <u>ಬಾರಕನ್ಯಾಪುರ (ಬಾ</u>ರಕೂರು ಸಂಸ್ಥಾನ ಕೈಫಿಯತ್ತು):

ಬಾರಕೂರು ಅಂತ ಹೆಸರು ಬಂದಿರುವುದು ಏನೆಂದರೆ, ಈ ಪಟ್ಟಣಕ್ಕೆ ವಾರುಕನ್ಯಾ ಪುರವೆಂಬ ಹೆಸರು ಒಂದು, ವಾರಕೂಲಾವೆಂಬ ಹೆಸರು ಒಂದು— ಈ ಎರಡು ಹೆಸರು ಬಂದೇ ಅದು ಹೇಗೆಂದರೆ: ವಾರಕೂಲಾ ಇತಿೋ ಗ್ರಾಮೇೋ. ವಾರಕೂಲಾಖ್ಯಂ ಪುರಂ ಸಾಮುದ್ರತಟ ಸಂಯುಕ್ತ ಮಧ್ಯೇಖಂ ಬುದ್ಧಿಶಾಸಕ ದ್ವಾದಶಕಪ್ಪರ ಸಹಸ್ರಾರ್ಥ ಉರ್ವಶ್ಯಾದ್ಯಾ: ಸಮೇತ್ಯ ವೈ ಕುರ್ವಂತಿ ನಿಶಿ ಸಂಚಾರಂ ಕೂಲೇತ್ಯ ನಿತ: ಶುಭೆ ವಾರಕೂಲಂ ತತ: ಪ್ರೋಕ್ತಂ ಬಾಕನ್ಯಾಪುರಂ ತಥಾ ಈ ಪ್ರಕಾರ ಪುರಾಣ ಗ್ರಂಥ ವಿರುವುದರಿಂದ ಈ ಬಾರಕೂರಲ್ಲಿ ಇರುವ ಶಿವೇಶ್ವರ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಇರುವ ಸಿದ್ಧ ಸರಸ್ಸಿನ (ಸರಸ್ಸಿನ) ತೀರದಲ್ಲಿ ಪೂರ್ವದಲ್ಲಿ ಊರ್ವಶಿ ಮೊದಲಾದ ಹನ್ನೆರಡು ಮಂದಿ ಅಪ್ಸರ ಸ್ತ್ರೀಯರು ನಿತ್ಯದಲ್ಲಿ ನಿಶಾಕಾಲದಲ್ಲಿ ಬಂದು ಕ್ರೀಡಾ ನಿಮಿತ್ತ ಸಂಚಾರವನ್ನು ಮಾಡುವುದರಿಂದ ಪೇಶ್ಯಾನಿಮಿತ್ತರಾಗಿ ವಾರ ಶಬ್ದವು, ತೀರ ನಿಮಿತ್ತವಾಗಿ ಕೂಲಾ ಎಂಬ ಶಬ್ದವು ಪ್ರಾಪ್ತವಾದ್ದರಿಂದ ವಾರಕೂಲವೆಂಬ ಹೆಸರು ಆಗಿವೆ. ಹನ್ನೆರಡು ಮಂದಿ ಅಪ್ಸರ ಸ್ತ್ರೀಯರು ನಿಮಿತ್ತ ಕರಸಿವಾರಕನ್ಯಾಪುರವೆಂಬ ಹೆಸರು. ಈ ಹೆಸರು ಎರಡು ರೀತಿಯಲ್ಲಿ ಬಂದಂತಾಯಿತು.

ಕರ್ನಾಟಕದ ಕೈಫಿಯತ್ತು: ಕಲಬುರ್ಗಿ ·ಎಂ·ಎಂ· ಪುಟ:340.

5) <u>'ಆಸಂದಿ' ಎಂಬ ನಾಮವು</u>(ಕೈಫಿಯತ್ತು ತಾಲೂಕೆ ಅಜಂಪುರ):

ಆ ಕಾಲದಲ್ಲಿ ಈ ಪಟ್ಟಣದ ಪಶ್ಚಿಮ ದಿಕ್ಕಿನ ಬೀದಿಯಲ್ಲಿ ರಂಗನಾಥ ದೇವರು ಇದ್ದಲ್ಲಿ, ಈ ನಂದಿ ಒಂದು ಮಾತ್ರ ಬಿಟ್ಟು, ಮಿಕ್ಕೆ ಪಟ್ಟಣವು ಕೋಣ(ಬ) ಗೊಂಡನ ಪಟ್ಟು ಮನೆ ಜನಾ ಮುಂತಾದ ವೃಕ್ಷಗಳು ಸಹಾ ನಾಶಹೊಂದಿದವು. ಯೀ ರಂಗನಾಥನ ಗುಡಿ ಸಂದು ಮಂದು ಮಳೆದಿಂದ ಆ ಭಾಗಾ ಆಸಂದಿಯೆಂಬ ಹೆಸರು ಆಯಿತು.

ಕರ್ನಾಟಕದ ಕೈಫಿಯತ್ತುಗಳು: ಕಲಬುರ್ಗಿ ·ಎಂ·ಎಂ· ಪುಟ:39.

6. ಕಾಯರ ಮಂಜದ ಅರಮನೆ :(ತುಳು ಅರಸುಗಳ ಕೈಫಿಯತ್ತು)

[1]ಆ ಬಳಿಕಾ ದೊಂಬ್ಯದಬೆಟ್ಟಿನ ತಿಮ್ಮಪ್ಪ ಬಂಗಯೆಂಬವನು ಪ್ರಬಲಸ್ಥನಾಗಿ ಯಿರುತ್ತಿದ್ದರಿಂದ ಅವನ್ನು ಮುರಡು ಸರ್ವಸ್ವವನ್ನು ಅಪಹರಿಸಿ ಅವ ಅನುಭವಿಸುವಂಥ ಗ್ರಾಮವನ್ನು ತಮ್ಮ ಅಧೀನ ಮಾಡಿಕೊಂಡರು. ಆ ಬಳಿಕ ಯಾದರ ಬಲ್ಲಾಳ ಯೆಂಬವನು ಯಿವರ ಮೇಲೆ ಮುರಿತು ನಿಂತಿದ್ದರಿಂದ ಅವನನ್ನು ಮುರಿದು, ಅವನ ಅರ್ಧಸ್ವವನ್ನು ಅಪಹರಿಸಿ ಅವ, ಅನುಭವಿಸುವಂತಾ ಗ್ರಾಮವನ್ನು ತಮ್ಮಾಧೀನ ಮಾಡಿಕೊಂಡು ಕಬರಗಟ್ಟೆ ಹತ್ತರ ಬಲವಂತವಾಗಿ ಅರಮನೆ ಕಟ್ಟಿ ಯಿರುತ್ತ, ಯೀ ವರ್ತಮಾನಗಳಿಗೆ ಉಳ್ಳಾಲಕ್ಕೆ ತಮ್ಮ ಮಾವನಾದ ತಿಮ್ಮರಾಯ ತುಳುರ ಬಳಿಗೆ ಹೇಳಿ ಕಳುಹಿಸಿಕೊಡುತ್ತಾ, ಮನುಷ್ಯರ ಕಳುಹಿಸುತ್ತಾ ಯಿರುತ್ತಿದ್ದರಿಂದ, ಯೀ ಯುದ್ಧದ ಮಾರ್ಗದಲ್ಲಿ ಹೋಗಿ ಬರುವಂತಾ ಮನುಷ್ಯರಿಗೆ ಮಚಾರ(ವಿಚಾರ)ಲ್ಲು ಆ ಶೀಮೆ ಅನುಭವಿಸಿಕೊಂಡು ಇರುವ ಪ್ರಿಯ ತಿಮ್ಮಪ್ಪ ಅರಸ ಯೆಂಬವನ್ನು ತೊಂದರು ಮಾಡುತ್ತಾ ಇರುವ ಕಾರಣ, ಉಳ್ಳಾಲದಿಂದಾ ತಿಮ್ಮರಾಯ ತುಳುರು ಮಂದಿ ಮಕ್ಕಳು ಕಟ್ಟಿಕೊಂಡು ಬಂದರು, ಯೀ ಪುತ್ತಿಗೆ ಕಡೆಯಿಂದ ಅಳಿಯ ವರದಪ್ಪನವರು ಮಂದಿ ಮಕ್ಕಳು ಕಟ್ಟಿಕೊಂಡು ಹೋಗಿ, ಉಭಯತರು ಒಟ್ಟಾಗಿ ವಿಚಾರದಲ್ಲಿ ತಿಮ್ಮಪ್ಪ ಅರಸನ ಹಿಡಿದು, ಅವನ ಅರಮನೆಯಲ್ಲಾ ಸೂರೆ ಸಂಗೆ ಮಾಡಿ, ವಿಚಾರ ಮಾಗಿ ತಮ್ಮ ಸ್ವಾಧೀನ ಮಾಡಿಕೊಂಡು, ಮುಂದೆ ಮೊತ್ತಿ ಹೋಗಿ ಮಳಲ ಸೀಮೆಯನ್ನು ತಮ್ಮ ಸ್ವಾಧೀನ ಮಾಡಿಕೊಂಡು, ಮಾವ ಅಳಿಯ ಸಹಾ ಪುತ್ತಿಗೆಯಲ್ಲು ಕಟ್ಟಿದ ಅರಮನೇಗೆ ಪುನಹಾ ಬಂದು, ಅರಮನೆ ನೋಡಿ, ಯಿ ಅರಮನೆಗೆ ಕಾಸರಕನ ಮರ ಕಡದ ಸ್ಥಳದ ಬಳಿಯಲ್ಲಿ ಕಟ್ಟಿದ ಕಾರಣಾ ಕಾಯರ ಮಂಜದ ಅರಮನೆಯೆಂತ ಹೆಸರು ಯಿಟ್ಟ.'

[1] 'ಕರ್ನಾಟಕದ ಕೈಫಿಯತ್ತುಗಳು' : ಎಂ. ಎಂ. ಕಲಬುರ್ಗಿ ಪುಟ 284

ಪರಾಮರ್ಶನ ಗ್ರಂಥಗಳು

1. ಕನ್ನಡ

1.1 : ಕಲಬುರ್ಗಿ.ಎಂ.ಎಂ.(ಸಂ) 1994: ಕರ್ನಾಟಕದ ಕೈಫಿಯತ್ತುಗಳು, ಹಂಪಿ: ಕನ್ನಡ ವಿಶ್ವವಿದ್ಯಾಲಯ.

1.2 : ಕುಶಾಲಪ್ಪಗೌಡ.ಕೆ., ಚಿನ್ನಪ್ಪಗೌಡ.ಕೆ.: 1983 : ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು, ಪೆರ್ಲ: ಗುರುಕುಲ ಪ್ರಿಂಟರ್ಸ್.

1.3 : ಗೋಪಾಲ ಕೃಷ್ಣ.ಪಿ.: 1987 : ಸ್ಥಳನಾಮ ಅಧ್ಯಯನಗಳು; ಬೆಂಗಳೂರು:ಲಕ್ಷ್ಮಿ ಮುದ್ರಣಾಲಯ.

1.4 : ಚಿದಾನಂದ ಮೂರ್ತಿ.ಎಂ: 1981: ವಾಗರ್ಥ, ಬಾಪ್ಕೋ: ಬೆಂಗಳೂರು.

1.5 : ದೇಜಗೌ: 1990, ಸ್ಥಳನಾಮ ಪ್ರಸಂಗ, ಮೈಸೂರು: ಸಹ್ಯಾದ್ರಿ ಪ್ರಕಾಶನ.

1.6 : ಪುರುಷೋತ್ತಮ ಬಿಳಿಮಲೆ:1985, ಮುಕೆಂಜ ಕೈಫಿಯತ್ತುಗಳು, ಪುತ್ತೂರು:ಪ್ರೆಸ್ ಕಾಂಪ್ಲೆಕ್ಸ್.

1.7 : ರಘುಪತಿ ಭಟ್ಟ ಕೆಮ್ತೂರು: 1979, ತುಳುನಾಡಿನ ಸ್ಥಳನಾಮಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.

1.8 : ರಘುಪತಿ ಭಟ್ಟ ಕೆಮ್ತೂರು: 1989, ಹೆಸರಿನಲ್ಲೇನಿದೆ, ಬೆಂಗಳೂರು: ಚೇತನಾ ಪ್ರಿಂಟರ್ಸ್.

1.9 : ಲಕ್ಷ್ಮಣ ತೆಲಗಾವಿ(ಸಂ) 1991: ಸಂಶೋಧನಾ(ಚಿದಾನಂದ ಮೂರ್ತಿಅಭಿನಂದನಾ ಗ್ರಂಥ), ಬೆಂಗಳೂರು: ಲಕ್ಷ್ಮಿ ಮುದ್ರಣಾಲಯ.

1.10: ಸುಬ್ರಹ್ಮಣ್ಯ ರೈ.ಎ : 1994, ದ.ಕ.ಜಿಲ್ಲೆಯ ಐತಿಹ್ಯಗಳು; ಬಂಟ್ವಾಳ: ಚೇತನಾ ಪ್ರಿಂಟರ್ಸ್.

2- ENGLISH

2.1 : Madhav N. Katti(ed):1980,Studies in Indian Place names (vol-1):Mysore:Geetha Book House .

2.2 : Madhav N.Katti(ed):1981,Studies in Indian Place names (vol-2):Mysore:Geetha Book House.

2.3 : Madhav N.Katti (ed):1982,Studies in Indian Place names (vol-3);Mysore: Geetha Book House

2.4 : Madhav N.Katti(ed):1984,Studies in Indian Place names (vol-4):Mysore Geetha Book House

2.5 : madhav N.Katti (ed):1984,Studies in Indian Place names (vol-9): Mysore Geetha Book House

2.6 : Madhav N.Katti(ed): 1989,Studies in Indian Place names (vol-10):Mysore Geetha book house

2.7 : Madhav N.Katti(ed):1990, Studies in Indian Place names (vol-11),Mysore Geetha Book House

2.8 : Madhav N.Katti(ed):1991, Studies in Indian Place names (vol-12), Mysore:Geetha Book House

2.9 : Raghupathi Kemtur:1989,A Glossary of Place name elements in Tulu and Kannada,Udupi: Nava Yuga Press.

2.10: Sampath.M.D.(ed):1992,Studies in Indian Place names (Vol-13),Mysore Geetha Book House

2.11: tewari S.P(ed):1984, Studies in Indian Place names (Vol-6),Mysore:Geetha Book House .

2.12: tewari S.P(ed),1986,Studies in Indian Place names(Vol-6&7),Mysore,Geetha Book House